# ಹುಲಿಮನೆ

( ರಂಗಕರ್ಮಿ ಹುಲಿಮನೆ ಸೀತಾರಾಮ ಶಾಸ್ತ್ರಿಗಳ ಜೀವನ ಚರಿತ್ರೆ )



ಆರ್. ಪಿ. ಹೆಗಡೆ

ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು

# ಹುಲಿಮನೆ

(ರಂಗಕರ್ಮಿ ಹುಲಿಮನೆ ಸೀತಾರಾಮಶಾಸ್ತ್ರಿಗಳ ಜೀವನ ಚರಿತ್ರೆ)

ಲೇಖಕರು

**ಆರ್.ಪಿ. ಹೆಗಡೆ**


**ಕರ್ನಾಟಕ ನಾಟಕ ಅಕಾಡೆಮಿ**

"ಚಾಲುಕ್ಯ" - ಕನ್ನಡ ಭವನ, ಜೆ. ಸಿ. ರಸ್ತೆ,
ಬೆಂಗಳೂರು-೫೬೦ ೦೦೨

**HULIMANE :** A Biography of Sitharamashathri by R.P. Hegde, Published by H. Shankarappa, Registrar, Karnataka Nataka Academy, Kannada Bhavana, J.C. Road, Bangalore-02, Phone : 22237484

| | | |
|---|---|---|
| ಮೊದಲ ಮುದ್ರಣ | : | 2006 |
| © ಹಕ್ಕುಗಳು | : | ಲೇಖಕರದು |
| ಪುಟಗಳು | : | viii + 60 |
| ಬೆಲೆ | : | ರೂ. 40/- |
| ಮುಖಪುಟ ವಿನ್ಯಾಸ | : | ಕೃಷ್ಣರಾಯಚೂರು |
| ಪ್ರಕಾಶಕರು | : | ಎಚ್. ಶಂಕರಪ್ಪ<br>ರಿಜಿಸ್ಟ್ರಾರ್,<br>ಕರ್ನಾಟಕ ನಾಟಕ ಅಕಾಡೆಮಿ |

Printers :
**Sathyasri Printers Pvt. Ltd.,**
No. 164, 5th Main Road, Chamarajapet
Bangalore-560 018. Telepone: **26525736**

# ಮೊದಲ ಮಾತು

'ಕನ್ನಡ ರಂಗಭೂಮಿಯ ಹುಲಿ'ಯೆಂದೇ ಹೆಸರಾಗಿದ್ದ ಹುಲಿಮನೆ ಸೀತಾರಾಮಶಾಸ್ತ್ರಿ ಅವರು ನಿಧನರಾಗಿ 20 ವರ್ಷಗಳು ಸಂದಿವೆ. ಕಂಪನಿ ನಾಟಕಗಳು ಜನಪ್ರಿಯವಾಗಿದ್ದ ಕಾಲದಲ್ಲಿ ಸೀತಾರಾಮಶಾಸ್ತ್ರಿಗಳು ಸ್ವಂತ ನಾಟಕ ಕಂಪನಿ ಕಟ್ಟಿ ನಾಡಿನಾದ್ಯಂತ ಜಯಭೇರಿ ಹೊಡೆದಿದ್ದರು. ತಮ್ಮ ವಿಶಿಷ್ಟ ನಾಟಕಗಳ ಮೂಲಕ, ಪಾತ್ರಗಳ ಮೂಲಕ ತುಂಬ ಹೆಸರು ಮಾಡಿದ್ದ ಶಾಸ್ತ್ರಿಗಳು ಜೀವನದುದ್ದಕ್ಕೂ ಹೋರಾಟವನ್ನೇ ಮಾಡಿದರು. ಬದುಕು ಒಡ್ಡಿದ ಸವಾಲುಗಳನ್ನು ಎದುರಿಸಲು ಇನ್ನಿಲ್ಲದ ಸಾಹಸ ಮಾಡಿದರು. ಯಶಸ್ವಿಯಾದಂತೆಲ್ಲ ಸೋಲಿನ ಕಡೆ ಜಾರುತ್ತಿದ್ದ ಅವರಿಗೆ ಅದೃಷ್ಟವೇ ಕೈಕೊಡುತ್ತಿತ್ತು. ಇಂಥ ಬಿಕ್ಕಟ್ಟುಗಳ ನಡುವೆಯೂ ಅವರು ಮಾಡಿದ ಸಾಧನೆ ಸಣ್ಣದಲ್ಲ. ಸಮಕಾಲೀನ ರಂಗಭೂಮಿಯ ಪ್ರಮುಖ ನಟರಲ್ಲೊಬ್ಬರಾಗಿ ಕಂಪನಿಯ ಮಾಲೀಕರಾಗಿ ಅವರು ಪಡೆದ ಅನುಭವಗಳು ಅಪಾರ. ಅವರ ಜೀವನದ ವಿವರಗಳಲ್ಲಿ ವ್ಯಕ್ತಿಗತ ಬದುಕಿನ ಏಳುಬೀಳುಗಳಲ್ಲದೆ, ಕಲಾ ಜೀವನದ ಸ್ಥಿತಿಗತಿಗಳೂ ದಾಖಲಾಗಿವೆ. ಒಂದು ರೀತಿಯಲ್ಲಿ ಅವರ ಸಮಕಾಲೀನ ರಂಗಭೂಮಿಯ ಇತಿಹಾಸವೂ ಇದರಿಂದ ತೆರೆದುಕೊಳ್ಳುತ್ತದೆ. ಕಂಪನಿಗಳ ಒಳ ರಾಜಕೀಯಗಳು, ಮೇಲಾಟಗಳು, ಆರ್ಥಿಕ ದುಸ್ಥಿತಿಯ ನಡುವೆಯೂ ಕಂಪನಿ ಉಳಿಸಲು ನಡೆಸುತ್ತಿದ್ದ ಹೋರಾಟಗಳು, ಕಲಾವಿದರ ಸಾಂಘಿಕ ವ್ಯವಸ್ಥೆ, ಜನತೆಯ ಪ್ರೋತ್ಸಾಹ, ಪ್ರತಿಕ್ರಿಯೆ ಹೀಗೆ ಹಲವಾರು ಸಂಗತಿಗಳು ಅವರ ಜೀವನದ ವಿವರಗಳೊಂದಿಗೆ ಹೆಣೆದುಕೊಂಡಿವೆ. ಅತ್ಯಂತ ಹಿಂದುಳಿದ ಮಲೆನಾಡಿನ ಪರಿಸರದಲ್ಲಿ ಹುಟ್ಟಿದ ಶಾಸ್ತ್ರಿಗಳ ಕಲೆಯ ಬಗೆಗಿನ ಪ್ರೀತಿ ಹಾಗೂ ಅವರ ಜೀವನ ಪ್ರೀತಿ ಎರಡೂ ಗಮನಾರ್ಹ. ಕನ್ನಡ ರಂಗಭೂಮಿಯ ಹಿರಿಯ ನಟರಾಗಿ ಮಿಂಚಿದ ಅವರ ಬದುಕಿನ ಅಂತಿಮ ದಿನಗಳು ಅಷ್ಟೇನೂ ಸುಖಕರವಾಗಿರಲಿಲ್ಲ. ಇದು ಅವರೊಬ್ಬರ ಜೀವನದ ಕತೆಯಲ್ಲ. ಜೀವನದ ಕೊನೆಯವರೆವಿಗೂ ಬಡತನದಲ್ಲಿ ಬೇಯುತ್ತಲೇ ಕಳೆಯುವುದು ಹೆಚ್ಚಿನ ಕಲಾವಿದರ ಪರಿಸ್ಥಿತಿ. ದಿ. ಸೀತಾರಾಮ ಶಾಸ್ತ್ರಿಯವರೂ ಇದಕ್ಕೆ ಹೊರತಾದವರಲ್ಲ. ಹಿಂದೆ ಸುಧಾ ಪತ್ರಿಕೆಯಲ್ಲಿ ಶಾಸ್ತ್ರಿಗಳ ಆತ್ಮಕಥನವನ್ನು ಧಾರವಾಹಿಯಾಗಿ ಜಿ.ಎಚ್. ಭಟ್ಟ ಅವರು ನಿರೂಪಿಸಿದ್ದರು. ನಾನು ಆ ಬರಹದ ಕಂತುಗಳ ನೆರವನ್ನು ಧಾರಾಳವಾಗಿ ಪಡೆದಿದ್ದೇನೆ. ಮತ್ತು ಅವರಿಗೆ ಋಣಿಯಾಗಿದ್ದೇನೆ. ಶಾಸ್ತ್ರಿಗಳ ಬಂಧು ಶ್ರೀಧರ ಹೆಗಡೆ, ಗಣಪತಿ ಹೆಗಡೆ ಹಾಗೂ ಶಾಸ್ತ್ರಿಯವರ ಸಮಕಾಲೀನ ಸ್ಥಳೀಯ ವ್ಯಕ್ತಿಗಳ ಮೂಲಕ ಅನೇಕ ಮಾಹಿತಿಗಳನ್ನು ಕಲೆ ಹಾಕಿ ಈ ಜೀವನ ಚರಿತ್ರೆಯನ್ನು ರೂಪಿಸಿದ್ದೇನೆ. ಮತ್ತು ಈ ಎಲ್ಲರಿಗೂ ನಾನು ಕೃತಜ್ಞ.

ದಿ. ಶಾಸ್ತ್ರಿಯವರ ಹೆಸರನ್ನು ಶಾಶ್ವತವಾಗಿ ಉಳಿಸುವ ಕೆಲಸವನ್ನು ಸಮಾಜ ಮಾಡಬೇಕಾಗಿತ್ತು. ಸಿದ್ದಾಪುರದಲ್ಲಿ ದಿ. ಸೀತಾರಾಮ ಶಾಸ್ತ್ರಿ ಹುಲಿಮನೆ ಸ್ಮಾರಕ ಪ್ರತಿಷ್ಠಾನ

ಎಂಬ ಸಂಸ್ಥೆ ನೋಂದಣಿಗೊಂಡು ನಾಟಕ ತರಬೇತಿ ಹಾಗೂ ಪ್ರದರ್ಶನ ನೀಡುತ್ತಿದೆ. ಇದಕ್ಕೆ ಸಾರ್ವಜನಿಕ ಹಾಗೂ ಸರಕಾರದ ಸಹಾಯ ಹಸ್ತದ ಅವಶ್ಯಕತೆ ತುಂಬಾ ಇದೆ. ದಿ. ಶಾಸ್ತ್ರಿಯವರ ಜನ್ಮಶತಮಾನೋತ್ಸವದ ಈ ವರ್ಷ ಕರ್ನಾಟಕ ರಾಜ್ಯ ನಾಟಕ ಅಕಾಡೆಮಿಯ ಅಧ್ಯಕ್ಷರಾದ ಮಾನ್ಯ ಕಪ್ಪಣ್ಣ ಅವರು ದಿ. ಶಾಸ್ತ್ರಿಯವರ ನೆನಪಿನಲ್ಲಿ ವಿಚಾರ ಸಂಕಿರಣ - ನಾಟಕೋತ್ಸವಗಳನ್ನು ಹಮ್ಮಿಕೊಂಡು ಅದೇ ಸಂದರ್ಭದಲ್ಲಿ ಈ ಪುಸ್ತಕವನ್ನು ಅಕಾಡೆಮಿಯಿಂದ ಪ್ರಕಟಿಸುವ ಔದಾರ್ಯ ತೋರಿರುವುದನ್ನು ನಾನು ಕೃತಜ್ಞತೆಯಿಂದ ನೆನೆಯುತ್ತೇನೆ. ಈ ಪುಸ್ತಕ ಪ್ರಕಟಣೆಯ ಬಗ್ಗೆ ತಮ್ಮ ಆಸಕ್ತಿ, ಕಾಳಜಿ ತೋರಿಸಿ ಸಹಾಯ-ಸಹಕಾರ ನೀಡುತ್ತಿರುವ ರಂಗಾಯಣದ, ರಂಗ ಸಮಾಜದ ಸದಸ್ಯ ಗಣೇಶ ಅಮೀನಗಡ ಅವರಿಗೂ ನಾನು ಋಣಿ.

ಈ ಹೊತ್ತಿಗೆಯನ್ನು ಪ್ರಕಟಿಸುತ್ತಿರುವ ಕರ್ನಾಟಕ ನಾಟಕ ಅಕಾಡೆಮಿ,

ಮುಖಪುಟ ವಿನ್ಯಾಸ ಮಾಡಿದ ಕೃಷ್ಣರಾಯಚೂರು

ಅಕ್ಷರ ಸಂಯೋಜನೆ ಮಾಡಿದ ಪ್ರಸಾಧನ್ ಕಂಪ್ಯೂಟರ್ಸ್,

ಚೆನ್ನಾಗಿ ಮುದ್ರಿಸಿದ ಸತ್ಯಶ್ರೀ ಪ್ರಿಂಟರ್ಸ್ ಪ್ರೈ. ಲಿ.,

ಅವರಿಗೆ ನನ್ನ ವಿಶ್ವಾಸಪೂರ್ವಕ ನೆನಕೆಗಳು ಸಲ್ಲುತ್ತವೆ.

ಆರ್. ಪಿ. ಹೆಗಡೆ

# ಪುಸ್ತಕದ ಬಗ್ಗೆ

ಒಂದು ದಿನ ನಾಟಕ ಅಕಾಡೆಮಿಯಲ್ಲಿ ಕೂತಿದ್ದಾಗ ಗೆಳೆಯ ಗಣೇಶ ಅಮೀನಗಡ ಫೋನ್ ಮಾಡಿದರು. ಮೊದಲು ಕುಶಲ ಸಮಾಚಾರ. ನಂತರ ಈ ವರ್ಷ ಹುಲಿಮನೆ ಸೀತಾರಾಮ ಶಾಸ್ತ್ರಿಗಳ ಜನ್ಮಶತಾಬ್ದದ ವರ್ಷ; ಅವರ ಕುರಿತು ಪುಸ್ತಕವನ್ನು ಅಕಾಡೆಮಿಯಿಂದ ಪ್ರಕಟಿಸಲು ಸಾಧ್ಯವೆ ಎಂದು ಕೇಳಿದಾಗ, ತಕ್ಷಣ ಒಪ್ಪಿಕೊಂಡೆ. ಏಕೆಂದರೆ ರಂಗವಿಮರ್ಶಕರಾದ ಗಣೇಶ ಅಮೀನಗಡ ಶಿಫಾರಸು ಮಾಡಿದ ಪುಸ್ತಕ ಎಂದರೆ ಪ್ರಕಟಣೆಗೆ ಅರ್ಹವಾಗಿರುತ್ತದೆ ಎಂಬುದೇ ಹಾಗೆ ಒಪ್ಪಿಕೊಳ್ಳಲು ಕಾರಣ.

ನಾಟಕೋತ್ಸವದ ಅಂಗವಾಗಿ ಮಂಗಳೂರಿಗೆ ಹೋದಾಗ ಕಾಣಲು ಬರ್ತೀನಂತ ಗಣೇಶ ಅಮೀನಗಡ ಫೋನ್ ಮಾಡಿದಾಗ ಖುಷಿಯಾದೆ. ಮಂಗಳೂರಿನ ಸ್ವೀಟ್ಸ್ ಸಮೇತ ಬರುತ್ತಾರೆಂದು ಕಾಯುತ್ತಾ ಕೂತೆ. ಆಗ ಅವರು ಸ್ವೀಟ್ಸ್ ಬದಲು ಸ್ಕ್ರಿಪ್ಟ್ ತಂದಿದ್ದರು. ಜೊತೆಗೆ 'ನಿಮ್ಮೊಂದಿಗೆ ಅವತ್ತು ಮಾತನಾಡಿದಂತೆ ಹುಲಿಮನೆ ಸೀತಾರಾಮ ಶಾಸ್ತ್ರಿಗಳ ಡಿ.ಟಿ.ಪಿ. ಆಗಿರುವ ಕರಡು ಪ್ರತಿ' ಅಂದಾಗ ನಾಚಿಕೆ ಮತ್ತು ಸಂತೋಷ ಒಟ್ಟಿಗೆ ಆಯಿತು. ಏಕೆಂದರೆ ಪುಸ್ತಕ ಪ್ರಕಟಿಸಲು ಒಪ್ಪಿದ್ದರೂ ಆ ಬಗ್ಗೆ ನಾನು ಏನೂ ಕ್ರಮ ಕೈಗೊಂಡಿರಲಿಲ್ಲ. ಅದಕ್ಕಾಗಿ ನಾಚಿಕೆ ಪಟ್ಟೆ, ಸಂತೋಷ ಯಾಕೆಂದರೆ ತಾವೇ ಸೂಚಿಸಿದಂತೆ ಈ ಪುಸ್ತಕ ಸಿದ್ಧಪಡಿಸಿದ್ದಾರೆ ಎಂಬ ಕಾರಣಕ್ಕೆ. ಅಷ್ಟೇ ಅಲ್ಲ ಅವರೇ ಬರೆದ ಕೃತಿಯನ್ನು ಪ್ರಕಟಣೆಗೆ ತಂದಿದ್ದಾರೆಂದು ಭಾವಿಸಿದ್ದೆ. ಆದರೆ ಅದು ಆರ್.ಪಿ. ಹೆಗಡೆಯವರು ಬರೆದ ಕೃತಿಯಾಗಿದ್ದನ್ನು ಕಂಡು ಅಮೀನಗಡರ ಬಗ್ಗೆ ಹೆಮ್ಮೆ ಪಟ್ಟೆ. ಯಾಕೆಂದರೆ ಸೀತಾರಾಮ ಶಾಸ್ತ್ರಿಗಳಿಗೆ ಯಾವ ರೀತಿಯಲ್ಲೂ ಸಂಬಂಧವಾಗದ, ಆದರೆ ರಂಗಭೂಮಿ ಕುರಿತ ಕೃತಿಯೆನ್ನುವ ಕಾರಣಕ್ಕೆ, ಅದರ ಪ್ರಕಟಣೆಗೆ ಅವರು ಪ್ರಯತ್ನಿಸಿದ್ದಕ್ಕೆ ಅವರ ಬಗ್ಗೆ ಗೌರವ ಮೂಡಿಬಂತು.

ನಂತರ ಮೈಸೂರಲ್ಲಿ ಸೀತಾರಾಮ ಶಾಸ್ತ್ರಿಗಳ ಮೊಮ್ಮಗ ರವೀಂದ್ರ ಭಟ್ ಐನಕೈ ಭೇಟಿಯಾದರು. ಆಮೇಲೆ ಗಣಪತಿ ಹೆಗಡೆ, ಅವರ ತಂದೆ ಶ್ರೀಧರ ಹೆಗಡೆ ಮತ್ತು ರವೀಂದ್ರ ಭಟ್ ಎಲ್ಲ ಸೇರಿ ಪುಸ್ತಕ ಬಿಡುಗಡೆಯ ಕುರಿತು ಆಲೋಚಿಸಿದೆವು. ಈಗ ಹುಲಿಮನೆ ಸೀತಾರಾಮ ಶಾಸ್ತ್ರಿಗಳ ಕುರಿತು ಪುಸ್ತಕ ನಿಮ್ಮ ಕೈಯಲ್ಲಿದೆ. ಹುಲಿಮನೆ ಸೀತಾರಾಮ ಶಾಸ್ತ್ರಿಗಳ ಕುರಿತು ಪುಸ್ತಕ ಪ್ರಕಟಣೆಗೆ ತಕ್ಷಣ ಒಪ್ಪಲು ಕಾರಣ, ಸರ್ಕಾರ ಅಥವಾ ಅಕಾಡೆಮಿ ಪ್ರಖ್ಯಾತರ ಕೃತಿಗಳನ್ನು ಮಾತ್ರ ಪ್ರಕಟಿಸಲು ಬದ್ಧವಾಗುತ್ತದೆ, ಆದರೆ ಇನ್ನಿತರರ ಬಗ್ಗೆ ಅಷ್ಟು ಉತ್ಸಾಹ ತೋರುವುದಿಲ್ಲ. ನಮ್ಮ

ಅಕಾಡೆಮಿ ಈಗಾಗಲೇ ಮಳವಳ್ಳಿ ಸುಂದರಮ್ಮ ಅವರ ಬಗ್ಗೆ ಪುಸ್ತಕ ತಂದಿದೆ. ಇದಾದ ಮೇಲೆ ಈ ಪುಸ್ತಕ ಸರಳ ಹಾಗೂ ನೇರವಾಗಿ ಓದುಗರನ್ನು ತಲುಪುವ ಬರಹ. ನಿಜಕ್ಕೂ ಚೆನ್ನಾಗಿದೆ. ಇದರ ಪ್ರಕಟಣೆಗೆ ಅನುಮತಿ ನೀಡಿದ ಆರ್.ಪಿ. ಹೆಗಡೆ ಅವರಿಗೆ, ಸಹಕರಿಸಿದ ಶ್ರೀ ಗಣೇಶ ಅಮೀನಗಡ ಮತ್ತು ಶ್ರೀ ರವೀಂದ್ರ ಭಟ್ ಅವರಿಗೆ ವಂದನೆಗಳು. ಈ ಪುಸ್ತಕದ ನಿರೂಪಣಾ ಜವಾಬ್ದಾರಿ ಹೊತ್ತ ಶ್ರೀ ಶಂಕರಪ್ಪ, ರಿಜಿಸ್ಟ್ರಾರ್ ಅವರಿಗೆ ಹಾಗೂ ಇದನ್ನು ಡಿ.ಟಿ.ಪಿ ಮಾಡಿದ ಮಂಗಳೂರಿನ ಪ್ರಸಾಧನ ಕಂಪ್ಯೂಟರ್ಸ್ ಅವರಿಗೆ, ಅಂದವಾಗಿ ಮುದ್ರಿಸಿದ ಬೆಂಗಳೂರಿನ ಸತ್ಯಶ್ರೀ ಪ್ರಿಂಟರ್ಸ್ ಅವರಿಗೆ ಕೃತಜ್ಞತೆಗಳು.

**ಶ್ರೀನಿವಾಸ ಜಿ. ಕಪ್ಪಣ್ಣ**<br>
ಅಧ್ಯಕ್ಷರು<br>
ಕರ್ನಾಟಕ ನಾಟಕ ಅಕಾಡೆಮಿ

## ಹುಲಿಮನೆ ಸೀತಾರಾಮ ಶಾಸ್ತ್ರಿ ವಿರಚಿತ ನಾಟಕಗಳು

| | |
|---|---|
| 1. ಟಿಪ್ಪು ಸುಲ್ತಾನ | (ಐತಿಹಾಸಿಕ) |
| 2. ಪನ್ನಾದಾಸಿ | (ಐತಿಹಾಸಿಕ) |
| 3. ವರದಕ್ಷಿಣೆ | (ಸಾಮಾಜಿಕ) |
| 4. ನಡುದಾರಿಯಲ್ಲಿ | (ಸಾಮಾಜಿಕ) |
| 5. ಅಡ್ಡಗೋಡೆ | (ಸಾಮಾಜಿಕ) |
| 6. ಮಾಯಾವಿ | (ಸಾಮಾಜಿಕ) |
| 7.ಸಂದೇಹ ಸಾಮ್ರಾಜ್ಯ | (ಸಾಮಾಜಿಕ) |
| 8. ಪುತ್ರಾಪೇಕ್ಷೆ | (ಪ್ರಕಟವಾಗಿದೆ) |
| 9. ನಾಟ್ಯಾಚಾರ್ಯ | |
| 10. ಧರ್ಮ ಸಾಮ್ರಾಜ್ಯ | (ಪೌರಾಣಿಕ) |

## ಪೀಠಿಕೆ

ಕರ್ನಾಟಕದಲ್ಲಿ ನಾಟಕ ರಂಗಭೂಮಿಗೆ ಒಂದು ಸ್ಪಷ್ಟ ಆಕಾರ ಬಂದದ್ದು 1880ರ ಆಚೆ-ಈಚೆ. ಸಂಗೀತನಾಟಕವೆಂದೇ ಹೆಸರಾದ ಆ ಕಾಲದ ನಾಟಕಗಳು ಯಕ್ಷಗಾನ ರಂಗಭೂಮಿಯಿಂದ ಮೊದಲ ಪ್ರೇರಣೆಯನ್ನು ಪಡೆದವು ಎಂದು ಪ್ರತೀತಿ. ಸಂಸ್ಕೃತ ನಾಟಕಗಳು ಹಾಗೂ ಇಂಗ್ಲಿಷ್‌ನ 'ಅಪೇರಾ'ಗಳನ್ನೂ ಬಳಸಿಕೊಂಡದ್ದು ನಿಜ. ಮೊದಲ ದಿವಗಳ ಅನುಕರಣೆಯಿಂದ ಬಿಡಿಸಿಕೊಂಡು ನಾಟಕ ರಂಗಭೂಮಿಯು ಒಂದು ಸ್ವತಂತ್ರರೂಪ ತಾಳಲು ಸಾಧ್ಯವಾದದ್ದು ಆ ಕಾಲದ ಸುಪ್ರಸಿದ್ಧ ನಟರಾದ ವರದಾಚಾರ್ಯರಿಂದ. ಹಿಂದಿನ ಮೈಸೂರು ರಾಜ್ಯದಲ್ಲಿ ವೃತ್ತಿರಂಗಭೂಮಿಯನ್ನು ಜನಪ್ರಿಯಗೊಳಿಸಿದ ಕೀರ್ತಿ ವಿಶೇಷವಾಗಿ ಅವರಿಗೆ ಸಲ್ಲಬೇಕು. ಒಂದು ಗಟ್ಟಿಯಾದ ಪರಂಪರೆಯ ಚೌಕಟ್ಟು ಅವರಿಂದ ಸಿದ್ಧವಾಯಿತು. ವರದಾಚಾರ್ಯರ 'ರತ್ನಾವಳಿ ಥಿಯೇಟ್ರಿಕಲ್ ಕಂಪನಿ', ವೀರಣ್ಣನವರ 'ಗುಬ್ಬಿ ಶ್ರೀ ಚನ್ನಬಸವೇಶ್ವರ ಕೃಪಾ ಪೋಷಿತ ನಾಟಕ ಮಂಡಳಿ', ಸುಬ್ಬಯ್ಯ ನಾಯ್ಡು ಅವರ 'ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಳಿ' ಮತ್ತು ಶ್ರೀ ಚಾಮುಂಡೇಶ್ವರಿ ನಾಟಕ ಸಭಾ' ಮುಂತಾದವುಗಳಲ್ಲದೆ ಮಹಮ್ಮದ್ ಪೀರ್, ಕೆ. ಹಿರಣ್ಣಯ್ಯ ಅವರುಗಳ ಕಂಪನಿಗಳು ವೃತ್ತಿ ರಂಗಭೂಮಿಯನ್ನು ವಿಸ್ತರಿಸಿದವು. ದಕ್ಷಿಣ ಕರ್ನಾಟಕದಲ್ಲಿ ಹೆಸರುವಾಸಿಯಾದವು.

ಇತ್ತ ಉತ್ತರ ಕರ್ನಾಟಕದ ಗದುಗಿನಲ್ಲಿ 1877ರಲ್ಲಿ 'ಶ್ರೀ ವೀರನಾರಾಯಣ ಪ್ರಾಸಾದಿತ ಕೃತಪುರ ನಾಟಕ ಮಂಡಳಿ' ಸಕ್ಕರಿ ಬಾಳಾಚಾರ್ಯ (ಶಾಂತಕವಿ)ರಿಂದ ಸ್ಥಾಪಿತವಾಯಿತು. ಉತ್ತರ ಕರ್ನಾಟಕದ ವೃತ್ತಿರಂಗಭೂಮಿಯಲ್ಲಿ ಕೊಣ್ಣೂರರ 'ಕಾಡಸಿದ್ಧೇಶ್ವರ ಸಂಗೀತ ನಾಟಕ ಮಂಡಳಿ', ವಾಮನರಾವ್ ಮಾಸ್ತರರ ' ವಿಶ್ವ ಗುಣಾದರ್ಶ ನಾಟಕ ಮಂಡಳಿ', ಶಿರಹಟ್ಟಿ ವೆಂಕೋಬರಾಯರ 'ಮಹಾಲಕ್ಷ್ಮೀ ಪ್ರಾಸಾದಿತ ನಾಟಕ ಮಂಡಳಿ', ಹಲಗೇರಿ ಬಟ್ಟೆಪ್ಪನವರ 'ಹಾಲಸಿದ್ಧೇಶ್ವರ ಪ್ರಾಸಾದಿತ

ಸಂಗೀತ ನಾಟಕ ಸಭಾ', ಗರುಡ ಸದಾಶಿವರಾಯರ 'ದತ್ತಾತ್ರೇಯ ನಾಟಕ ಮಂಡಳಿ', ಏಣಗಿ ಬಾಳಪ್ಪನವರ 'ಕಲಾವೈಭವ ನಾಟಕ ಮಂಡಳಿ' ಮುಂತಾದವುಗಳು ಪ್ರಸಿದ್ಧವಾಗಿದ್ದವು.

ವರದಾಚಾರ್ಯರು, ವೀರಣ್ಣನವರು, ಮಹಮ್ಮದ ಪೀರ್ ಸಾಹೇಬರು ಮುಂತಾದವರಂತೆಯೇ ಗರುಡ ಸದಾಶಿವರಾಯರು ಆ ಕಾಲದ ವೃತ್ತಿ ರಂಗಭೂಮಿಯ ಸುಪ್ರಸಿದ್ಧ ನಟರಾಗಿದ್ದುದು ಮಾತ್ರವಲ್ಲ, ತಮ್ಮ ಕಂಪನಿಯ ಮೂಲಕ ಹೊಸ ಹೊಸ ಪ್ರತಿಭಾವಂತರನ್ನು ಗುರುತಿಸಿ ತರಬೇತುಗೊಳಿಸಿ, ಶ್ರೇಷ್ಠ ಕಲಾವಿದರನ್ನಾಗಿ ರೂಪಿಸಿದ ಕೀರ್ತಿವಂತರು. ಗರುಡರ ಗರಡಿಯಲ್ಲಿ ಪಳಗಿ ಹದಗೊಂಡು ರಂಗಭೂಮಿಯ ಉತ್ತಮ ನಟರಾಗಿ, ಅನಂತರ ಸ್ವತಂತ್ರ ನಾಟಕ ಕಂಪನಿಯೊಂದನ್ನು ಕಟ್ಟಿ ಕರ್ನಾಟಕ ಉದ್ದಗಲಕ್ಕೂ ಮೆರೆಯಿಸಿ ಜಯಭೇರಿ ಬಾರಿಸಿದ ಹುಲಿಮನೆ ಸೀತಾರಾಮಶಾಸ್ತ್ರೀ ಅವರ ಜೀವನದ ಸಾಹಸ ಗಾಥೆಯೇ ಈ ಕಿರುಪುಸ್ತಕದ ವಸ್ತು. ಅನೇಕ ಬಿಕ್ಕಟ್ಟು - ಸಮಸ್ಯೆಗಳನ್ನು ಧೈರ್ಯದಿಂದ ಎದುರಿಸುತ್ತ, ರಂಗಭೂಮಿಯ ಚರಿತ್ರೆಯಲ್ಲಿ ಮಹತ್ವದ ಸ್ಥಾನ ಪಡೆಯುವಷ್ಟು ಎತ್ತರಕ್ಕೇರಿದ ಅವರ ಬದುಕಿನ ಸಾಧನೆ ಸ್ಫೂರ್ತಿದಾಯಕವಾದದ್ದು.

## ನಿಸರ್ಗದ ತೊಟ್ಟಿಲಿನಲ್ಲಿ

ಉತ್ತರ ಕನ್ನಡ ಜಿಲ್ಲೆ ಸಮೃದ್ಧ ನಿಸರ್ಗದ ಬೀಡು. ಸಹ್ಯಾದ್ರಿ ಶ್ರೇಣಿಯಲ್ಲಿ ಬರುವ ಮಲೆನಾಡು. ಸುತ್ತ ಆವರಿಸಿ ನಿಂತ ದಟ್ಟ ಕಾಡು. ಧುಮ್ಮಿಕ್ಕುವ ಜಲಪಾತ. ತುಂಬಿ ಹರಿಯುವ ನದಿ-ಹಳ್ಳ. ತಲೆದೂಗಿ ತೊನೆಯುವ ತೆಂಗು, ಅಡಿಕೆ, ಬಾಳೆ, ಯಾಲಕ್ಕಿ. ನೀಳವಾದ ಕಡಲಕರೆ, ಅಪ್ಪಳಿಸುವ ನೊರೆ ತೆರೆ. ಇನ್ನೊಂದೆಡೆ ವಿಶಾಲವಾಗಿ ಹರಡಿನಿಂತ ಬಯಲುನಾಡು. ಬತ್ತ, ಕಬ್ಬು, ಹತ್ತಿ, ಮಾವುಗಳ ಅಂಗಳ. ಪ್ರಕೃತಿ ಸೌಂದರ್ಯದ ಜೊತೆಗೆ ಜೀವನದ ಚೆಲವು ಹೆಚ್ಚಿಸುವ ಕಲೆಗಳ ಸುಗ್ಗಿ. ಸಾಹಿತ್ಯ, ಸಂಗೀತ, ಚಿತ್ರ, ವಾಸ್ತುಶಿಲ್ಪಗಳಲ್ಲದೆ ಜಾನಪದ ರಂಗಕಲೆಗಳ ವೈವಿಧ್ಯ. ಕರ್ನಾಟಕದ ಶ್ರೇಷ್ಠ ರಂಗಕಲೆಗಳಲ್ಲಿ ಒಂದಾದ 'ಯಕ್ಷಗಾನ'ದ ತವರು. ಈ ಶ್ರೀಮಂತ ಹಿನ್ನೆಲೆಯಿಂದ ಪ್ರೇರಣೆ ಪಡೆದು, ಕನ್ನಡ ನಾಟಕ ರಂಗಭೂಮಿಯ ಶ್ರೇಷ್ಠನೆನಿಸಿದವನೊಬ್ಬನ ಜೀವನ-ಸಾಧನೆಗಳನ್ನು ಮೆಲಕು ಹಾಕುವ ಪ್ರಯತ್ನ ಇಲ್ಲಿದೆ.

ಕನ್ನಡ ರಂಗಭೂಮಿಯು ಕಂಡ ಕೆಲವೇ ಪ್ರತಿಭಾನ್ವಿತ ಕಲಾವಿದರಲ್ಲಿ 'ಹುಲಿಮನೆ ಸೀತಾರಾಮಶಾಸ್ತ್ರಿ' ಒಬ್ಬರು. 'ಕನ್ನಡ ರಂಗಭೂಮಿಯ ಹುಲಿ' ಎಂದೇ ಅವರು ಪ್ರಖ್ಯಾತರು. ಸೀತಾರಾಮ ಶಾಸ್ತ್ರಿ ಹುಟ್ಟಿದ್ದು 1906 ನವೆಂಬರ್ 14 ರಂದು. 'ಹುಲಿಮನೆ' ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನ ಪುಟ್ಟ ಹಳ್ಳಿ. ಮಲೆನಾಡಿನ ಬೆಟ್ಟಗಳ ತಪ್ಪಲಿನಲ್ಲಿ ತಲೆಯೆತ್ತಿದ ಗ್ರಾಮಗಳಲ್ಲಿ ಜನವಸತಿ ಕಡಿಮೆ. ಹುಲಿಗಳು ರಾಜಗಾಂಭೀರ್ಯದಿಂದ ಅಲೆದಾಡುತ್ತಿದ್ದ ದಟ್ಟ ಅರಣ್ಯದ ಕೋಟೆಯ ನಡುವೆ 'ಕನ್ನಡ ರಂಗಭೂಮಿಯ ಹುಲಿ' ಜನ್ಮ ತಳೆದದ್ದೊಂದು ವಿಶೇಷ ಯೋಗಾಯೋಗ.

ಹುಲಿಮನೆ ಅನಂತಹೆಗಡೆ - ಮಂಜಮ್ಮ ದಂಪತಿಯದ್ದು ಸುಖೀ ಸಂಸಾರ. ಕೃಷ್ಣ, ಲಕ್ಷ್ಮೀನಾರಾಯಣ, ಗಣಪತಿ, ಸೀತಾರಾಮ, ಪರಮೇಶ್ವರ - ಹೀಗೆ ಐವರು ಗಂಡುಮಕ್ಕಳು. ಆ ಕಾಲದ ಕುಟುಂಬಗಳೇ ಹಾಗೆ. ತೋಟ ತುಡಿಕೆಗಳಲ್ಲಿ ದುಡಿಯಲು ಜನ ಸಂಪತ್ತು ಬೇಕಿತ್ತು. ಅವಿಭಕ್ತ ಕುಟುಂಬದ ಘನತೆಯೇ ಬೇರೆ. ಗುಡ್ಡಗಳ ನಡುವಣ ಕಣಿವೆಯಲ್ಲಿ ಹೊಲ-ತೋಟ ಎಬ್ಬಿಸಿ, ಹತ್ತಾರು ಅಂಕಣಗಳ ಮನೆ ಕಟ್ಟಿ ನೆಲೆಸಿದ್ದರೂ ಹೊರ ಜಗತ್ತಿನ ಸಂಪರ್ಕ ಕಡಿಮೆ. ಆದರೆ ಉದಾತ್ತ ಸಂಸ್ಕಾರದ ಕೊರತೆಯಿರಲಿಲ್ಲ. ಬಿಡುವು ಸಿಕ್ಕಾಗ ಕುಮಾರವ್ಯಾಸ ಭಾರತ, ಜೈಮಿನಿ ಭಾರತ, ತೊರವೆ ರಾಮಾಯಣ, ತುರಂಗ ಭಾರತಗಳ ವಾಚನ - ವ್ಯಾಖ್ಯಾನಗಳು ಅಲ್ಲಲ್ಲಿ ನಡೆಯುತ್ತಿದ್ದವು. ಯಕ್ಷಗಾನ ತಾಳಮದ್ದಳೆ, ಬಯಲಾಟ, ಡೊಳ್ಳು ಕುಣಿತ, ಬಿಂಗಿ ಹಾಡುಗಳು ಕಣ್ಣು-ಕಿವಿಗಳನ್ನು ಸೂರೆಗೊಳ್ಳುತ್ತಿದ್ದ ದಿನಗಳು ಅವು. ಈ ಸಾಂಸ್ಕೃತಿಕ ಆವರಣದಿಂದ ಪ್ರಭಾವಿತರಾಗಿದ್ದ ಅನಂತ ಹೆಗಡೆಯವರಿಗೆ ಸಂಗೀತ -ಸಾಹಿತ್ಯ ಆಸ್ವಾದನೆಯಲ್ಲಿ ವಿಶೇಷ ರುಚಿ. ಸ್ವಯಂ ಅವುಗಳಲ್ಲಿ ತಕ್ಕಮಟ್ಟಿನ ಕೃಷಿ-ಪರಿಶ್ರಮವನ್ನು ಮಾಡಿದ್ದವರು. ಕುಟುಂಬದ ಹಿರಿಯರಾದ ಅವರ ಸಾಂಸ್ಕೃತಿಕ ಒಲವು, ಸುತ್ತಲಿನ ವಾತಾವರಣ ಮಕ್ಕಳ ಮೇಲೆ ಪರಿಣಾಮ ಬೀರದಿರಲಿಲ್ಲ.

ಅನಂತ ಹೆಗಡೆಯವರ ನಾಲ್ಕನೆಯ ಮಗ ಸೀತಾರಾಮನಿಗೆ ಚಿಕ್ಕಂದಿನಿಂದಲೆ, ಗೀತಗಾಯನ -ಕುಣಿತಗಳಲ್ಲಿ ವಿಶೇಷ ಒಲವು. ಶಾಲೆಗೆ ಹೋಗುವಾಗಲೂ ಗುನುಗುನಿಸುವುದು ಯಕ್ಷಗಾನದ ಹಾಡುಗಳನ್ನು, ಪುರಾಣಲೋಕದ ವರ್ಣಮಯ ಬದುಕನ್ನು ಸಜೀವಗೊಳಿಸುವ ಯಕ್ಷಗಾನವೆಂದರೆ ಸೀತಾರಾಮನಿಗೆ ಎಲ್ಲಿಲ್ಲದ ಆಕರ್ಷಣೆ. ಶೃಂಗಾರ ಮತ್ತು ಕರುಣರಸಗಳ ಅಭಿವ್ಯಕ್ತಿಯಲ್ಲಿ ಸಿದ್ಧಹಸ್ತರೆನಿಸಿದ ಮೂಡ್ಕಣಿ ನಾರಾಯಣ ಹೆಗಡೆ ಆತನ ಅಚ್ಚುಮೆಚ್ಚಿನ ನಟ. ಅವರ ಭಾವಪೂರ್ಣ ಅಭಿನಯದ ಮೋಡಿಯಿಂದ ಬಿಡಿಸಿಕೊಳ್ಳಲಾಗದ ಗೀಳು. ಯಕ್ಷಗಾನದ ಚಂಡೆ ಮದ್ದಳೆಯ ಮೊರೆತ, ನರ್ತನದ ಲಯವಿನ್ಯಾಸ, ಕಣ್ಣು ಕೋರೈಸುವ ಪ್ರಸಾಧನ ವೈವಿಧ್ಯ, ಮಾತಿನ ವರಸೆಗಳಲ್ಲಿ ಮೈಮರೆಯುತ್ತಿದ್ದ ಸೀತಾರಾಮನಲ್ಲಿ ಒಬ್ಬ ಕಲಾವಿದ ಅರಳಿಕೊಳ್ಳುತ್ತಿದ್ದ - ಅವನಿಗೇ ಅರಿವಿಲ್ಲದಂತೆ.

ಸೀತಾರಾಮ ಓದಿದ್ದು ನಾಲ್ಕನೆಯ ತರಗತಿಯವರೆಗೆ ಮಾತ್ರ. ಆ ಕಾಲದಲ್ಲಿ ಅದೇ ಒಂದು ಸಾಧನೆ. ತೋಟ-ಗದ್ದೆಗಳಲ್ಲಿ ದುಡಿಯುತ್ತ ಜೀವನ ಕಳೆಯುವವರಿಗೆ ದೈನಂದಿನ ಲೆಕ್ಕ-ವ್ಯವಹಾರಗಳಿಗೆ ಅಷ್ಟು ಶಿಕ್ಷಣ ಸಾಕೆಂಬ ಭಾವನೆಯಿದ್ದರೆ, ಹಿರಿಯ ಪ್ರಾಥಮಿಕ ಶಾಲೆಗಳು ಸಮೀಪದಲ್ಲಿ ಇಲ್ಲದಿರುವುದು ಇನ್ನೊಂದು ಕಾರಣ. ಇನ್ನೂ ಹುಡುಗಾಟಿಕೆಯ ವಯಸ್ಸಿನ ಸೀತಾರಾಮನಿಗೆ ಮುಂದೆ ಓದಬೇಕೆಂಬ ಹಂಬಲವಿದ್ದರೂ ತಂದೆಯಲ್ಲಿ ಹೇಳಿಕೊಳ್ಳುವ ಭಯ. ಅಪ್ಪನನ್ನು ಎದುರಿಸುವ ಧೈರ್ಯವಿಲ್ಲದೆ ಶಾಲೆ ಬಿಟ್ಟು ಮನೆಯಲ್ಲಿಯೇ ಇರತೊಡಗಿದ ಸೀತಾರಾಮನಿಗೆ ತಂದೆ ಅನಂತಯ್ಯ ಒಂದು ಕೆಲಸ ಕೊಟ್ಟರು. ಎಂಥಾ ಕೆಲಸ ಗೊತ್ತೇ? ದಿನಾ

ಬೆಳಿಗ್ಗೆ ಎಮ್ಮೆಗಳನ್ನು ಕೊಟ್ಟಿಗೆಯಿಂದ ಬಿಡಿಸಿಕೊಂಡು ಹೋಗಿ ಬೆಟ್ಟಗಳ ಮೇಲೆ ಹುಲ್ಲು ಮೇಯಿಸುವುದು; ಸರಳವಾಗಿ ಹೇಳುವುದಾದರೆ ಎಮ್ಮೆ ಕಾಯುವುದು; ಸೀತಾರಾಮನಿಗೆ ಆಗ ಹನ್ನೊಂದೋ ಹನ್ನೆರಡೋ ವಯಸ್ಸು. ಹುಡುಗಾಟಿಕೆಯೇ ಪರಮಸುಖವೆನಿಸುತ್ತಿದ್ದ ಎಳೆಯ ವಯಸ್ಸು ಅದು. ಭವಿಷ್ಯದ ಬಗೆಗೆ ಅಸ್ಪಷ್ಟ ಕನಸುಗಳನ್ನು ಕಟ್ಟಿಕೊಳ್ಳುತ್ತಿದ್ದ ಸೀತಾರಾಮ ತನ್ನ ವಾರಿಗೆಯ ಹುಡುಗರೊಂದಿಗೆ ಎಮ್ಮೆ ಪಾಲಕ ವೃತ್ತಿ ಪ್ರಾರಂಭಿಸಿದ. ಎಮ್ಮೆಗಳೊಂದಿಗೆ ಬೆಟ್ಟ ಬಯಲು ಸುತ್ತುವಾಗ, ನಿಸರ್ಗದ ಸಹಜ ಚೆಲುವು ಈ ಹುಡುಗನ ಭಾವುಕ ಮನಸ್ಸನ್ನು ತರಂಗಿತಗೊಳಿಸಿತು. ಕಿವಿಯಲ್ಲಿ ಮೊರೆಯುತ್ತಿದ್ದ ಯಕ್ಷಗಾನದ ಚಂಡೆ - ಮದ್ದಳೆಯ ನಿನಾದವು ಕುಣಿಯಲು ಕಾಲಿಗೆ ಚಾಲನೆ ನೀಡಿತು. ಎಮ್ಮೆ ಕಾಯುತ್ತಲೆ ಬೋಳುಗುಡ್ಡದ ಮೇಲೆ ಯಕ್ಷಗಾನ ಬಯಲಾಟದ ತಾಲೀಮು ಪ್ರಾರಂಭಿಸಿದ ಸೀತಾರಾಮ ತನ್ನ ಗೆಳೆಯರನ್ನು ಒಂದುಗೂಡಿಸಿ ' ಮೇಳ' ಕಟ್ಟಿದ. ಬಯಲಾಟವನ್ನು ನೋಡಿ ನೋಡಿ ಮನಸ್ಸಿಗೆ ಆವಾಹನೆ ಮಾಡಿಕೊಂಡಿದ್ದ ಅವನಿಗೆ, ಯಕ್ಷಗಾನದ ರಂಗ -ಪರಿಕಲ್ಪನೆಗಳೆಲ್ಲ ಕರಗತವಾಗಿದ್ದವು. ಯಕ್ಷಗಾನದ ಪ್ರಮುಖ ಪಾತ್ರಗಳಿಗೆ ಬೇಕಾದ ಮೈಕಟ್ಟು, ಆಳ್ತನ ಆತನಿಗಿತ್ತು. ಎತ್ತರದ ನಿಲುವು, ಹರವಾದ ಮುಖ, ಅಗಲವಾದ ಕಣ್ಣುಗಳು, ಕಂಚಿನ ಕಂಠ ಭಾವನೆಗೆ ಜೀವ ತುಂಬುವ ಮಾತಿನ ಧಾಟಿ, ಗತ್ತು-ಗಾಂಭೀರ್ಯದ ನಡಿಗೆ... ಎಲ್ಲವೂ ಸೀತಾರಾಮನಲ್ಲಿ ಸಹಜವಾಗಿಯೇ ಇದ್ದವು. ಹೀಗಾಗಿ ಹಲವು ದಿನಗಳ ಪರಿಶ್ರಮದ ಮೂಲಕ ಯಕ್ಷಗಾನ ರಂಗಪ್ರದರ್ಶನದಲ್ಲಿ ಸಾಧಿಸಿದ್ದ ಪರಿಣತಿಯನ್ನು ತಂದೆ ಅನಂತಯ್ಯನವರ ಎದುರಿಗೆ ಅಭಿನಯಿಸಿ ತೋರಿಸಿ, ಶಹಭಾಸ್‌ಗಿರಿಯನ್ನು ಗಿಟ್ಟಿಸಿಕೊಳ್ಳಬೇಕೆಂಬ ಹಂಬಲ ಅವನ ಮನಸ್ಸಿನಲ್ಲಿ ಕುಡಿಯೊಡೆಯಿತು.

ಮಗ ಸೀತಾರಾಮ ಯಕ್ಷಗಾನ ಕುಣಿತವನ್ನು ಅಭ್ಯಾಸ ಮಾಡುತ್ತಿರುವ ಸಂಗತಿಯು ಅದು ಹೇಗೋ ಅನಂತ ಹೆಗಡೆಯವರ ಕಿವಿಯ ಮೇಲೆ ಬಿತ್ತು. ಅಸಾಧ್ಯ ಕೋಪವೂ ಬಂತು. ಯಕ್ಷಗಾನ ಕಲೆಯ ಬಗೆಗೆ ಅವರಿಗೆ ಅಪಾರ ಮೆಚ್ಚುಗೆ - ಒಲವು ಇತ್ತು. ನಿಜ. ಆದರೆ ಸಮಾಜದಲ್ಲಿ ಘನತೆಯ ಸ್ಥಾನಮಾನ ಪಡೆದಿದ್ದ ಅವರಿಗೆ ತಮ್ಮ ಮಗ ಕಲಾವಿದನಾಗಿ ಗೆಜ್ಜೆ ಕಟ್ಟಿ ಕುಣಿಯುವುದು ಇಷ್ಟವಿರಲಿಲ್ಲ. ಯಾಕೆಂದರೆ ಆ ಕಾಲದಲ್ಲಿ ರಂಗದ ಮೇಲೆ ಬಣ್ಣ ಹಚ್ಚಿ ಕುಣಿಯುವ ನಟರಿಗೆ ಸಾಮಾಜಿಕ ಗೌರವ ಅಷ್ಟಾಗಿ ಇರಲಿಲ್ಲ. ವ್ಯಕ್ತಿಯ ಕಲೆಗಾರಿಕೆಯನ್ನು ಮೆಚ್ಚಿ ಪ್ರಶಂಸೆ ಮಾಡಿದರೂ, ವ್ಯಕ್ತಿಯಾಗಿ ಅವನನ್ನು ಗೌರವಿಸುತ್ತಿರಲಿಲ್ಲ. ಬದಲಿಗೆ ಕಲಾವಿದರೆಂದರೆ ದಾರಿ ತಪ್ಪಿದವರೆಂದೋ, ಕೆಲಸಕ್ಕೆ ಬಾರದ ನಿಷ್ಪ್ರಯೋಜಕರೆಂದೋ, ಮನೆಹಾಳುತನದ ಅಪರಾಧ ಮಾಡಿದವರೆಂದೋ ಭಾವನೆಯಿದ್ದ ದಿನಗಳು ಅವು. 'ತಮ್ಮ ಮಗ ಯಕ್ಷಗಾನ ಕುಣಿತಕ್ಕೆ ಇಳಿದನಲ್ಲ' - ಎಂಬ ವ್ಯಥೆ ಅವರನ್ನು ಕಾಡಿತು. ಸಮಯ ಸಂದರ್ಭ ಸಿಕ್ಕರೆ ಮಗನಿಗೆ ಚೆನ್ನಾಗಿ ನೆನಪುಳಿಯುವಂಥ ಪಾಠ ಕಲಿಸಬೇಕು ಎಂದು ಮನಸ್ಸಿನಲ್ಲೇ ಲೆಕ್ಕಾಚಾರ ಹಾಕಿಕೊಂಡಿದ್ದರು ಅನಂತ ಹೆಗಡೆ.

ಇದಾವುದೂ ಗೊತ್ತಿಲ್ಲದ ಸೀತಾರಾಮ ತನ್ನ ಗೆಳೆಯರ ಬಳಗದೊಂದಿಗೆ ಒಂದು ದಿನ ವೇಷ ಕಟ್ಟಿ ಅಪ್ಪನ ಎದುರು ನಿಂತು, ಪ್ರತಿಭೆಯನ್ನು ಪ್ರದರ್ಶಿಸುವ ಸಾಹಸಕ್ಕೆ ಇಳಿದ. ಮೆಚ್ಚುಗೆ ಗಳಿಸುವ ಆತುರದಲ್ಲಿ ದುಡುಕಿ ಮುಖಭಂಗಿತನಾದ. ಅನಂತ ಹೆಗಡೆ ಮಗನಿಗೆ ಬಾಯಿಗೆ ಬಂದಂತೆ ಬಯ್ದರು. ತನ್ನ ಅಭಿನಯ ಸಾಮರ್ಥ್ಯಕ್ಕೆ ತಂದೆಯಿಂದ ಪುರಸ್ಕಾರ ದೊರೆತೀತೆಂದು ಭಾವಿಸಿದ್ದ ಸೀತಾರಾಮನಿಗೆ, ತಂದೆಯಿಂದ ದೊರೆತ ತಿರಸ್ಕಾರವು ಮಾಯದ ಗಾಯವನ್ನೇ ಮಾಡಿತು. ಮಾನಸಿಕ ಆಘಾತದಿಂದ ಬಿಡಿಸಿಕೊಳ್ಳಲು ಅತಿಯಾದ ಬೀಡಿ ಸೇವನೆ ಪ್ರಾರಂಭಿಸಿದ. ಎಳೆಯ ವಯಸ್ಸಿನಲ್ಲೇ ಅಂಟಿಕೊಂಡ ಬೀಡಿ ಚಟ ಈಗ ಅಂಕೆ ಮೀರಿ ಹೋಗಿ, ಅವನ ಆರೋಗ್ಯವನ್ನು ಬಲಿತೆಗೆದುಕೊಂಡಿತು. ಕುಂಠಿತವಾಗುತ್ತಿದ್ದ ಬೆಳವಣಿಗೆ, ಸೊರಗುತ್ತಿದ್ದ ದೇಹ - ಸೀತಾರಾಮನ ಆರೋಗ್ಯವು ಕ್ಷೀಣಿಸುತಿರುವುದನ್ನು ಸಾಬೀತುಪಡಿಸುತ್ತಿದ್ದವು. ಅನಂತ ಹೆಗಡೆ ಚಿಂತಿತರಾದರು. ಮಗನ ಸ್ಥಿತಿಯ ಬಗ್ಗೆ ಕಳವಳಪಟ್ಟರು. ಎಷ್ಟೇ ಆಗಲಿ, ಮಗನಲ್ಲವೆ? ಸೀತಾರಾಮನ ಕಲಾಭಿವ್ಯಕ್ತಿಯನ್ನು ಅವರು ಅಂತರಂಗದಲ್ಲಿ ಮೆಚ್ಚಿಕೊಂಡಿದ್ದರೂ ಬಹಿರಂಗದಲ್ಲಿ ಒಪ್ಪಿ ಹೊಗಳಲು ಅವರಿಗೆ ಆಢ್ಯತೆ ಅಡ್ಡಬಂದಿತ್ತು.

ಮಗನ ದೇಹಸ್ಥಿತಿಯ ಬಗ್ಗೆ ಕಸಿವಿಸಿಪಟ್ಟುಕೊಂಡ ಅನಂತ ಹೆಗಡೆ, ತಾವೇ ಅವನನ್ನು ವೈದ್ಯರ ಬಳಿ ಕರೆದೊಯ್ದು ಚಿಕಿತ್ಸೆ ಕೊಡಿಸಿದರು. ಬೀಡಿ ಸೇದುವುದನ್ನು ನಿಲ್ಲಿಸಬೇಕೆಂಬ ಸಲಹೆಯನ್ನು ವೈದ್ಯರು ನೀಡಿದಾಗ, ಅನಂತಯ್ಯ ಮಗನಿಗೆ ಕಟ್ಟುನಿಟ್ಟಾದ ಆಜ್ಞೆ ಮಾಡಿದ್ದಲ್ಲದೆ, ಆತನಿಂದ ಪ್ರಮಾಣ ಮಾಡಿಸಿದರು. ಸೀತಾರಾಮ ಆ ಕ್ಷಣಕ್ಕೆ ಪ್ರಾಮಾಣಿಕವಾಗಿ ಒಪ್ಪಿಕೊಂಡುದೇನೋ ನಿಜ. ಆದರೆ ಅಂಟಿಕೊಂಡ ಚಟ ಬಿಡುವುದು ಅಷ್ಟು ಸುಲಭಸಾಧ್ಯವಾಗಿರಲಿಲ್ಲ. ಅಪ್ಪನ ಕಣ್ಣು ತಪ್ಪಿಸಿ ಬೀಡಿಯ ಚಟ ಮುಂದುವರಿಯಿತು. ಒಂದು ದಿನ ಬೀಡಿಯ ತುರ್ತು ಎಷ್ಟಿತ್ತೆಂದರೆ, ಅಪ್ಪನ ಪೆಟ್ಟಿಗೆಯಿಂದಲೆ, ರೊಕ್ಕ ಹಾರಿಸಿ, ಸ್ನೇಹಿತರ ಮೂಲಕ ಬೀಡಿ ತರಿಸಿ ಸೇದುತ್ತಿರುವಾಗಲೇ ಸಿಕ್ಕುಬಿದ್ದ. ಅನಂತಯ್ಯನವರಿಗೆ ಮಗನ ಮೇಲಿನ ಸಿಟ್ಟು ತಡೆಯಲಾಗಲಿಲ್ಲ. ನಿಯಂತ್ರಿಸಲಾಗದ ಕೋಪದ ಭರದಲ್ಲಿ ಬಾಯಿ ತುಂಬಾ ತುಂಬಿಕೊಂಡಿದ್ದ ತಾಂಬೂಲವನ್ನೇ ಮಗನ ಮುಖದ ಮೇಲೆ ಉಗುಳಿದರು. 'ಥೂ ನಿನ್ನ... ನಾಚಿಕೆಗೆಟ್ಟ ಮುಖಾನ ಇನ್ನು ನನಗೆ ತೋರಿಸಬೇಡ, ನಡೀ ಇಲ್ಲಿಂದ'.... ಎಂದು ಕೂಗಿದರು. ಸೀತಾರಾಮನ ಅಣ್ಣಂದಿರ ಎದುರೇ ಇಷ್ಟೆಲ್ಲ ನಡೆದುಹೋಯಿತು. ಈ ಅಭಿಮಾನ ಸೀತಾರಾಮನ ಪಾಲಿಗೆ ಅಸಹನೀಯವಾಯಿತು. ಮನಸ್ಸಿಗೆ ಮಾಯಲಾಗದ ಆಘಾತವೂ ಆಯಿತು. ಹಿಂದು ಮುಂದಿನ ಯೋಚನೆ ಮಾಡುವ ತಾಳ್ಮೆಯನ್ನು ಕಳೆದುಕೊಂಡ ಸೀತಾರಾಮ ದುಡುಕಿದ. ಇಷ್ಟೆಲ್ಲ ಅವಮಾನ ಸಹಿಸಿಕೊಂಡು ಯಾಕಿರಬೇಕು ಮನೆಯಲ್ಲಿ? ಇವರೆಲ್ಲ ಹೇಳಿದಂತೆ ತಲೆ ಬಾಗಿ ಇಲ್ಲಿ ಬಾಳಲು ಸಾಧ್ಯವಿಲ್ಲ. ವಿಶಾಲ ಜಗತ್ತಿಲ್ಲವೇ ಬದುಕಲು? ಇವರ ಹಂಗೇ ಬೇಡ. ಒಂದಲ್ಲ ಒಂದು ದಿನ ತೋರಿಸುತ್ತೇನೆ ನಾನೂ ಏನೆಂಬುದನ್ನು... ಎಂದು

ಮನಸ್ಸಿನಲ್ಲಿಯೇ ದುಮುಗುಟ್ಟುತ್ತ ಮನೆಬಿಟ್ಟು ಹೋಗುವ ನಿರ್ಧಾರವನ್ನು ಕೈಗೊಂಡ ಸೀತಾರಾಮ.

## ಭವಿಷ್ಯದ ಹುಡುಕಾಟ

ಇಷ್ಟೆಲ್ಲ ಆದ ಮೇಲೆ, ತಂದೆಯಿಂದ ಅವಮಾನಿತನಾದ ಸೀತಾರಾಮನ ಅಭಿಮಾನಕ್ಕೆ ಪೆಟ್ಟು ಬಿದ್ದು ಊರು ತ್ಯಜಿಸುವ ನಿರ್ಧಾರ ಕೈಗೊಂಡಾಗ ಅವನ ವಯಸ್ಸು ಕೇವಲ ಹನ್ನೆರಡು. ದನ ಕಾಯುವುದನ್ನು ಬಿಟ್ಟು ಬೇರೇನೂ ಗೊತ್ತಿಲ್ಲದ ಸೀತಾರಾಮನಿಗೆ ಹೊರ ಜಗತ್ತಿನ ಅರಿವಾಗಲಿ, ಲೋಕ ವ್ಯವಹಾರ ಜ್ಞಾನವಾಗಲಿ ಇದ್ದಿರಲಿಲ್ಲ. ಹಾಗಾಗಿಯೇ ನಿರ್ಧಾರವನ್ನು ಕಾರ್ಯರೂಪಕ್ಕಿಳಿಸುವ ದಾರಿ ಯಾವುದೆಂದು ತಟ್ಟನೆ ತೋಚಲಿಲ್ಲ. ಅಣ್ಣಂದಿರ ಬಳಿ ಹೇಳಿ ಅವರ ನೆರವನ್ನು ಪಡೆಯಲೆ? - ಎಂದು ಒಮ್ಮೆ ಯೋಚಿಸಿದ. ಆದರೆ ಅವರು ಸಹಾಯ ಮಾಡಿಯಾರೆಂಬ ನೆಚ್ಚಿಕೆ ಇರಲಿಲ್ಲ. ಹಾಗೆಂದು ಅವಮಾನ ಸಹಿಸಿಕೊಂಡು ಮನೆಯಲ್ಲಿ ಬಾಳಲೂ ಇಷ್ಟವಿರಲಿಲ್ಲ. ಏನು ಮಾಡುವುದೆಂಬ ತೂಗುಯ್ಯಾಲೆಯಲ್ಲಿದ್ದ ಮನಸ್ಸನ್ನು ಅಂಕೆಗೆ ತಂದುಕೊಂಡ. ಆಗಲೇ ಮಧ್ಯಾಹ್ನವಾಗಿತ್ತು. ಎಲ್ಲರೂ ಮನೆಗೆ ಬಂದು ಊಟ ಮುಗಿಸಿ ಹಾಯಾಗಿ ಮಲಗಿ ಎದ್ದು, ತೋಟಕ್ಕೆ ಕೆಲಸಕ್ಕೆಂದು ಹೋಗುವವರೆಗೆ ಅಟ್ಟದ ಮೇಲೆ ಚಾದರ ಹೊದ್ದು ಮಲಗಿದ್ದ ಸೀತಾರಾಮ, ನಿಧಾನವಾಗಿ ಕೆಳಗಿಳಿದು ಬಂದು ಅಪ್ಪನ ಪೆಟ್ಟಿಗೆಯ ಬಾಗಿಲು ತೆರೆದು 300 ರೂಪಾಯಿ ಹಾರಿಸಿ, ತನ್ನ ಅಮರಕೋಶ ಪುಸ್ತಕದೊಳಗೆ ಅಡಗಿಸಿ ಇಟ್ಟುಕೊಂಡ. ಅನಂತರ ಏನೂ ಆಗದವನಂತೆ ಸ್ನಾನ ಮಾಡಿ ಪಟ್ಟಾಗಿ ಊಟ ಹೊಡೆದು ಕೂತು ಮುಂದಿನ ಯೋಜನೆ ರೂಪಿಸಿದ.

ಸೀತಾರಾಮ ನಾಲ್ಕನೇ ತರಗತಿಗೇ ಶರಣು ಹೊಡೆಯಬೇಕಾಗಿ ಬಂದರೂ, ಅವನ ಅಂತರಂಗದಲ್ಲಿ ಓದುವ ಖಯಾಲಿ ತೀವ್ರವಾಗಿತ್ತು. ಹಾಗಾಗಿ ಈಗಿನ ಅವನ ಯೋಜನೆಯ ಪ್ರಕಾರ - 'ಹೇಗಾದರೂ ಮಾಡಿ ಬೆಂಗಳೂರಿಗೆ ಹೋಗಬೇಕು. ಅಲ್ಲಿ ಜಯಚಾಮರಾಜೇಂದ್ರ ಸಂಸ್ಕೃತ ಪಾಠ ಶಾಲೆ ತುಂಬಾ ಚೆನ್ನಾಗಿದೆಯಂತೆ. ಅಲ್ಲಿ ಸೇರಿ ಚೆನ್ನಾಗಿ ಸಂಸ್ಕೃತ ಅಧ್ಯಯನ ಮಾಡಿ ದೊಡ್ಡ ಪಂಡಿತನಾಗಬೇಕು. ಎಲ್ಲರಿಂದ ಶಭಾಸ್‌ಗಿರಿ ಪಡೆಯಬೇಕು. ಮುಖದ ಮೇಲೆ ಉಗಿದ ಅಪ್ಪನಿಂದಲೇ 'ಭಲೇ' ಅನ್ನಿಸಿಕೊಳ್ಳಬೇಕು.... ಇತ್ಯಾದಿ. ಆದರೆ ಬೆಂಗಳೂರಿಗೆ ಹೋಗುವುದು ಹೇಗೆ, ಪರಿಚಿತರು ಯಾರಿದ್ದಾರೆ? ಅದಕ್ಕೂ ಒಂದು ದಾರಿ ತೋರಿತು.

ಆ ಕಾಲದಲ್ಲಿ ಅಡಿಕೆ ಮಾರಾಟಕ್ಕಾಗಿ ಅಡಿಕೆ ಚೀಲಗಳನ್ನು ಹೇರಿಕೊಂಡು ಎತ್ತಿನ ಬಂಡಿಗಳು ಬ್ಯಾಡಗಿ ಪೇಟೆಗೆ ಹೋಗುತ್ತಿದ್ದವು. ಅಂಥ ಒಂದು ಬಂಡಿಯಲ್ಲಿ ಕುಳಿತು ಬ್ಯಾಡಗಿ ಸೇರಿದರೆ ಅಲ್ಲಿಂದ ಹೇಗೋ ಬೆಂಗಳೂರಿಗೆ ಹೋಗಬಹುದು ಎಂಬುದು ಸೀತಾರಾಮನ ಲೆಕ್ಕಾಚಾರ.

ಅವನ ಅದೃಷ್ಟವೋ ಎಂಬಂತೆ ಅದೇ ದಿನ ರಾತ್ರಿ ಅವನ ಪರಿಚಿತರೊಬ್ಬರ ಬಂಡಿ ಬ್ಯಾಡಗಿಗೆ ಹೋಗುವುದಿತ್ತು. ಎಲ್ಲವನ್ನೂ ಗುಟ್ಟಾಗಿ ಸಿದ್ಧಪಡಿಸಿ ಇಟ್ಟುಕೊಂಡಿದ್ದ ಸೀತಾರಾಮ ರಾತ್ರಿ ಹನ್ನೆರಡು ಗಂಟೆಯ ವೇಳೆಗೆ ಎಲ್ಲರೂ ಗಾಢ ನಿದ್ದೆಯಲ್ಲಿರುವಾಗ ಮನೆಬಿಟ್ಟು ಹೊರಬಿದ್ದ. ಎತ್ತಿನ ಬಂಡಿ ಹತ್ತಿ ಬ್ಯಾಡಗಿಯ ದಾರಿ ಹಿಡಿದ. ಬಂಡಿಯಲ್ಲಿ ಸಹಪ್ರಯಾಣಿಕರಾಗಿದ್ದ ಐನಕೈ ವೆಂಕಟಸುಬ್ಬ ಹೆಗಡೆಯವರು ಸೀತಾರಾಮನ ಓದಿನ ಆಸೆಗೆ ಉತ್ತೇಜನ ನೀಡಿದರು. ಮೂರು ದಿನಗಳ ಎತ್ತಿನಗಾಡಿ ಪ್ರಯಾಣದ ಅನಂತರ ಬ್ಯಾಡಗಿ ಸೇರಿದಾಗ ಅವರೇ ಸೀತಾರಾಮನನ್ನು ರೇಲ್ವೆ ಸ್ಟೇಷನ್ನಿಗೆ ಕರೆದೊಯ್ದು, ತಾವೇ ಟಿಕೆಟ್ಟು ತೆಗೆಸಿಕೊಟ್ಟು ಟ್ರೇನ್ ಹತ್ತಿಸಿದರು. ವ್ಯವಹಾರ ಜ್ಞಾನವಿಲ್ಲದ ಹುಡುಗ ಸೀತಾರಮನಿಗೆ ಎಚ್ಚರಿಕೆಯ ಮಾತುಗಳನ್ನು ಹೇಳಿದರು.

ರಾತ್ರಿಯೆಲ್ಲ ಕುತೂಹಲ - ಆತಂಕದಿಂದಲೇ ಕಳೆಯಿತು. ಸೀತಾರಾಮ ಬೆಂಗಳೂರು ಸೇರಿದಾಗ ಬೆಳಗಿನ ಆರುಗಂಟೆ. ಅಲ್ಲಿನ ಜನಸಾಗರವನ್ನು ಕಂಡು ಅವನು ಕಂಗಾಲಾಗಿದ್ದ. ಸಂಸ್ಕೃತ ಪಾಠಶಾಲೆ ಎಲ್ಲಿದೆಯೆಂದು ಅನೇಕರನ್ನು ಪ್ರಶ್ನಿಸಿದ. ಉತ್ತರ ಯಾರಿಂದಲೂ ದೊರೆಯಲಿಲ್ಲ. ದಿಕ್ಕುಗಾಣದೆ ಕುಳಿತಲ್ಲಿಯೇ ಸಂಜೆಯಾಯಿತು. ಹೊಟ್ಟೆಯಲ್ಲಿ ಹಸಿವೆಯಿಂದ ಉರಿಯೆದ್ದರೂ ಹೋಟೆಲಿನಲ್ಲಿ ತಿಂದು ಅಭ್ಯಾಸವಿಲ್ಲದ ಮಡಿವಂತ ಸೀತಾರಾಮ ಹಾಗೆಯೇ ರಾತ್ರಿಯನ್ನು ಕಳೆದ. ಎರಡು ರಾತ್ರಿಗಳು ನಿದ್ರೆಯಿಲ್ಲದೆ ಕಣ್ಣು ಕೆಂಪಾಗಿ ಊದಿಕೊಂಡಿತ್ತು. ಧೈರ್ಯ ಮಾಡಿ ಜಟಕಾ ಏರಿ ಪೂರ್ಣಯ್ಯನವರ ಛತ್ರ ತಲುಪಿದ. ಅಲ್ಲಿಯೂ ಊಟ - ವಸತಿಗೆ ಅವಕಾಶ ಸಿಗಲಿಲ್ಲ. ನಿರಾಶನಾದ ಸೀತಾರಾಮ ದಾರಿ ಕೇಳುತ್ತ ಸಂಸ್ಕೃತ ಪಾಠಶಾಲೆ ಸೇರುವ ಆಸೆಯಿಂದ ಕಣ್ಣೀರು ಹಾಕುತ್ತಲೇ ಹೊರಟ. ಎರಡು ದಿನಗಳಿಂದ ಊಟವಿಲ್ಲದೆ, ನಿದ್ದೆಯಿಲ್ಲದೆ ದೇಹ ಬಳಲಿತ್ತು. ದಾರಿಯಲ್ಲಿ ಕಣ್ಣು ಕತ್ತಲಿಸಿಬಂದು ಎಲ್ಲಿ ಕುಸಿದು ಬಿದ್ದನೋ ಅವನಿಗೇ ಗೊತ್ತಿರಲಿಲ್ಲ. ಆದರೆ ಅದೃಷ್ಟವಶಾತ್ ದಾರಿಯ ಬದಿಯಲ್ಲಿ ನಿಲ್ಲಿಸಿದ್ದ ಕುದುರೆ ಸಾರೋಟಿನಲ್ಲಿ ಮುಗ್ಗರಿಸಿ ಬಿದ್ದು ಅಲ್ಲೇ ನಿದ್ದೆಹೋಗಿದ್ದ.

ಜೀವನದ ಗತಿ ತುಂಬ ವಿಚಿತ್ರವಾದದ್ದು. ನಾವೊಂದು ಬಗೆದರೆ ಆಗುವುದೇ ಇನ್ನೊಂದು. ಒಮ್ಮೊಮ್ಮೆ ನಮ್ಮ ಎಣಿಕೆಗಿಂತ ಅನುಕೂಲಕರ ಅವಕಾಶ ಹಠಾತ್ತನೆ ತೆರೆದುಕೊಳ್ಳಬಹುದು. ಜೀವನದ ಲೆಕ್ಕಾಚಾರವೇ ಹಾಗೆ. ಅದು ಸರಳ ಗಣಿತದ ಸೂತ್ರಗಳಿಗೆ ದಕ್ಕುವಂತಹದಲ್ಲ. ಸೀತಾರಾಮನ ಸಂದರ್ಭದಲ್ಲಿಯೂ ಆದದ್ದು ಹಾಗೆಯೇ.

ಸೀತಾರಾಮನು ಬವಳಿ ಬಂದು ಬಿದ್ದುಕೊಂಡಿದ್ದ ಕುದುರೆಗಾಡಿಯು ಸುಪ್ರಸಿದ್ಧ ಸಮಾಜ ಸೇವಕರಾದ ರಾಜಸಭಾಭೂಷಣ ಕರ್ಪೂರ ಶ್ರೀನಿವಾಸರಾಯರದು. ಗುಂಡೋಪಂತರ ಛತ್ರದಲ್ಲಿ ಸೇರಿದ್ದ ಸಭೆಯಲ್ಲಿ ಪಾಲುಗೊಳ್ಳಲು ಬಂದಿದ್ದ ಅವರು ಮರಳಿ ಕುದುರೆಗಾಡಿಯೇರಿ ಮನೆಗೆ

ಬಂದ ಮೇಲೆಯೇ ಸೀತಾರಾಮ ಗಾಡಿಯೊಳಗೆ ಬಿದ್ದುಕೊಂಡಿರುವ ಸಂಗತಿ ಗೊತ್ತಾದದ್ದು. ಶವದಂತೆ ಅಚೇತನನಾಗಿದ್ದ ಅವನನ್ನು ಕಂಡು ಗಾಬರಿಯಾದ ಅವರು ತಣ್ಣೀರು ಚಿಮುಕಿಸಿ ಉಪಚರಿಸಿದಾಗ ಸೀತಾರಾಮ ಎಚ್ಚರಗೊಂಡು ಅವರ ಕಾಲು ಹಿಡಿದುಕೊಂಡ. ಪೂರ್ವಾಪರವನ್ನೆಲ್ಲ ಕೇಳಿ ತಿಳಿದ ಶ್ರೀನಿವಾಸರಾಯರು ಕನಿಕರಗೊಂಡರು. ಸೀತಾರಾಮ ಕತೆ ಕಟ್ಟಿ ಹೇಳುವುದರಲ್ಲಿ ನಿಪುಣ. ಎರಡನೆಯ ಮದುವೆಯಾದ ತಂದೆಯು, ಹಿರಿಯ ಹೆಂಡತಿಯ ಮಗನಾದ ತನ್ನನ್ನು ತಿರಸ್ಕರಿಸಿದ್ದರಿಂದ, ವಿದ್ಯೆ ಕಲಿಯಲು ಬಯಸಿ ಇಲ್ಲಿಗೆ ಬಂದೆನೆಂದು ಸರಾಗವಾಗಿ ನಿವೇದಿಸಿಕೊಂಡು ರಾಯರ ಸಹಾನುಭೂತಿಯನ್ನು ಗೆದ್ದುಕೊಂಡ. ಅನಂತರ ತಾನು ಹೇಳಿದ ಸುಳ್ಳಿನ ಸರಮಾಲೆಗೆ ತಾನೇ ಅಚ್ಚರಿಪಟ್ಟುಕೊಂಡ. ಅಂತೂ ಕರ್ಪೂರ ಶ್ರೀನಿವಾಸರಾಯರ ಕೃಪಾಶ್ರಯ ಸಿಕ್ಕಿದ ಸಂತೋಷದಲ್ಲಿ, ಕಳೆದು ಹೋಗಿದ್ದ ಧೈರ್ಯವೂ ಮರಳಿತು.

ಕರ್ಪೂರ ಶ್ರೀನಿವಾಸರಾಯರು ಸಮಾಜದ ಗಣ್ಯ ಮಹನೀಯರು. ಪ್ರಭಾವಶಾಲಿ ವ್ಯಕ್ತಿಗಳಾಗಿದ್ದ ಅವರ ಮಾತಿಗೆ ತುಂಬ ಬೆಲೆಯಿತ್ತು. ಸೀತಾರಾಮನ ಮನಸ್ಸಿನ ಇಂಗಿತವನ್ನು ತಿಳಿದುಕೊಂಡ ಅವರು ಚಾಮರಾಜೇಂದ್ರ ಸಂಸ್ಕೃತ ಪಾಠಶಾಲೆಯ ಪ್ರಾಚಾರ್ಯರಿಗೆ ಒಂದು ಪತ್ರ ಬರೆದು ಸೀತಾರಾಮನ ಕೈಯಲ್ಲಿ ಕೊಟ್ಟು, ತಮ್ಮ ಕುದುರೆಗಾಡಿಯಲ್ಲಿ ಕೂರಿಸಿ ಕಳಿಸಿಕೊಟ್ಟರು. ಅನಾಯಾಸವಾಗಿ ಸೀತಾರಾಮನಿಗೆ ಪಾಠಶಾಲೆಯಲ್ಲಿ ಪ್ರವೇಶವೂ ದೊರೆಯಿತು. ಎಲ್ಲವೂ ಪವಾಡದಂತೆ ನಡೆದುಹೋಯಿತು. ಆಗಿನ್ನೂ ಸೀತಾರಾಮನಿಗೆ ಹನ್ನೆರಡರ ವಯಸ್ಸು. ಮಲೆನಾಡಿನ ಮೂಲೆಯ ಹಳ್ಳಿಯಲ್ಲಿ ಜನಿಸಿದ್ದ ಸೀತಾರಾಮನಿಗೆ ಭವಿಷ್ಯದ ದಿಕ್ಕೇ ಬದಲಾಗಿತ್ತು.

ಅನಂತ ಹೆಗಡೆಯವರ ಮಗ ಸೀತಾರಾಮ 1918ರ ಜೂನ್ 5ರಂದು ಸಂಸ್ಕೃತ ಪಾಠಶಾಲೆಯಲ್ಲಿ ತನ್ನ ಹೆಸರು ದಾಖಲಿಸುವಾಗ ಸೀತಾರಾಮ ಶಾಸ್ತ್ರಿಯಾದ. ಕುಳಿಬೀಡು ನಾರಾಯಣಭಟ್ಟರು ಅದೇ ಪಾಠಶಾಲೆಯಲ್ಲಿ ಅಧ್ಯಾಪಕರಾಗಿದ್ದರು. ಸೀತಾರಾಮನನ್ನು ತಮ್ಮ ಊರಿನವನೆಂದು ಕಕ್ಕುಲಾತಿಯಿಂದ ಕಂಡರು. ಹೆಸರು ಹಚ್ಚಿಸಲು ನೆರವಾದರು. ಹಾಗಾಗಿ ಈತನ ಹೆಸರಿನ ಹಿಂದೆ 'ಕೆ' ಸೇರಿಕೊಂಡಿತು. ಹುಲಿಮನೆ ಸೀತಾರಾಮ ಹೆಗಡೆ 'ಕೆ. ಸೀತಾರಾಮ ಶಾಸ್ತ್ರೀ' ಆಗಿಬಿಟ್ಟ. ಅನಂತರದ ದಿನಗಳಲ್ಲಿ ಹುರುಪಿನಿಂದಲೇ ಸಂಸ್ಕೃತ ಅಧ್ಯಯನ ಪ್ರಾರಂಭಿಸಿದ. ಪ್ರತಿಭಾವಂತನಾಗಿದ್ದ ಸೀತಾರಾಮ ಪರಿಶ್ರಮಪಟ್ಟು ಓದಿ ದಿನದಿನಕ್ಕೂ ಪ್ರವರ್ಧಮಾನಕ್ಕೆ ಬಂದ. ಪರೀಕ್ಷೆಯಲ್ಲಿ ಚೆನ್ನಾಗಿ ಬರೆದು ಉತ್ತಮ ಫಲಿತಾಂಶವನ್ನು ಪಡೆದ. ಕಾಲೇಜಿನ ವಾರ್ಷಿಕೋತ್ಸವದಲ್ಲಿ ನಡೆಯುವ ಸಂಸ್ಕೃತ ನಾಟಕಗಳಲ್ಲಿ ಪಾತ್ರಗಳನ್ನು ಮಾಡಿ 'ಸೈ' ಅನಿಸಿಕೊಂಡ. ಮೂರು ರೂಪಾಯಿಗಳ ವಿದ್ಯಾರ್ಥಿವೇತನವನ್ನೂ ಗಿಟ್ಟಿಸಿಕೊಂಡು ಅದರಲ್ಲಿ ಮೇಲುಖರ್ಚನ್ನು ಹೇಗೋ ನಿಭಾಯಿಸುತ್ತಿದ್ದ. ಭಿಕ್ಷಾನ್ನ ಮಾಡುತ್ತ ಬಸವನಗುಡಿಯ ಹಾಸ್ಟೆಲಿನಲ್ಲಿ ಠಿಕಾಣಿ ಹೂಡಿದ್ದ. ಸೀತಾರಾಮನಿಗೆ ಪತ್ರ ಬರೆಯುವ ಆಸೆ. ತನ್ನ ಸಾಧನೆಯನ್ನು ತಂದೆಗೆ ತಿಳಿಸುವ ತವಕ. ಆದರೆ

ತಂದೆಯ ಪ್ರತಿಕ್ರಿಯೆ ಹೇಗಿದ್ದೀತೋ ಎಂಬ ಭಯ ಬೇರೆ. ಅಂತೂ ಧೈರ್ಯದಿಂದ ಪತ್ರ ಬರೆದಿದ್ದೂ ಆಯಿತು. ತಂದೆ ಅನಂತಯ್ಯನವರಿಗೆ ಮಗನ ಪತ್ರದ ಒಕ್ಕಣೆ ನೋಡಿ ಆಶ್ಚರ್ಯ - ಸಂತೋಷ.

ಬೆಂಗಳೂರಿಗೆ ಬಂದ ಅನಂತಯ್ಯನವರು ಮಗ 'ಸೀತಾರಾಮ ಶಾಸ್ತ್ರಿ'ಯೆನಿಸಿ ಗೌರವದ ಸ್ಥಾನ ಪಡೆದಿದ್ದನ್ನು ಕಂಡು ಬೆರಗಾದರು. ಆದರೆ ಮಗ ಭಿಕ್ಷಾನ್ನದಿಂದ ಊಟ ಮಾಡುವುದು ಜಮೀನ್ದಾರನಾದ ಅವರಿಗೆ ಸಹಿಸಲಿಲ್ಲ. ಶಿಕ್ಷಣಕ್ಕೆ ಹಣ ಕಳಿಸುವುದಾಗಿಯೂ, ಇನ್ನು ಮೇಲೆ ಭಿಕ್ಷಾನ್ನ ಮಾಡಕೂಡದೆಂದೂ ತಾಕೀತು ಮಾಡಿದರು. ಊರಿಗೆ ಮರಳಿದ ಮೇಲೆ ಕೆಲವು ಕಾಲ ನಿಯಮಿತವಾಗಿ ಹಣ ಕಳಿಸುತ್ತಲೂ ಇದ್ದರು. ಭಿಕ್ಷಾನ್ನವನ್ನು ಬಿಡದ ಸೀತಾರಾಮ ಊರಿನಿಂದ ಬರುತ್ತಿದ್ದ ಹಣವನ್ನೆಲ್ಲ ಹೋಟೆಲ್ ತಿಂಡಿಗಾಗಿ, ಸಿಗರೇಟಿಗಾಗಿ ವೆಚ್ಚ ಮಾಡುತ್ತಿದ್ದ. ಇವುಗಳ ಜೊತೆ ಇನ್ನೂ ಒಂದು ಹೊಸ ಖಯಾಲಿಯೂ ಸೇರಿಕೊಂಡಿತು. ಅದೆಂದರೆ -ನಾಟಕ ನೋಡುವುದು! ಯಕ್ಷಗಾನ ಕುಣಿತ ಕಲಿತ ತಪ್ಪಿಗಾಗಿ ತಂದೆಯಿಂದ ಅವಮಾನಿತನಾದ ಸೀತಾರಾಮ, ಸಂಸ್ಕೃತ ಕುರಿತು ಪಂಡಿತನೆನಿಸಿ ತಂದೆಯನ್ನು ಮೆಚ್ಚಿಸಬೇಕೆಂದುಕೊಂಡಿದ್ದರೂ ಕಲೆಯ ಸೆಳೆತ ಅವನಲ್ಲಿ ಇನ್ನೂ ಸ್ಥಾಯಿಯಾಗಿ ಇದ್ದೇ ಇತ್ತು; ನಾಟಕ ನೋಡುವ ಗೀಳಿನೊಂದಿಗೆ ಆರಂಭವಾದ ಈ ಆಕರ್ಷಣೆ ವರದಾಚಾರ್ಯರ ಪರಿಚಯ ಲಾಭದೊಂದಿಗೆ ಅದಮ್ಯವಾಗಿ ಬೆಳೆಯತೊಡಗಿತು.

## ರಂಗಭೂಮಿಯ ಸೆಳೆತ

ಎ. ವಿ. ವರದಾಚಾರ್ಯರು ಆ ಕಾಲದ ಸುಪ್ರಸಿದ್ಧ ನಟರು, ಸಂಘಟಕರು ಆಗಿದ್ದವರು. 'ರತ್ನಾವಳಿ ಥಿಯೇಟ್ರಿಕಲ್ಸ್' ಎಂಬ ಕಂಪನಿ ಕಟ್ಟಿಕೊಂಡು ಸಂಗೀತ ನಾಟಕಗಳನ್ನು ಪ್ರದರ್ಶಿಸುತ್ತ, ನಾಟಕಗಳ ಬಗೆಗೆ ಸದಭಿರುಚಿಯನ್ನು ಜನತೆಯಲ್ಲಿ ಮಂಡಿಸಲು ಕಾರಣರಾದ ಮಹಾನುಭಾವರು ಅನಂತರ ರಂಗಭೂಮಿಯಲ್ಲಿ ಪ್ರಸಿದ್ಧಿ ಪಡೆದು ಖ್ಯಾತನಾಮರೆನಿಸಿದ ಅನೇಕ ಕಲಾವಿದರಿಗೆ ಅಭಿನಯದ ಓನಾಮ ಪ್ರಾರಂಭವಾದದ್ದು ವರದಾಚಾರ್ಯರ ಕಂಪನಿಯಲ್ಲಿ. ಹೆಸರಾಂತ ನಟರನ್ನು ಹೊಂದಿದ್ದ ಈ ಕಂಪನಿ ಬೆಂಗಳೂರಿನ ಕಲಾಸಿಪಾಳ್ಯದಲ್ಲಿ ಮುಕ್ಕಾಮ ಹಾಕಿದಾಗ ಸೀತಾರಾಮ ತನ್ನ ಗೆಳೆಯರೊಂದಿಗೆ ಅವರ ಎಲ್ಲ ನಾಟಕಗಳಿಗೂ ಹಾಜರಾದ. ಧಾರಾಳಿಯಾದ ಸೀತಾರಾಮನಿಗೆ ಸಿಗರೇಟು - ಪಾನ್‌ಬೀಡಾ -ಕಾಫಿಗಳಿಗೆ ಹಣ ಒದಗಿಸುವುದೇ ಕಷ್ಟವಾದಾಗ ಸ್ನೇಹಿತರ ಪಟಾಲಂ ಜೊತೆ ನಾಟಕ ನೋಡುವ ವೆಚ್ಚವನ್ನು ಭರಿಸುವುದು ಅಸಾಧ್ಯವಾಯಿತು. ವರದಾಚಾರ್ಯರನ್ನೇ ಭೇಟಿಯಾಗಿ ನಾಟಕ ನೋಡಲು ಪುಕ್ಕಟೆ ಪಾಸ್ ಗಿಟ್ಟಿಸಿಕೊಂಡರೆ ಹೇಗೆ ಎಂಬ ಯೋಚನೆ ಬಂದು, ಫಲವಾಗಿ ಪುಕ್ಕಟೆ ನಾಟಕ ನೋಡಲು ಪಾಸ್ ಪಡೆದದ್ದು ಆಯಿತು. ಸೀತಾರಾಮನ ಅಂತರಂಗದಲ್ಲಿ ಉಸಿರಾಡುತ್ತಿದ್ದ ಕಲಾಸಕ್ತಿ ಚಿಗುರೊಡೆದು ಚಿಮ್ಮಿದ್ದು ಹೀಗೆ.

ಸೀತಾರಾಮ ಸಂಸ್ಕೃತ ಸಾಹಿತ್ಯದ ವಿದ್ಯಾರ್ಥಿಯಾಗಿದ್ದ. ಅನೇಕ ನಾಟಕಗಳನ್ನು ಓದಿದ್ದ, ಕೇಳಿದ್ದ, ಕಲಿತಿದ್ದ. ನಾಟ್ಯಶಾಸ್ತ್ರ - ಕಾವ್ಯಶಾಸ್ತ್ರಗಳ ಅಧ್ಯಯನದಿಂದ ಅವನಲ್ಲಿ ಸಾಹಿತ್ಯ ಮೀಮಾಂಸೆಯ ನೆಲೆಗಳು ಸ್ಪಷ್ಟವಾಗಿದ್ದವು. ವರದಾಚಾರ್ಯರ ನಾಟಕಗಳನ್ನು ನೋಡುವಾಗ ಅವನ ವಿಮರ್ಶನ ಪ್ರಜ್ಞೆ ಚುರುಕಾಗುತ್ತಿತ್ತು. ಈ ಸಂದರ್ಭದಲ್ಲಿಯೇ ಸಾಹಿತ್ಯ ಸಿದ್ಧಾಂತಗಳ ಮಾನದಂಡದಿಂದ ನಾಟಕವನ್ನು ವಿಮರ್ಶಿಸುವ ಸಾಹಸವನ್ನು ಮಾಡಿದ. ಸೀತಾರಾಮನಿಗೆ ವರದಾಚಾರ್ಯರ ಆತ್ಮೀಯ ಪರಿಚಯದ ಲಾಭ ಒದಗಿತು. ಅವರ ಒಡನಾಟದ ಮಾತುಕತೆ - ಚರ್ಚೆಯ ಮೂಲಕ ರಂಗಭೂಮಿಯ ಸಿದ್ಧಾಂತ ಮತ್ತು ಪ್ರಯೋಗಗಳ ನಡುವಣ ವಾಸ್ತವ ಸಂಗತಿಗಳ ಪರಿಚಯವಾಯಿತು. ರಂಗಭೂಮಿಯ ಹಾಗೂ ಹಿರಿಯ ಕಲಾವಿದರ ನಿಕಟ ಪರಿಚಯದಿಂದಾಗಿ ತಾನೂ ನಟನಾಗಿ - ನಾಟಕಕಾರನಾಗಿ ಬೆಳೆಯಬೇಕೆಂಬ ಆಸೆಯನ್ನು ಹೊತ್ತಿಸಿತು. 'ನಿನ್ನಂತಹ ಒಬ್ಬ ಧೀರನಟ ರಂಗಭೂಮಿಗೆ ಬೇಕು' ಎಂಬ ವರದಾಚಾರ್ಯರ ಅಪೇಕ್ಷೆ ಸೀತಾರಾಮನನ್ನು ಹುರಿದುಂಬಿಸುತ್ತಿತ್ತು.

ಸೀತಾರಾಮ ಬೆಂಗಳೂರಿಗೆ ಬಂದು ಆರು ವರ್ಷಗಳಾದವು. ಸಂಸ್ಕೃತವನ್ನು ಚೆನ್ನಾಗಿ ಓದಿಕೊಂಡಿದ್ದ ಹರಿತ ಬುದ್ಧಿಯ ಸೀತಾರಾಮಶಾಸ್ತ್ರಿ ಪ್ರೌಢ ವಯಸ್ಸಿಗೆ ಬರುತ್ತ ಸೀತಾರಾಮ ಶಾಸ್ತ್ರಿಗಳಾಗುವ ಅರ್ಹತೆ ಪಡೆದಿದ್ದರು. ಆದರೆ ಅವರಲ್ಲಿ ನೆಲೆಗೊಂಡ ಕೆಲವು ಹವ್ಯಾಸಗಳು ಚಟವಾಗಿ ಬೆಳೆಯುತ್ತ, ಅವಕ್ಕೆ ಹೊಸದಾಗಿ ಮತ್ತೆ ಕೆಲವು ಸೇರಿಕೊಳ್ಳುತ್ತ, ಮನೆಯಿಂದ ತಂದೆ ಕಳಿಸುತ್ತಿದ್ದ ಹಣ ದುಂದುವೆಚ್ಚವಾಗಿ ಕರಗಿ ಹೋಗುತ್ತಿತ್ತು. ಅವರ ಗೆಳೆಯರ ಗುಂಪೂ ದೊಡ್ಡದೇ. ಇಂಥದೇ ಸಂದರ್ಭದಲ್ಲಿ ಶಾಸ್ತ್ರಿಗಳಿಗೆ ಪರೀಕ್ಷಾಕಾಲ ಬಂತು. ಮನೆಯಿಂದ ತಂದೆ ಹಣ ಕಳಿಸುವುದನ್ನು ನಿಲ್ಲಿಸಿಬಿಟ್ಟರು. ಸಂಸ್ಕೃತ ಕಾಲೇಜಿನಿಂದಲೂ ಕಾರಣಾಂತರಗಳಿಂದ ಹೊರಬೀಳಬೇಕಾದ ಪರಿಸ್ಥಿತಿ ಬಂತು. ಭಿಕ್ಷಾನ್ನವೂ ದೊರಕದ ಸ್ಥಿತಿ. ಸೀತಾರಾಮ ಶಾಸ್ತ್ರಿಗಳಿಗೆ ಮುಂದೇನು ಎಂಬ ಚಿಂತೆ ಕಾಡಿತು. ಊರಿಗೆ ಮರಳಿ ಹೋಗಿ ಬಿಡೋಣವೇ ಎಂಬ ಯೋಚನೆ ಬಂತು. ತಂದೆಯವರೇನೋ ಪ್ರೀತಿಯಿಂದ ಸ್ವಾಗತಿಸಬಹುದು, ಅಣ್ಣ ತಮ್ಮಂದಿರು ಹಾಗೆ ಮಾಡಿಯಾರೇ? ಅಭಿಮಾನ ಬಿಟ್ಟು ಮತ್ತೆ ಊರಿಗೆ ಹೋಗುವುದು ಹೇಗೆ? ಬೆಂಗಳೂರಿನಲ್ಲಿ ಇಷ್ಟು ದಿನ ಕಳೆದ ಮೇಲೆ ಹಳ್ಳಿಯಲ್ಲಿ ಹೊಂದಿಕೊಳ್ಳಲು ಸಾಧ್ಯವೇ? ಎಂಬೆಲ್ಲ ಪ್ರಶ್ನೆಗಳು ಕಾಡಿದವು. ಅಂತೂ ಅಳೆದೂ ಸುರಿದೂ, ನಾಟಕ ಕಂಪನಿ ಸೇರಿ ಅದೃಷ್ಟ ಪರೀಕ್ಷೆ ಮಾಡುವುದೇ ಸರಿಯಾದ ದಾರಿ ಎಂಬ ನಿರ್ಧಾರಕ್ಕೆ ಬಂದರು.

ಕನ್ನಡ ನಾಟಕರಂಗಭೂಮಿಯ ಶ್ರೇಷ್ಠ ಕಲಾವಿದರೂ, ಸ್ವಯಂ ದೊಡ್ಡ ಕಂಪನಿಯೊಂದರ ಮಾಲೀಕರೂ ಆಗಿದ್ದ ಗರುಡ ಸದಾಶಿವರಾಯರು ತಮ್ಮ ದತ್ತಾತ್ರೇಯ ನಾಟಕ ಸಂಘದೊಂದಿಗೆ ಬೆಂಗಳೂರಿನಲ್ಲಿ ಮೊಕ್ಕಾಂ ಮಾಡಿದ್ದರು. ಸೀತಾರಾಮ ಶಾಸ್ತ್ರಿಯವರು ಗರುಡ ಸದಾಶಿವರಾಯರ

ಎಲ್ಲ ನಾಟಕಗಳನ್ನು ನೋಡುತ್ತಿದ್ದರು. ಪಾದುಕಾ ಪಟ್ಟಾಭಿಷೇಕ, ವಿಷಮ ವಿವಾಹ, ಕಬೀರದಾಸ - ಮುಂತಾದ ನಾಟಕಗಳಲ್ಲಿ ಅವರ ಅಭಿನಯ ಕೌಶಲ, ಮಾತಿನ ಗಾಂಭೀರ್ಯ, ಸಂಗೀತದ ಸೊಗಸು, ರಂಗಭೂಮಿಯ ಶಿಸ್ತು ಶಾಸ್ತ್ರಿಗಳ ಮನಸ್ಸನ್ನು ಸೆಳೆದಿದ್ದವು. ಅವರನ್ನು ಕಂಡು ಮಾತನಾಡುವ ಮನಸ್ಸಾದರೂ ಅದೇನೋ ಭಯ! ಮುಂಚಿತವಾಗಿ ಸದಾಶಿವರಾಯರಿಗೆ ಪತ್ರ ಬರೆದು ಅನಂತರ ಹೋಗಿ ಭೇಟಿಯಾದರು. ಗರುಡ ಸದಾಶಿವರಾಯರದು ಗಂಭೀರವಾದ ವ್ಯಕ್ತಿತ್ವ. ವ್ಯವಸ್ಥಿತ ಜೀವನಕ್ರಮ, ನಿಯಮಪಾಲನೆ, ಪ್ರಾಮಾಣಿಕತೆಗಳಿಗೆ ತುಂಬ ಬೆಲೆ ಕೊಡುತ್ತಿದ್ದರು. ನಾಟಕದಲ್ಲಿ ಪಾತ್ರ ವಹಿಸಬೇಕೆಂಬ ತಮ್ಮ ಇಚ್ಛೆಯನ್ನು ಗರುಡರ ಮುಂದೆ ಶಾಸ್ತ್ರಿಗಳು ಪ್ರಕಟಿಸಿದಾಗ, ಗರುಡರು ಸ್ಪಷ್ಟವಾಗಿಯೇ ಹೇಳಿದ್ದರು - 'ನಾಟಕ ರಂಗ ಪ್ರಪಂಚಕ್ಕೆ ನೀವಿನ್ನೂ ಹೊಸಬರು. ಮೊದಲು ತರಬೇತಿ ಪಡೆಯಬೇಕು. ಸದ್ಯಕ್ಕೆ ಒಂದು ವರ್ಷದ ಮಟ್ಟಿಗೆ ಕರಾರು ಪತ್ರ ಬರೆದುಕೊಟ್ಟು ಸೇರಿಕೊಳ್ಳಿ. ಊಟ ವಸತಿ ಕೊಟ್ಟು ವಾರದ ಖರ್ಚಿಗಾಗಿ ಎಂಟಾಣೆ ಕೊಡುತ್ತೇನೆ. ಮೊದಲು ಗೇಟ್ ಕೀಪಿಂಗ್, ಕುರ್ಚಿ ಹಾಕುವುದು - ಮಡಿಸುವುದು ಮಾಡುತ್ತ ನಾಟಕ ನೋಡಿ ತಿಳಿದುಕೊಳ್ಳಬೇಕು. ನಿಮಗೆ ಸ್ವಯಂ ಪಾತ್ರ ಮಾಡುವ ಸಾಮರ್ಥ್ಯ ಬಂದ ಮೇಲೆ ನೋಡೋಣ. ನಾಟಕ ಕಂಪನಿ ಅಂದರೆ ಸುಲಭ ಅಲ್ಲ. ಅನೇಕರು ಹೊರಗಿನ ಥಳಕಿಗೆ ಮರುಳಾಗಿ ಬರುತ್ತಾರೆ. ಅನಂತರ ನಾಲ್ಕೇ ದಿನಕ್ಕೆ ಇಲ್ಲಿನ ಕಷ್ಟ ತಾಳಲಾರದೆ, ಯಾರಿಗೂ ಹೇಳದೆ ಓಡಿಹೋಗುತ್ತಾರೆ. ಆದ್ದರಿಂದ ಚೆನ್ನಾಗಿ ಯೋಚಿಸಿ ನಿರ್ಧಾರಕ್ಕೆ ಬನ್ನಿ'.

ಗರುಡರ ಖಂಡತುಂಡ ಹೇಳಿಕೆ ಶಾಸ್ತ್ರಿಯವರನ್ನು ಧೈರ್ಯಗೆಡಿಸಿತು. ಸ್ನೇಹಿತರ ಕೂಟದಲ್ಲಿ ಈ ಬಗ್ಗೆ ಚರ್ಚೆಯಾಯಿತು. ಓದಿದಷ್ಟು ಸಂಸ್ಕೃತ ಹೊಟ್ಟೆಗೆ ಅನ್ನ ಕೊಡುವಂತಿರಲಿಲ್ಲ. ಊರಿಗೆ ಹೋಗುವಂತಿರಲಿಲ್ಲ. ದಿನದ ಊಟಕ್ಕೆ ಏನು ದಾರಿ? - ಎಂದೆಲ್ಲ ಶಾಸ್ತ್ರಿಗಳು ಯೋಚಿಸುತ್ತಿರುವಾಗಲೇ ದೈವವಶಾತ್ ವರದಾಚಾರ್ಯರನ್ನು ಭೇಟಿಯಾಗುವ ಸುಯೋಗ ಕೂಡಿ ಬಂದಿತ್ತು. ವರದಾಚಾರ್ಯರು ಕಾಯಿಲೆಯಿಂದ ನರಳುತ್ತ ಆಸ್ಪತ್ರೆಯಲ್ಲಿದ್ದರು. ಅವರನ್ನು ಕೇಳಿ ನಿರ್ಧಾರ ತೆಗೆದುಕೊಳ್ಳೋಣವೆಂದು ಶಾಸ್ತ್ರಿಗಳು ಆಚಾರ್ಯರನ್ನು ಕಂಡರು. ತಾಳ್ಮೆಯಿಂದ ಎಲ್ಲವನ್ನೂ ಕೇಳಿದ ವರದಾಚಾರ್ಯರು ಹೇಳಿದರು ' ಅಯ್ಯಾ ಕಲಾರಾಧನೆ ಒಂದು ತಪಸ್ಸು. ಅದಕ್ಕೆ ನಿಷ್ಠೆ ಬೇಕು, ಶ್ರದ್ಧೆ ಬೇಕು. ಆದರೂ ಅದು ಸುಲಭ ಅಲ್ಲ. ಸುಖವಂತೂ ಮೊದಲೇ ಇಲ್ಲ. ಕಷ್ಟಪಟ್ಟು ಸಾಧನೆ ಮಾಡಿದರೆ ಕೀರ್ತಿಯನ್ನು ಸಂಪಾದಿಸಬಹುದು. ನೀನು ಧೈರ್ಯವಂತ. ರಂಗಭೂಮಿ ಸೇರಿದರೆ ಹೆಸರುವಾಸಿಯಾಗುತ್ತೀಯಾ' ಎಂದು ಆಶೀರ್ವಾದ ಮಾಡಿದರು. ಸೀತಾರಾಮಶಾಸ್ತ್ರಿಗಳು ಮನಸ್ಸು ಗಟ್ಟಿ ಮಾಡಿದರು. ಗರುಡ ಸದಾಶಿವರಾಯರ ಬಳಿ ಹೋಗಿ ಹನ್ನೆರಡಾಣೆಯ ಸ್ಟ್ಯಾಂಪ್ ಪೇಪರ್ ಮೇಲೆ ಒಂದು ವರ್ಷಕ್ಕೆ ಕರಾರು ಬರೆದುಕೊಟ್ಟಿದ್ದೂ ಆಯಿತು. ಅದನ್ನು ಬಿಟ್ಟರೆ ಶಾಸ್ತ್ರಿಗಳಿಗೆ ಅನ್ಯಥಾ ಮಾರ್ಗವಿರಲಿಲ್ಲ.

ಗರುಡ ಸದಾಶಿವರಾಯರ ದತ್ತಾತ್ರೇಯ ನಾಟಕ ಮಂಡಳಿಯನ್ನು ಶಾಸ್ತ್ರಿಯವರು ಸೇರಿದ್ದು 1924ರಲ್ಲಿ. ಆಗ ಅವರಿಗೆ 18 ವರ್ಷ. ಯಾವ ಜವಾಬ್ದಾರಿಯೂ ಇಲ್ಲದೆ ಬೆಳೆದಿದ್ದ ಶಾಸ್ತ್ರಿಯವರಿಗೆ ಕಂಪನಿಯ ಜೀವನಕ್ಕೆ ಹೊಂದಿಕೊಳ್ಳುವುದು ಕಷ್ಟವಾಯ್ತು. ಅಲ್ಲಿ ಎಲ್ಲವೂ ವೇಳಾ ಪಟ್ಟಿಯಂತೆ ನಿಯಮಿತವಾಗಿ ನಡೆಯಬೇಕಾಗಿತ್ತು. ಕಠಿಣ ಶಿಸ್ತಿಗೆ ಒಗ್ಗಿಕೊಂಡ ಅಭ್ಯಾಸವಿಲ್ಲದ ಶಾಸ್ತ್ರಿಗಳು ಕಂಪನಿಯ ಕರಾರುವಾಕ್ಕಾದ ನಿಯಮಗಳಿಗೆ ಹೊಂದಿಕೊಳ್ಳಲು ತೊಂದರೆಪಡಬೇಕಾಯಿತು. ಆಹಾರ-ತಿನಿಸು-ನಿದ್ರೆ ಎಲ್ಲದರಲ್ಲೂ ವ್ಯತ್ಯಾಸವಾಗಿತ್ತು. ಗೆಳೆಯರ ಗುಂಪಿನ ಜೊತೆ ಹೋಟೆಲ್, ಬೀಡಿ, ಸಿಗರೇಟುಗಳಿಗಾಗಿ ದುಂದುವೆಚ್ಚ ಮಾಡುತ್ತಿದ್ದ ಅವರಿಗೆ ಈಗ ಎಲ್ಲ ಖಯಾಲಿಗಳಿಗೂ ಕಡಿವಾಣ ಹಾಕುವುದು ಅನಿವಾರ್ಯವಾಗಿತ್ತು.

ಗರುಡರ ನಾಟಕ ಮಂಡಳಿಯಲ್ಲಿ ಹೆಸರಾಂತ ಕಲಾವಿದರಿದ್ದರು. ಮುರುಗೋಡ ಗಂಗಾಧರಪ್ಪ, ಸೀತಾರಾಮ ಭಟ್ಟ ಗುಡಿ, ಎಲ್. ಪಾವಂಚೆಪ್ಪ, ಹಮ್ಮಿಗಿ ನೀಲಕಂಠಪ್ಪ, ಗಣೇಶ್ ಸುಂದರ, ನೀಲಕಂಠ ಬುವಾ ಮುಂತಾದವರಲ್ಲದೆ, ಸದಾಶಿವರಾಯರ ಭಾವ ಜಗನ್ನಾಥರಾವ್ ಕುಲಕರ್ಣಿ ಮುಂತಾದವರ ಸಾಮೀಪ್ಯ ಹಾಗೂ ಸ್ನೇಹಲಾಭ ಶಾಸ್ತ್ರಿಗಳಿಗೆ ತುಂಬ ಅನುಕೂಲವಾಯಿತು. ಹಮ್ಮಿಗಿ ನೀಲಕಂಠಪ್ಪ, ಮುರಗೋಡ ಗಂಗಾಧರಪ್ಪ, ನೀಲಕಂಠ ಬುವಾ ಇವರೆಲ್ಲ ಶ್ರೇಷ್ಠ ಗಾಯಕರೂ ಆಗಿದ್ದರು. ಅವರ ಹಾಡುಗಳಿಗೆ ಜನ ಮನ ಸೋಲುತ್ತಿದ್ದರು. ಇನ್ನೊಬ್ಬ ಸ್ತ್ರೀ ಪಾತ್ರಧಾರಿ ಗಣೇಶ ಸುಂದರ ಮೋಹಕವಾದ ಸ್ತ್ರೀ ಪಾತ್ರಕ್ಕೆ ಹೆಸರುವಾಸಿಯಾಗಿದ್ದರು. ಕಂಪನಿಯ ನಾಟಕಗಳಿಗೆ ಪಾತ್ರಧಾರಿಗಳನ್ನು ಸದಾಶಿವರಾಯರೇ ತರಬೇತುಗೊಳಿಸುತ್ತಿದ್ದರು. ಕಠಿಣ ಶಿಕ್ಷಣ ನೀಡಿ ತಿದ್ದುತ್ತಿದ್ದರು.

ನಾಟಕ ಕಂಪನಿಯ ಜೀವನ ವಿಧಾನಕ್ಕೆ ಶಾಸ್ತ್ರಿಗಳು ಹೊಂದಿಕೊಳ್ಳತೊಡಗಿದ್ದರು. ಸಂಸ್ಕೃತವನ್ನು ಚೆನ್ನಾಗಿ ಓದಿಕೊಂಡಿದ್ದ ಅವರ ಪಾಲಿಗೆ ಗರುಡರ ಮಗ ದತ್ತಾತ್ರೇಯನಿಗೆ ಸಂಸ್ಕೃತ ಕಲಿಸುವ ಜವಾಬ್ದಾರಿಯೂ ಬಿತ್ತು. ಜೊತೆಗೆ ಗೇಟ್ ಕೀಪರ್ ಕೆಲಸ, ಕುರ್ಚಿ ತೆಗೆಯುವುದು ಇತ್ಯಾದಿ. ಈ ಮಧ್ಯೆ ತಮ್ಮ ಖಯಾಲಿಗಾಗಿ ಅಷ್ಟಿಷ್ಟು ರೊಕ್ಕವನ್ನು ಗೇಟಿನಲ್ಲಿ ನಿಂತಾಗ ಸಂಪಾದಿಸುವ ತಂತ್ರವನ್ನೂ ಕಂಡುಕೊಂಡರು. ಸಾಹಿತ್ಯ ಜ್ಞಾನ, ಭಾಷಾ ಪಾಂಡಿತ್ಯವನ್ನು ಚೆನ್ನಾಗಿ ಗಳಿಸಿದ್ದ ಶಾಸ್ತ್ರಿಗಳು ಎಲ್ಲರ ಮೇಲೆ ತಮ್ಮ ವರ್ಚಸ್ಸನ್ನು ಹೆಚ್ಚಿಸಿಕೊಂಡರು. ಗರುಡರು ಅವರನ್ನು ಕಂಪನಿಯ ನಟರ ಭಾಷಾ ತರಬೇತುದಾರರನ್ನಾಗಿ ನೇಮಿಸಿಕೊಂಡರು. ತಿಂಗಳಿಗೆ ಇಪ್ಪತ್ತು ರೂಪಾಯಿ ಸಂಬಳ, ನಾಟಕಗಳ ಅಭ್ಯಾಸವೂ ಸಾಗಿತ್ತು.

ಶಾಸ್ತ್ರಿಗಳ ಪ್ರಖರ ಬುದ್ಧಿಮತ್ತೆಗೆ ಗರುಡರ ಕಂಪನಿಯಲ್ಲಿ ಅಭಿನಯಿಸುತ್ತಿದ್ದ ನಾಟಕಗಳಲ್ಲಿ ಹಲವು ದೋಷಗಳು ಕಾಣಿಸುತ್ತಿದ್ದವು. ಆದರೆ ಎದುರಿಗೆ ಹೇಳುವ ಧೈರ್ಯವಿರಲಿಲ್ಲ.

ವರದಾಚಾರ್ಯರ ನಾಟಕಗಳನ್ನೇ ಟೀಕಿಸಿ, ಅವರಿಂದಲೇ ಸೈ ಎನಿಸಿಕೊಂಡಿದ್ದ ಶಾಸ್ತ್ರಿಗಳಿಗೆ ಗರುಡರ ನಾಟಕಗಳನ್ನೂ ಟೀಕಿಸುವ ಆಸೆಯಾಯಿತು. ಬೇರೆ ಹೆಸರಿಟ್ಟುಕೊಂಡು ಪತ್ರಿಕೆಗಳಲ್ಲಿ ವಿಮರ್ಶೆ ಪ್ರಾರಂಭಿಸಿದರು. ಅದು 1928ನೇ ಇಸವಿ. ಕಂಪನಿ ಆಗ ಧಾರವಾಡದಲ್ಲಿತ್ತು. ಚೆನ್ನಾಗಿ ಆದಾಯವೂ ಆಗುತ್ತಿತ್ತು. ಪತ್ರಿಕೆಯಲ್ಲಿ ಟೀಕೆ ಬರತೊಡಗಿದ್ದನ್ನು ಕಂಡ ಗರುಡರು ಅದಕ್ಕೆ ಉತ್ತರ ಬರೆಯುವ ಕೆಲಸವನ್ನು ಶಾಸ್ತ್ರಿಗಳಿಗೇ ಕೊಟ್ಟರು. ಎಂಥ ವಿಚಿತ್ರ! ಟೀಕಿಸುವವರು ಉತ್ತರಿಸುವವರು ಒಬ್ಬರೇ ಆಗಿದ್ದರು! ಆಕಸ್ಮಾತ್ತಾಗಿ ಈ ಗುಟ್ಟು ಬಯಲಾದಾಗ ಗರುಡರಿಗೆ ಸಿಟ್ಟು ಬಂತು. ಶಾಸ್ತ್ರಿಗಳ ಬುದ್ಧಿವಂತಿಕೆಯನ್ನು ಕಂಡು ಬೆರಗುಪಟ್ಟರು. ಶಾಸ್ತ್ರಿಗಳನ್ನು ಕರೆಸಿಕೊಂಡು ಹೇಳಿದರು - ' ನೋಡು ಶಾಸ್ತ್ರಿ, ನಮ್ಮನ್ನೇ ನಾವು ಟೀಕಿಸಿಕೊಳ್ಳುವುದು ನಮಗೆ ನಾವೇ ದ್ರೋಹ ಮಾಡಿಕೊಂಡ ಹಾಗೆ. ದೋಷ ಎಲ್ಲಿಲ್ಲ. ನೀನೇ ನಿನ್ನ ಕಂಪನಿಯ ಗೌರವವನ್ನು ಕಳೆಯುವ ಕೆಲಸ ಮಾಡುವುದು ಸರಿಯೇ? ನಮ್ಮವರ ಪಿತೂರಿಯಿಂದಲೇ ನಮ್ಮ ದೇಶ ಹಾಳಾದ್ದನ್ನು ಚರಿತ್ರೆಯಲ್ಲಿ ಓದಿಲ್ಲವೇ? ಪತ್ರಿಕೆಯಲ್ಲಿ ಬರೆಯುವ ಬದಲು ನಮಗೇ ಹೇಳಬಹುದಿತ್ತಲ್ಲವೇ? ನೀನು ಬುದ್ಧಿವಂತ, ಪ್ರತಿಭಾವಂತ. ಇಂದಿನಿಂದ ನಿನ್ನನ್ನು ನಾಟಕಗಳ ಪ್ರಾಕ್ಟೀಸ್ ಮ್ಯಾನೇಜರ್ ಎಂದು ನೇಮಕ ಮಾಡಿದ್ದೇವೆ. ನಿನಗೆ 50 ರೂಪಾಯಿ ಸಂಬಳ. ಇನ್ನಾದರೂ ಕಂಪನಿಗೆ ನಿಷ್ಠನಾಗಿರು' - ಎಂದು ಬುದ್ಧಿವಾದ ಹೇಳಿದರು. ಶಾಸ್ತ್ರಿಗಳು ಗರುಡರ ಹೃದಯವಂತಿಕೆಗೆ ತಲೆಬಾಗಿದರು.

ಆದರೆ ಹುಡುಗಬುದ್ಧಿ ಆಗೀಗ ವಕ್ರವಾಗುತ್ತಿತ್ತು. ಗರುಡರು ಇಟ್ಟಿದ್ದ ವಿಶ್ವಾಸವನ್ನು ಬಳಸಿಕೊಂಡು ಶಾಸ್ತ್ರಿಗಳು ವ್ಯವಹಾರದಲ್ಲಿ ಶಾಖಾಯ ಲವಣಾಯ ಗಿಟ್ಟಿಸತೊಡಗಿದರು. ಈ ವಂಚನೆ ಗೊತ್ತಾದಾಗ ಗರುಡರು ಶಾಸ್ತ್ರಿಗಳನ್ನು ಕಂಪನಿಯಿಂದಲೇ ಕಿತ್ತು ಹಾಕುವ ನಿರ್ಣಯ ತೆಗೆದುಕೊಂಡರು. ಶಾಸ್ತ್ರಿಗಳು ತಮ್ಮ ದುಸ್ಥಿತಿಯನ್ನು ವಿವರಿಸಿ ತಪ್ಪೊಪ್ಪಿಗೆ ನೀಡಿದಾಗ, ಗರುಡರು ಔದಾರ್ಯದಿಂದ ಕ್ಷಮಿಸಿಬಿಟ್ಟರು. ವಾಸ್ತವವಾಗಿ ಶಾಸ್ತ್ರಿಗಳ ಜಾಣ್ಮೆ, ವಿದ್ವತ್ತುಗಳಿಗೆ ಗರುಡರು ಮಾರುಹೋಗಿದ್ದರು. ದರ್ಪ - ಗಾಂಭೀರ್ಯಗಳ ಜೊತೆಗೆ ಮುತ್ಸದ್ದಿಗಳೂ ಮುಂಧೋರಣೆಯುಳ್ಳವರೂ ಆಗಿದ್ದರು. ಅಂತೂ ಶಾಸ್ತ್ರಿಗಳು ಬಚಾವಾದರು. ಕಂಪನಿಯಲ್ಲಿ ಅವರ ನೆಲೆ ಮತ್ತಷ್ಟು ಗಟ್ಟಿಯಾಯಿತು.

## ಅಭಿನಯದ ಮೊದಲ ಹೆಜ್ಜೆ

ದತ್ತಾತ್ರೇಯ ನಾಟಕ ಕಂಪನಿ ಸೇರಿ 4 ವರ್ಷಗಳಾಗಿದ್ದವು. ಎಲ್ಲ ನಾಟಕಗಳನ್ನು ಅಭ್ಯಾಸ ಮಾಡಿದ್ದ ಶಾಸ್ತ್ರಿಗಳು ಚಿಕ್ಕಪುಟ್ಟ ಪಾತ್ರಗಳ ಮೂಲಕ ರಂಗಪ್ರವೇಶ ಮಾಡಿ ತಮ್ಮದೇ ಆದ ಸ್ಥಾನವನ್ನು ಗಳಿಸತೊಡಗಿದ್ದರು. ಆದರೆ ಮೊದಲ ಬಾರಿ ರಂಗದ ಮೇಲೆ ಬಂದಾಗ, ಕಿಕ್ಕಿರಿದು ತುಂಬಿದ್ದ ಪ್ರೇಕ್ಷಕರ ಮೇಲೆ ಎಲ್ಲ ನಾಟಕಗಳಲ್ಲಿಯೂ ಲೀಲಾಜಾಲವಾಗಿ ಎದುರು ಮಾತೇ

ಹೊರಡದೆ ಗಾಬರಿಯಾಗಿದ್ದರು. ಗರುಡರು ಧೈರ್ಯ ತುಂಬಿ ಪ್ರೋತ್ಸಾಹಿಸಿದ ಮೇಲೆ ಎಲ್ಲ ನಾಟಕಗಳಲ್ಲಿಯೂ ಲೀಲಾಜಾಲವಾಗಿ ಅಭಿನಯಿಸತೊಡಗಿದರು. ಅಭಿನಯ ಪಕ್ವಗೊಳ್ಳುತ್ತ ಹೋದಂತೆ ಪ್ರಮುಖ ಪಾತ್ರಗಳೂ ಅವರಿಗೆ ಮೀಸಲಾದವು. ಜನ್ಮಜಾತ ಪ್ರತಿಭೆಯೊಂದಿಗೆ ಆಸಕ್ತಿ ಶ್ರದ್ಧೆ ಶ್ರಮಗಳೂ ಸೇರಿಕೊಂಡು ಅವರನ್ನು ಶ್ರೇಷ್ಠ ಕಲಾವಿದರನ್ನಾಗಿ ರೂಪುಗೊಳಿಸತೊಡಗಿದವು.

ಪ್ರತಿದಿನ ಓದುವ ಅಭ್ಯಾಸವನ್ನು ಇರಿಸಿಕೊಂಡಿದ್ದ ಶಾಸ್ತ್ರಿಗಳು ಒಳ್ಳೆಯ ವಾಗ್ಮಿಗಳೂ ಒಳ್ಳೆಯ ಲೇಖಕರೂ ಆಗಿದ್ದರು. ಹಾಗಾಗಿ ಸಾಹಿತಿಗಳನೇಕರ ಸಂಪರ್ಕ ಲಾಭ ಅವರಿಗೆ ಆಗುತ್ತಿತ್ತು. ಕನ್ನಡ ಸಾಹಿತ್ಯ ಸಮ್ಮೇಳನದ ವೇದಿಕೆಯಲ್ಲಿ ಪರಿಚಿತರ ಕರ್ನಾಟಕ ತಿಲಕ ಮುದವೀಡು ಕೃಷ್ಣರಾಯರ ಸೂಚನೆಯಂತೆ ಮರಾಠಿ ಸಾಹಿತ್ಯವನ್ನು ಅಧ್ಯಯನ ಮಾಡಿದ ಶಾಸ್ತ್ರಿಗಳು, ಮರಾಠಿ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸುವ ಸಾಮರ್ಥ್ಯವನ್ನೂ ಪಡೆದರು. ಕುಶಾಗ್ರಬುದ್ಧಿಯ ಅವರು ಬೆರಳು ತೋರಿಸಿದರೆ ಹಸ್ತ ನುಂಗುವ ಚಾಣಾಕ್ಷರು. ಬಳ್ಳಾರಿಯಲ್ಲಿ ಕಂಪನಿ ಮೊಕ್ಕಾಂ ಮಾಡಿದ್ದಾಗ ಪಂಡಿತ ತಾರಾನಾಥ ಹಾಗೂ ಟಿ. ರಾಘವಾಚಾರ್ಯರ ಪರಿಚಯವಾಯಿತು. ಕಲಾದೇವತೆಯ ಉಪಾಸನೆಯನ್ನು ಕುರಿತು ತಾರಾನಾಥರು ನೀಡಿದ ಉಪನ್ಯಾಸವನ್ನು ಕೇಳಿದಾಗ ಕಲೆಯ ತಾತ್ವಿಕ ನೆಲೆಗಳು ಅವರಿಗೆ ಇನ್ನಷ್ಟು ಖಚಿತವಾದವು. ರಂಗಭೂಮಿಯ ದೈತ್ಯ ಪ್ರತಿಭೆ ಟಿ. ರಾಘವಾಚಾರ್ಯರ ಪಾತ್ರಗಳನ್ನು ಕಣ್ಣಾರೆ ಕಾಣುವ ಅವಕಾಶ ಲಭ್ಯವಾಯಿತು. ಇದರಿಂದ, ಅವರಿಗೆ ಅನುಸರಿಸುತ್ತಿದ್ದ ಪಾತ್ರ ನಿರೂಪಣೆಯ ವಿಧಾನವನ್ನೇ ಬದಲಿಸಿಬಿಡುವಷ್ಟು ಪ್ರಭಾವ ಉಂಟಾಯಿತು. ಮೊಟ್ಟ ಮೊದಲ ಬಾರಿಗೆ ಸೀತಾರಾಮ ಶಾಸ್ತ್ರಿಗಳು ರಂಗಭೂಮಿಯ ಸಾಧ್ಯತೆಗಳನ್ನು ಕುರಿತು ಹೊಸ ಚಿಂತನೆಯನ್ನು ಮಾಡುವಂತಾಯಿತು.

ಗರುಡರ ಮಾರ್ಗದರ್ಶನದಲ್ಲಿ, ಗರುಡರ ಗರಡಿಯಲ್ಲಿ ತಯಾರಾದ ಶಾಸ್ತ್ರಿಗಳು ಗರುಡರಷ್ಟೇ ಪ್ರಭಾವಶಾಲಿಯಾಗಿ ಪಾತ್ರಗಳನ್ನು ನಿರ್ವಹಿಸುತ್ತಿದ್ದರು. ಭಾವನೆಗಳಿಗೆ ಜೀವತುಂಬಿ ಮಾತನಾಡುತ್ತಿದ್ದ ಅವರು ಪಾತ್ರದಲ್ಲಿ ತನ್ಮಯರಾಗಿ ಅಭಿನಯಿಸುತ್ತಿದ್ದರು. ಮಾಯಾಬಜಾರ್ ನಾಟಕದ ಹುಚ್ಚ, ಚೌತಿಚಂದ್ರದ ಬ್ರಾಹ್ಮಣ ಮುಂತಾದವುಗಳ ಮೂಲಕ ಬೆಳೆಯುತ್ತ ಎಚ್ಚಮನಾಯಕ ನಾಟಕದ ದುರ್ಗಸಿಂಹ, ಕೀಚಕವಧೆಯ ಭೀಮ ಪಾತ್ರಗಳನ್ನು ನಿರ್ವಹಿಸುತ್ತಿದ್ದ ರೀತಿ ಜನಮೆಚ್ಚುಗೆ ಪಡೆಯಿತು. ಸರಿಸುಮಾರು ಗರುಡರಂತೆಯೇ ಕಾಣುತ್ತಿದ್ದ ಅವರು, ಅಭಿನಯದಲ್ಲಿಯೂ ಗರುಡರನ್ನೇ ಅನುಕರಿಸಿ ಅವರಿಗೆ ಸರಿಮಿಗಿಲೆನಿಸಿದರು. ಭಾವಾವೇಶದ ಅಭಿನಯದಲ್ಲಿ ವಾಸ್ತವ ಜಗತ್ತನ್ನು ಮರೆಯದಂತೆ ಗರುಡರೇ ಅವರನ್ನು ಎಚ್ಚರಿಸಬೇಕಾಗುತ್ತಿತ್ತು. ಒಮ್ಮೆ ಹೀಗಾಯಿತು - 'ಕೀಚಕವಧೆ' ನಾಟಕ ರಂಗದ ಮೇಲೆ ಸಾಗಿತ್ತು. ಎಂದಿನಂತೆ ಗರುಡರು ಕೀಚಕನಾಗಿ, ಶಾಸ್ತ್ರಿಗಳು ಭೀಮನಾಗಿ ಅಭಿನಯಿಸುತ್ತಿದ್ದರು. ಕೋಪಾವೇಶದಿಂದ ಗುಡುಗಾಡುತ್ತಿದ್ದ ಭೀಮ ಒಮ್ಮೆಲೇ ಕೀಚಕನನ್ನು ಅನಾಮತ್ತಾಗಿ ಮೇಲಕ್ಕೆತ್ತಿ ಗಿರಗಿರನೆ ತಿರುಗಿಸುವ ಸನ್ನಿವೇಶ.

ಗರುಡರಿಗೆ ಶಾಸ್ತ್ರಿಗಳ ಆವೇಶವನ್ನು ಕಂಡು ಭಯವಾಯಿತು. ಗಾಬರಿಯಿಂದ ಗರುಡರು ಪಿಸುಗುಟ್ಟಿದರು - 'ಲೇ ಶಾಸ್ತ್ರೀ, ನಿಧಾನಕ್ಕೆ ತಿರುಗಿಸೋ, ಹಾಗೇ ನಿಧಾನಕ್ಕೆ ಕೆಳಗಿಳಿಸು. ಕುಕ್ಕಿಬಿಟ್ಟೀಯಾ'... ಶಾಸ್ತ್ರಿಗಳಿಗೆ ಮೀಸೆಯಲ್ಲೇ ನಗು. ಹೀಗೆ ಸಿದ್ಧಿಯ ಶಿಖರವೇರಲು ತೊಡಗಿದ್ದ ಸಂದರ್ಭದಲ್ಲಿಯೇ ಇಂಗ್ಲಿಷ್ ರಂಗಭೂಮಿಯ ಪರಿಚಯವಿದ್ದ ರಾಘವಾಚಾರ್ಯರ ನಾಟಕಗಳು, ಶಾಸ್ತ್ರಿಗಳಿಗೆ ಹೊಸ ದಿಕ್ಕನ್ನು ತೋರಿಸಿದವು. ಈವರೆಗೆ ಅನುಭವಕ್ಕೆ ಬಂದ ಕನ್ನಡ ರಂಗಭೂಮಿಯ ಸಾಂಪ್ರದಾಯಿಕತೆಗಿಂತ ಭಿನ್ನವಾದ ಹೊಸ ವೈಚಾರಿಕ ದೃಷ್ಟಿ - ಒಳನೋಟಗಳನ್ನು ನಾಟಕಗಳ ಮೂಲಕ ನಿರೂಪಿಸುವ ವಿಧಾನ ಅವರಿಗೆ ಪರಿಚಯವಾಯಿತು.

ಸಾಮಾನ್ಯವಾಗಿ ಆ ಕಾಲದ ಶ್ರೇಷ್ಠ ನಟರೆಂದು ಹೆಸರು ಮಾಡಿದ ಅನೇಕರು ಅಭಿನಯ ಹಾಡುಗಾರಿಕೆಯ ಮೂಲಕ ಹೆಸರು ಗಳಿಸಿದ್ದರು. ನಿಜ. ಅವರಲ್ಲಿ ಹಲವರು ಪರಿಶ್ರಮದಿಂದ ಅವುಗಳನ್ನು ರೂಢಿಸಿಕೊಂಡಿದ್ದರು. ಸ್ವತಂತ್ರ ಪ್ರತಿಭೆಗಿಂತ ಕಷ್ಟಪಟ್ಟು ಅರಗಿಸಿಕೊಂಡ ತರಬೇತಿ ಅವರನ್ನು ರೂಪಿಸಿತ್ತು. ಹಲವು ನಟರು ಓದು-ಬರೆಹವನ್ನೂ ಬಲ್ಲವರಾಗಿರಲಿಲ್ಲ. ಸೀತಾರಾಮ ಶಾಸ್ತ್ರಿಗಳು ಹಾಗಲ್ಲ. ಅವರದು ಸೃಜನಶೀಲ ಪ್ರತಿಭೆ ಮಾತ್ರವಲ್ಲ. ಸ್ವತಂತ್ರ ಚಿಂತನೆಯ ವಿಮರ್ಶಾತ್ಮಕ ಮನೋಧರ್ಮವಿತ್ತು. ತುಲನೆ - ವಿವೇಚನೆ- ಆಲೋಚನೆ ಮಾಡಬಲ್ಲ ತನ್ನತನ ಅವರಲ್ಲಿತ್ತು. ಅಷ್ಟೇ ಅಲ್ಲದೆ, ತಮ್ಮ ವೈಚಾರಿಕ ನಿಲುವನ್ನು ಆಕರ್ಷಕವಾಗಿ ಬರೆಯಬಲ್ಲ ಲೇಖನಿಯ ಬಲವೂ ಅವರಿಗಿತ್ತು. ಡಿ. ಕೆ. ಭಾರದ್ವಾಜರ 'ರಂಗಭೂಮಿ' ಪತ್ರಿಕೆಯಲ್ಲಿ ಅವರು ಅನೇಕ ಲೇಖನಗಳನ್ನು ಬರೆದರು. ಕುಮಟಾದಿಂದ ಹೊರಡುತ್ತಿದ್ದ 'ಕರ್ನಾಟಕದ ಧುರೀಣ' ದಲ್ಲಿಯೂ ಲೇಖನಗಳನ್ನು ಬರೆದರು. ಆದರೆ ತಮ್ಮ ಬುದ್ಧಿಮತ್ತೆಯ ಬಗೆಗೆ ಅತಿಯಾದ ಆತ್ಮಪ್ರತ್ಯಯ ಹೊಂದಿದ್ದ ಶಾಸ್ತ್ರಿಗಳು ಅನ್ಯರ ದೋಷಗಳನ್ನು ಗುರುತಿಸಿ ಟೀಕಿಸುವಾಗ ಒಮ್ಮೊಮ್ಮೆ ಎಲ್ಲೆ ಮೀರುತ್ತಿದ್ದುದೂ ಉಂಟು. ಉತ್ಸಾಹದ ಭರದಲ್ಲಿ ಮಾಡಿದ ತಪ್ಪು ಅವರ ಗಮನಕ್ಕೆ ಬಂದಾಗ, ತಮ್ಮ ಟೀಕೆಯ ಬಗ್ಗೆ ತಾವೇ ನೊಂದುಕೊಳ್ಳುತ್ತಿದ್ದರು. ಗುಣಗ್ರಾಹಿಗಳಾಗಿದ್ದ ಅವರು ತಮ್ಮ ಅನೌಚಿತ್ಯವನ್ನು ತಾವೇ ಅರಿತು ತಿದ್ದಿಕೊಳ್ಳುತ್ತಿದ್ದರು. ಹಾಗೆ ನೋಡಿದರೆ ಇದರಿಂದ ಶಾಸ್ತ್ರಿಗಳಿಗೆ ಹಾನಿಗಿಂತ ಹೆಚ್ಚಾಗಿ ಲಾಭವೇ ಆಗಿತ್ತು. ಅವರ ಹರಿತವಾದ ಟೀಕೆಯು ಅನೇಕರನ್ನು ಕೆರಳಿಸಿ, ಪತ್ರಿಕೆಯಲ್ಲಿ ಉತ್ತರ ಪ್ರತ್ಯುತ್ತರಗಳ ಸಮರವನ್ನೇ ಉಂಟುಮಾಡಿ, ಅನಂತರ ಹತ್ತಿರದ ಪರಿಚಯಕ್ಕೆ ಕಾರಣವಾಗಿದ್ದ ಸಂದರ್ಭಗಳು ಹಲವು. ಖ್ಯಾತ ಸಾಹಿತಿ ಶಿವರಾಮ ಕಾರಂತರ ಪರಿಚಯ ಲಾಭವಾದದ್ದು ಇಂತಹದೇ ಒಂದು ಸನ್ನಿವೇಶದಲ್ಲಿ. ಲೇಖನಿ ಹಿಡಿದು ಕಾದಾಡಿದ ಇಬ್ಬರೂ ಅನಂತರ ಹತ್ತಿರ ಬಂದಿದ್ದರು.

ನಾಟಕ ಕಂಪನಿಯ ಬದುಕು ಶಾಸ್ತ್ರಿಗಳಿಗೆ ಜೀವನದ ಅನೇಕ ಕಠೋರ ಸತ್ಯಗಳ ಪರಿಚಯ ಮಾಡಿಕೊಡುತ್ತಿತ್ತು. ತತ್ವ-ಸಿದ್ಧಾಂತಗಳ ಸೂತ್ರಗಳೇ ಬೇರೆ, ವಾಸ್ತವ ಜಗತ್ತೇ ಬೇರೆ, ತತ್ವಗಳನ್ನು

ಪ್ರಯೋಗಕ್ಕಿಳಿಸುವುದು ತುಂಬ ಕಷ್ಟ - ಎಂಬುದು ಶಾಸ್ತ್ರಿಗಳಿಗೆ ನಿಧಾನವಾಗಿ ಅರಿವಿಗೆ ಬರತೊಡಗಿತ್ತು. ಎಷ್ಟೋ ಬಾರಿ ಬದುಕಲಿಕ್ಕಾಗಿ ಮನಸ್ಸಾಕ್ಷಿಯ ವಿರುದ್ಧ ರಾಜಿ ಮಾಡಿಕೊಳ್ಳಬೇಕಾದ ಸಂದರ್ಭಗಳೂ ಅರಿವಿಗೆ ಬರತೊಡಗಿದವು. ಆದರೆ ಕಲೆಯ ಶ್ರೇಷ್ಠತೆಯ ಬಗೆಗೆ ಎಂದೂ ರಾಜಿ ಮಾಡಿಕೊಂಡಿರಲಿಲ್ಲ ಅವರು.

1929ರಲ್ಲಿ ಗರುಡರ ಕಂಪನಿ ವಿಜಾಪುರದಲ್ಲಿ ಮುಕ್ಕಾಂ ಮಾಡಿತ್ತು. ಗರುಡರಿಗೆ ಹತ್ತಿರದವರಾಗಿದ್ದ ಜಗನ್ನಾಥರಾವ್ ಕುಲಕರ್ಣಿಯವರು ತಮ್ಮದೇ ಒಂದು ಕಂಪನಿಯನ್ನು ಕಟ್ಟಲು ಸಂಚು ನಡೆಸಿದ್ದರು. ಇಪ್ಪತ್ತು ಜನರನ್ನು ತಮ್ಮತ್ತ ಸೆಳೆದುಕೊಂಡಿದ್ದ ಅವರು ಸದಾಶಿವರಾಯರಿಗೆ ಸೂಚನೆಯನ್ನು ಕೊಟ್ಟಿದ್ದರು. ಆಗಿನ ದಿನಗಳೇ ಹಾಗೆ. ಹೆಚ್ಚಿನ ವೇತನ, ಹೆಚ್ಚಿನ ಸೌಲಭ್ಯಗಳ ಪ್ರಲೋಭನೆಗೆ ಮರುಳಾಗಿ ಕಲಾವಿದರು ಕಂಪನಿಯಿಂದ ಕಂಪನಿಗೆ ಜಿಗಿಯುತ್ತಿದ್ದರು. ಒಮ್ಮೊಮ್ಮೆ ಇದರಿಂದಾಗಿ ಕಂಪನಿಯ ಬುಡವೇ ಕುಸಿದುಹೋಗುತ್ತಿತ್ತು. ಆದರೆ ಗರುಡರ ಸಿದ್ಧಾಂತವೇ ಬೇರೆ. ಇಪ್ಪತ್ತು ಕಲಾವಿದರು ಒಮ್ಮೆಲೇ ಕಂಪನಿಯನ್ನು ಬಿಟ್ಟರೂ ಕಂಪನಿ ನಿಲ್ಲಬಾರದು. ಸಂಘದ ಹೆಸರು ಮಾಸಬಾರದು. ಅದಕ್ಕಾಗಿ ಅವರು ಹೊಸ ಕಲಾವಿದರನ್ನು ತರಬೇತುಗೊಳಿಸುವ ಜವಾಬ್ದಾರಿಯನ್ನು ಶಾಸ್ತ್ರಿಗಳಿಗೆ ವಹಿಸಿದ್ದರು. 'ಕಲಾವಿದರು ಚರ, ಆದರೆ ರಂಗಭೂಮಿ ಸ್ಥಿರ; ನಾಲ್ವರು ಹೋದರೆ ಐವರು ಬರುತ್ತಾರೆ. ರಂಗಭೂಮಿಯ ಉಳಿವಿಗಾಗಿ ಕಲಾವಿದರನ್ನು ರೂಪಿಸುತ್ತಲೇ ಇರಬೇಕು' - ಇದು ಗರುಡರ ಸಿದ್ಧಾಂತ. ಅಕಾರಣವಾಗಿ ಕಂಪನಿ ತೊರೆದು ಹೋಗಲು ನಿರ್ಧರಿಸಿದ್ದ ನಟರಿಗೆ ತಲೆಬಾಗಲಾರೆನೆಂಬ ಆತ್ಮಾಭಿಮಾನಿಗಳಾದ ಗರುಡರು, ಶಾಸ್ತ್ರಿಗಳನ್ನು ತುಂಬ ವಿಶ್ವಾಸದಿಂದ ಕಾಣುತ್ತಿದ್ದರು. ದತ್ತಾತ್ರೇಯ ನಾಟಕ ಸಂಘದ ಆಧಾರಸ್ತಂಭರೆನಿಸಿದ್ದ ಶಾಸ್ತ್ರಿಗಳು ಆ ದಿನಗಳಲ್ಲಿ ಸಂಘವು ಆಡುತ್ತಿದ್ದ ಯಾವುದೇ ನಾಟಕದ ಯಾವುದೇ ಪಾತ್ರವನ್ನಾದರೂ ನಿರ್ವಹಿಸಬಲ್ಲ ಸಮರ್ಥರಾಗಿದ್ದರು. ಗರುಡರ ವಿರುದ್ಧ ಬಂಡಾಯವೆದ್ದಿದ್ದ ಜಗನ್ನಾಥರಾವ್ ಕುಲಕರ್ಣಿಯವರಿಗೂ ಇದು ಚೆನ್ನಾಗಿ ತಿಳಿದಿತ್ತು. ಶಾಸ್ತ್ರಿಗಳ ಏಳಿಗೆಯನ್ನು ಕಂಡು ಕರುಬುತ್ತಿದ್ದ ಅವರು ಈಗ ತಮ್ಮ ವರಸೆಯನ್ನು ಬದಲಾಯಿಸಿ, ಹೇಗಾದರೂ ಮಾಡಿ ಶಾಸ್ತ್ರಿಗಳನ್ನು ಕಂಪನಿಯಿಂದ ಸೆಳೆದು ತಮ್ಮ ಕಡೆ ಸೇರಿಸಿಕೊಳ್ಳುವ ಹುನ್ನಾರ ನಡೆಸಿದ್ದರು. ಈ ಮೊದಲೆಂದೂ ಪ್ರೀತಿಯಿಂದ ಕಾಣದ ಅವರು ಸೀತಾರಾಮ ಶಾಸ್ತ್ರಿಗಳನ್ನು ಒಲಿಸಿಕೊಳ್ಳಲು ಹಿತೈಷಿಗಳಂತೆ ನಟಿಸತೊಡಗಿದ್ದರು. ಸರಳ-ಭಾವುಕ ಮನಸ್ಸಿನ ಶಾಸ್ತ್ರಿಗಳಿಗೆ ಈ ಒಳ ವ್ಯವಹಾರ ಅಷ್ಟಾಗಿ ತಿಳಿಯುತ್ತಿರಲಿಲ್ಲ.

ತುಂಬ ತಿಂಡಿಪೋತರಾಗಿದ್ದ ಶಾಸ್ತ್ರಿಗಳ ಖಯಾಲಿಗಳೆಲ್ಲ ಜಗನ್ನಾಥರಾಯರಿಗೆ ಗೊತ್ತಿತ್ತು. ಒಂದು ದಿನ ಬಿಡುವಿನ ಅವಕಾಶ ಸಾಧಿಸಿ ಅವರು ಶಾಸ್ತ್ರಿಗಳನ್ನು ಹೋಟೆಲ್ಲಿಗೆ ಕರೆದೊಯ್ದು, ಸ್ವಾದಿಷ್ಟವಾದ ತಿನಿಸನ್ನು ಕಂಠಮಟ್ಟ ತಿನ್ನಿಸಿ, ತೃಪ್ತ ಕ್ಷಣಗಳಲ್ಲಿ ನಾಜೂಕಾಗಿ ಅವರ ಮಿದುಳು ತೊಳೆಯುವ ಕೆಲಸ ಪ್ರಾರಂಭಿಸಿದರು - 'ನೋಡಯ್ಯಾ ಶಾಸ್ತ್ರಿ, ನೀನು ಈ ಗರುಡರನ್ನು ಕಂಡಿಲ್ಲವೆ?

ಏನು ದರ್ಪ, ಏನು ಅಹಂಕಾರ? ಅಲ್ಲ, ಸಾಮರ್ಥ್ಯದಲ್ಲಿ ನೀನು ಅವರಿಗೆ ಏನು ಕಡಿಮೆ? ನಾಟಕ ಬರೆಯೋದರಲ್ಲಿಯೂ ನಿನ್ನನ್ನು ಮೀರಿಸುವವರು ಯಾರು? ನಮ್ಮ ಕಂಪನಿಗೆ ಬಂದರೆ ನಿನ್ನ ಸ್ಥಾನ-ಗೌರವ ಇನ್ನಷ್ಟು ಮೇಲೇರುತ್ತೆ. ನೀನು ಬರೆದ ನಾಟಕವನ್ನೇ ಆಡಬಹುದು. ಗರುಡರು ಮಾಡುತ್ತಿದ್ದ ಪಾತ್ರಗಳನ್ನು ನೀನೇ ಮಾಡಿ ಸೈ ಅನಿಸಿಕೊಳ್ಳಬಹುದು. ಯೋಚಿಸಿ ನೋಡು, ಗರುಡರ ಜೊತೆಗಿದ್ದರೆ ಇದಕ್ಕೆಲ್ಲ ಅವಕಾಶವೆಲ್ಲಿ? ನೀನು ಮುಂದಕ್ಕೆ ಬರಬೇಕೆಂದಾದರೆ ಈ ಗರುಡರ ಸುತ್ತಿನಿಂದ ತಪ್ಪಿಸಿಕೊಂಡು ಹೊರಗೆ ಬರುವುದೊಂದೇ ದಾರಿ'.....

ಜಗನ್ನಾಥರಾಯರ ಮಾತುಗಳು ಶಾಸ್ತ್ರಿಗಳಿಗೆ ತುಂಬ ಆಪ್ಯಾಯಮಾನವಾಗಿದ್ದವು. ಜಗನ್ನಾಥರಾಯರು ಹೇಳುತ್ತಿರುವುದರಲ್ಲಿ ಅವರಿಗೆ ತಪ್ಪೇನೂ ಕಾಣಲಿಲ್ಲ. ಇಂಥ ಅವಕಾಶ ತಾನಾಗಿಯೇ ಬಾಗಿಲಿಗೆ ಬಂದಿರುವಾಗ ಸುಮ್ಮನೇ ಬಿಡುವುದೇ? ಗರುಡರು ಮಾಡುತ್ತಿದ್ದ ಪಾತ್ರಗಳನ್ನು ನಿರ್ವಹಿಸಿ 'ಭಲೇ' ಎನ್ನಿಸಿಕೊಳ್ಳುವ ಛಾನ್ಸ್'. ಹೊಸ ಹೊಸ ನಾಟಕಗಳನ್ನು ಬರೆದು ರಂಗಕ್ಕೆ ತರುವ ಅವಕಾಶ! ಯಾರಿಗುಂಟು ಯಾರಿಗಿಲ್ಲ?ರಾಯರ ಮಾತುಗಳನ್ನು ಶಾಸ್ತ್ರಿಗಳ ಕಿವಿ ಹಿಗ್ಗಿನಿಂದ ಕೇಳಿತು. ಆದರೆ ಶಾಸ್ತ್ರಿಗಳಿಗೆ ಏನೋ ಭಯ. ರಂಗಭೂಮಿಯನ್ನೇರಲು ಓನಾಮ ಹೇಳಿಕೊಟ್ಟು ಅವಕಾಶವಿತ್ತಿದ್ದ ಗರುಡರನ್ನು ಶಾಸ್ತ್ರಿಗಳು ಗುರುವೆಂದೇ ಭಾವಿಸಿದ್ದರು. ಅಲ್ಲದೆ ಹಿಂದೊಮ್ಮೆ - 'ಎಂದೂ ತಮ್ಮ ಕಂಪನಿಯನ್ನು ಬಿಟ್ಟು ಹೋಗುವುದಿಲ್ಲ' ಎಂದು ಗರುಡರಿಗೆ ಪ್ರತಿಜ್ಞಾಪತ್ರವನ್ನು ಬರೆದುಕೊಟ್ಟಿದ್ದರು. ಹೀಗಿರುವಾಗ ಗರುಡರನ್ನು ಬಿಡುವುದು ಹೇಗೆ? ಇಂಥ ಆಪತ್ಕಾಲದಲ್ಲಿ ಗರುಡರು ಶಾಸ್ತ್ರಿಗಳನ್ನೇ ನಂಬಿಕೊಂಡಿದ್ದರು ಬೇರೆ. ಇದು ದ್ರೋಹವಾಗಲಿಕ್ಕಿಲ್ಲವೇ ಎಂಬ ಚಿಂತೆ ಅವರನ್ನು ಕಾಡಿತು. ಹಾಗೆಂದು ತನ್ನ ಸ್ವಂತದ ಉಜ್ವಲ ಭವಿಷ್ಯವನ್ನು ತಾನೇ ಮಣ್ಣುಗೂಡಿಸಿಕೊಳ್ಳಬೇಕೇ? ಎಂಬ ಯೋಚನೆಯೂ ಬಾಧಿಸಿತು. ಏನು ಮಾಡುವುದೆಂದು ತೋಚದೆ ಸಂದಿಗ್ಧ ಸ್ಥಿತಿಯಲ್ಲಿದ್ದ ಅವರಿಗೆ ಜಗನ್ನಾಥರಾಯರು ಹೇಳಿಕೊಟ್ಟ ಉಪಾಯ ಸರಿಯೆನ್ನಿಸಿತು. 'ಶಾಸ್ತ್ರೀ, ಹೀಗೆ ಮಾಡು. ಅಂದರೆ ನೀನು ಪಾರಾಗಬಹುದು. ಈಗಲೇ ಊರಿಗೆ ಒಂದು ಪತ್ರ ಬರೆದು 'ತಕ್ಷಣ ಊರಿಗೆ ಬಾ' ಎಂದು ಟೆಲಿಗ್ರಾಂ ಕಳಿಸುವಂತೆ ತಿಳಿಸು. ಟೆಲಿಗ್ರಾಂ ಬರುತ್ತಲೇ ಗರುಡರಿಗೆ ತೋರಿಸು. ಆಗ ಅವರು ಒಪ್ಪಲೇಬೇಕಾಗುತ್ತದೆ. ಊರಿಗೆ ಹೋದವನು ಅಲ್ಲಿಂದಲೇ ಒಂದು ಪತ್ರ ಬರೆದು ಬಿಡು. 'ಕಂಪನಿಗೆ ಇನ್ನು ನಾನು ಬರುವುದಿಲ್ಲ' ಎಂದು. ಹಾಯಾಗಿ ನಾಲ್ಕು ದಿನ ಊರಿನಲ್ಲಿರು. ನಾವೆಲ್ಲ ಕಂಪನಿ ಬಿಟ್ಟು ಒಂದು ಕಡೆ ಸೇರಿದ ಮೇಲೆ ನಿನಗೆ ಪತ್ರ ಹಾಕುತ್ತೇನೆ. ಆಗ ಅಲ್ಲಿಗೆ ನೇರವಾಗಿ ಬಂದುಬಿಡು'

ಶಾಸ್ತ್ರಿಗಳಿಗೆ ಜಗನ್ನಾಥರಾಯರ ಸಲಹೆ ಹಿಡಿಸಿತು. ತಕ್ಷಣವೇ ರಾಯರು ಅವರಿಂದ ಊರಿಗೆ ಪತ್ರವನ್ನು ಬರೆಯಿಸಿಯೇ ಬಿಟ್ಟರು. ಶಾಸ್ತ್ರಿಗಳು ಒಳಗೊಳಗೇ ಚಿಂತಿತರಾದರೂ ಏನೂ ತಿಳಿಯದವರಂತೆ ಕರ್ತವ್ಯನಿರತರಾಗಿದ್ದರು. ನಿರೀಕ್ಷಿಸಿದಂತೆ ನಾಲ್ಕನೇ ದಿನ ಊರಿನಿಂದ ಟೆಲಿಗ್ರಾಂ

ಬಂತು. 'ಕೂಡಲೇ ಊರಿಗೆ ಹೊರಟು ಬಾ' ಇಷ್ಟೇ ಒಕ್ಕಣೆ ಇತ್ತು. ಕಾರಣವೇನೆಂದು ತಿಳಿಸಿರಲಿಲ್ಲ. ಎಂಥ ತುರ್ತೋ ಗೊತ್ತಾಗುತ್ತಿರಲಿಲ್ಲ.

ಎಲ್ಲವೂ ಗೊತ್ತಿದ್ದ ಶಾಸ್ತ್ರಿಗಳಿಗೆ ಆತಂಕ-ಚಡಪಡಿಕೆ. ಮನಸ್ಸಿನಲ್ಲಿ ಹೊಯ್ದಾಟ. ಧೈರ್ಯದಿಂದ ಟೆಲಿಗ್ರಾಂ ಗರುಡರಿಗೆ ತೋರಿಸಿದರು. 'ಹೌದಲ್ಲ ಶಾಸ್ತ್ರಿ, ಒಳ್ಳೆಯ ಸಂದಿಗ್ಧ ಆಯಿತಲ್ಲ. ಊರಿಗೆ ಹೋಗಿ ಬಾ. ಯಾಕೆ ಏನು ಅಂತ ತಿಳಿದುಕೊಳ್ಳಬೇಕಲ್ಲ. ಆದರೆ ಏನೇ ಇದ್ದರೂ ಊರಿನಲ್ಲಿ ತಡ ಮಾಡಬೇಡ. ಹೆಚ್ಚೆಂದರೆ ಎರಡು ದಿನ ಇದ್ದು, ಮೂರನೆಯ ಸಂಜೆ ಮರಳಿ ಇಲ್ಲಿರಬೇಕು. ನೀನಿಲ್ಲದೆ ನಾಟಕ ಆಡೋದು ಹೇಗೆ? ಎರಡು ದಿನ ಹೇಗಾದರೂ ದೂಡಬೇಕಾಗಿದೆ. ನಾವಿರುವ ಸ್ಥಿತಿ ನಿನಗೆ ಗೊತ್ತಲ್ಲ! ಹೊಸಬರಿಗೆ ತರಬೇತಿ ನೀನೇ ಕೊಡಬೇಕು' - ಎಂದು ಹೇಳಿ ಗರುಡರು 50 ರೂಪಾಯಿಗಳನ್ನೂ ಕೊಟ್ಟರು. ಗರುಡರು ಇಟ್ಟಿದ್ದ ವಿಶ್ವಾಸ, ಕಂಪನಿ ಎದುರಿಸುತ್ತಿದ್ದ ಬಿಕ್ಕಟ್ಟು ಎರಡೂ ಗೊತ್ತಿದ್ದ ಸೀತಾರಾಮಶಾಸ್ತ್ರಿಗಳ ಕೈ ನಡುಗಿತು. ಊರಿಗೆ ಹೊರಡುವ ಸಿದ್ಧತೆ ನಡೆಸಲೆಂದು ರೂಮಿನೊಳಕ್ಕೆ ಹೋಗುವಾಗಲೂ ಮನಸ್ಸಿನಲ್ಲಿ ಅಳುಕು ತಪ್ಪಿರಲಿಲ್ಲ. ಯಾಕೆಂದರೆ ಬದುಕಿನ ದಾರಿ ತೋಚದೆ ದಿಕ್ಕುಗೆಟ್ಟಿದ್ದಾಗ ಗರುಡರು ಅವರಿಗೆ ಆಸರೆ ನೀಡಿ ಜೀವನಕ್ಕೆ ಭದ್ರತೆಯನ್ನು ಒದಗಿಸಿಕೊಟ್ಟಿದ್ದರು. ಕನ್ನಡ ರಂಗಭೂಮಿಯಲ್ಲಿ ಒಂದು ಸ್ಥಾನ ದೊರಕಲು ಕಾರಣೀಭೂತರಾಗಿದ್ದರು. ಅವರ ಬಗೆಗೆ ಭಯ-ಭಕ್ತಿಯನ್ನು ಇಟ್ಟುಕೊಂಡಿದ್ದ ಶಾಸ್ತ್ರಿಗಳನ್ನು ವಂಚನೆಯ ಪಾಪಭೀತಿ ಕಾಡತೊಡಗಿತ್ತು. ಆದರೆ ಸಾಕಷ್ಟು ಮುಂದಾಲೋಚನೆ ಮಾಡಿದ್ದ ಜಗನ್ನಾಥರಾವ್ ಕುಲಕರ್ಣಿಯವರು ಗದುಗಿನವರೆಗೆ ಟ್ರೇನ್ ಟಿಕೆಟ್ ತೆಗೆಸಿದ್ದನ್ನು ತಂದು ಶಾಸ್ತ್ರಿಗಳ ಕೈಯಲ್ಲಿಟ್ಟರು. ಜಗನ್ನಾಥರಾಯರು ರಚಿಸಿದ ವ್ಯೂಹ ಎಷ್ಟು ಎಚ್ಚರಿಕೆಯಿಂದ ಕೂಡಿತ್ತೆಂದರೆ, ಗದುಗಿನಲ್ಲಿ ಶಾಸ್ತ್ರಿಗಳನ್ನು ಸ್ವಾಗತಿಸಲು ಜಗನ್ನಾಥರಾಯರ ನಿರ್ದೇಶನದಂತೆ ವ್ಯಕ್ತಿಯೊಬ್ಬರು ಹಾಜರಾಗಿದ್ದರು. ರೈಲಿನಲ್ಲಿ ಬರುವಾಗ ಉದ್ದಕ್ಕೂ ಮನಸ್ಸಿನಲ್ಲಿ ನಡೆದ ತಾಕಲಾಟ ಇನ್ನೂ ನಿಂತಿರಲಿಲ್ಲ. ಅತಿಥೇಯರಾದ ದತ್ತಂಭಟ್ಟರೆಂಬವರ ಮನೆಯಲ್ಲಿ ರಾತ್ರಿ ಉಳಿದಿದ್ದಾಯಿತು. ಹೇಗೋ ರಾತ್ರಿ ಕಳೆದು ಬೆಳಗಾಯಿತು. ಅಸ್ತವ್ಯಸ್ತ ಮನಸ್ಥಿತಿಯಲ್ಲಿರುವಾಗಲೇ ದತ್ತಂಭಟ್ಟರು ಗರುಡರಿಗೆ ಟೆಲಿಗ್ರಾಂ ಕೊಡಿಸಿಯೇ ಬಿಟ್ಟರು - 'ನಾನು ಕಂಪನಿಗೆ ಬರುವುದಿಲ್ಲ' ಎಂದು.

ವಿವೇಕಿಯಾದ ಮನುಷ್ಯನು ಒಂದು ಕ್ಷಣ ತಪ್ಪು ದಾರಿ ಹಿಡಿದಾಗ, ಅವನ ವಿವೇಕವೇ ಅವನನ್ನು ಎಚ್ಚರಿಸುತ್ತದೆ. ಅಂತಃಸಾಕ್ಷಿ ಮತ್ತು ಬಹಿಃಪ್ರಜ್ಞೆಯ ತಿಕ್ಕಾಟದಲ್ಲಿ, ವಿವೇಕಿಯಾದವನ ಅಂತಃಸಾಕ್ಷಿಗೇ ಗೆಲುವಾಗುತ್ತದೆ. ಸೀತಾರಾಮ ಶಾಸ್ತ್ರಿಗಳಿಗೆ ತಮ್ಮ ದುಡುಕು ಈಗ ನಿಚ್ಚಳವಾಯಿತು! ಬಣ್ಣದ ಮಾತುಗಳಿಗೆ ಮರುಳಾಗಿ ಜಗನ್ನಾಥರಾಯರ ಜೊತೆ ಸೇರಿದರೆ ಒಳ್ಳೆಯದಾದೀತೆ? ಸುಸ್ಥಿತಿಯಲ್ಲಿರುವ ಗರುಡರ ಕಂಪನಿಯನ್ನು ಬಿಟ್ಟು, ಸೇರುತ್ತಿರುವುದು ಎಂಥ ಕಂಪನಿಯನ್ನು? ಅಲ್ಲಿ ಭದ್ರತೆಯೇನಿದೆ, ಬಂಡವಾಳವೇನಿದೆ? ಕಂಪನಿಯನ್ನು ಕಟ್ಟುವುದು ಸುಲಭವೇ? ಇಷ್ಟಕ್ಕೂ

ಗರುಡರಿಂದ ನನಗಾದ ಅನ್ಯಾಯವೇನು? ಅಷ್ಟೊಂದು ವಿಶ್ವಾಸ, ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದ ಗುರು ಗರುಡರಿಗೆ ಪ್ರತಿಯಾಗಿ ನಾನು ಕೊಟ್ಟಿದ್ದೇನು? ಅತ್ತ ಅವರಿಗೂ ಅನ್ಯಾಯ ಮಾಡಿ, ಇತ್ತ ನನ್ನ ಭವಿಷ್ಯವನ್ನು ನಾನೇ ಹಾಳು ಮಾಡಿಕೊಳ್ಳುತ್ತಿದ್ದೇನೆಯೇ? ಕೂಡದು... ಕೂಡದು...? - ಎಂದು ವಿವೇಕ ಕೂಗುತ್ತಿತ್ತು.

ಸೀತಾರಾಮ ಶಾಸ್ತ್ರಿಗಳು ಮರಳಿ ವಿಜಾಪುರಕ್ಕೆ ಹೋಗುವ ತಮ್ಮ ನಿರ್ಧಾರವನ್ನು ಪ್ರಕಟಿಸಿ, ಸಂದರ್ಭ ಬಂದಾಗ ಜಗನ್ನಾಥರಾಯರ ಕಂಪನಿಗೆ ಬರುವುದಾಗಿ ತಿಳಿಸುವಂತೆ ಹೇಳಿಬಿಟ್ಟರು. ಜಾಣರಾದ ದತ್ತುಭಟ್ಟ ತರ್ಕಬದ್ಧ ವಾದದಿಂದ ಶಾಸ್ತ್ರಿಗಳ ನಿರ್ಧಾರವನ್ನು ಬದಲಿಸುವ ಪ್ರಯತ್ನ ಮಾಡಿದರು. ಆದರೆ ಶಾಸ್ತ್ರಿಗಳು ಕೈಗೊಂಡ ತೀರ್ಮಾನ ಅಚಲವಾಗಿತ್ತು. ರಾತ್ರಿ ಪುನಃ ವಿಜಾಪುರಕ್ಕೆ ರೈಲು ಹತ್ತಿದರು. ಮನಸ್ಸಿಗೆ ಸಮಾಧಾನವೆನಿಸಿದರೂ ಏನೋ ಸಣ್ಣ ಅಳುಕು ಕಾಡುತ್ತಿತ್ತು. 'ಆಗಲೇ ಟೆಲಿಗ್ರಾಂ ತಲುಪಿರುತ್ತದೆ. ಗರುಡರು ನನ್ನ ಬಗ್ಗೆ ಸಿಟ್ಟಿನಿಂದ ಕೆಂಡವಾಗಿರುತ್ತಾರೆ. ಪುನಃ ಹೋದರೆ ನನ್ನನ್ನು ಸ್ವೀಕರಿಸುತ್ತಾರೆಯೇ?'ಯಾಕೆ ಬಂದೆ, ತೊಲಗು' - ಅಂದರೇನು ಮಾಡುವುದು? ಯಾವ ವಿಶ್ವಾಸದಿಂದ ನನ್ನನ್ನು ಬರಮಾಡಿಕೊಂಡಾರು? ಅವರಿಗೆ ಮುಖ ತೋರಿಸುವುದಾದರೂ ಹೇಗೆ?- ಹೀಗೆಲ್ಲ ಯೋಚನೆ ಆದರೆ ಗರುಡರ ದೊಡ್ಡ ಗುಣವನ್ನೂ, ಸದ್ಯದ ಅವರ ಸ್ಥಿತಿಯನ್ನೂ ಬಲ್ಲ ಅವರಿಗೆ ಏನೋ ಧೈರ್ಯ. ಅಂತೂ ಬೆಳಗಿನ ಆರು ಗಂಟೆಗೆ ವಿಜಾಪುರ ಸೇರಿ ಗರುಡರ ಮನೆಗೆ ಹೋದಾಗ, ಅವರ ಮುಖದಲ್ಲಿ ಸಂತೋಷ - ಸಮಾಧಾನ ಸ್ಪಷ್ಟವಾಗಿತ್ತು. 'ಬಂದೆಯಾ, ಬಾ... ನಿನ್ನ ದಾರೀನೇ ಕಾಯ್ತಾ ಇದ್ದೆ. ನಿನ್ನ ಟೆಲಿಗ್ರಾಂ ತಲುಪಿದೆ. ಆದರೂ ನನಗೆ ಗೊತ್ತಿತ್ತು. ನೀನು ಬಂದೇ ಬರ್ತೀಯಾ ಅಂತ. ನನ್ನ ವಿಶ್ವಾಸ ಹುಸಿಹೋಗಲಿಲ್ಲ'....

ಗರುಡರ ಕಂಠ ತುಂಬಿ ಬಂದಿತ್ತು, ಶಾಸ್ತ್ರಿಗಳಿಗೆ ಮಾತೇ ಹೊರಡಲಿಲ್ಲ. ನಿಶ್ಶಬ್ದ ಮೌನವು ಸಾವಿರ ಮಾತಿಗಿಂತ ಹೆಚ್ಚು ಸಶಕ್ತವಾಗಿತ್ತು. ಅವರು ಏನನ್ನೂ ಕೇಳದೆಯೇ ಎಲ್ಲವನ್ನೂ ತಿಳಿದುಕೊಂಡಿದ್ದರು, ಇವರು ಏನನ್ನೂ ಹೇಳದೆಯೆ ಎಲ್ಲವನ್ನೂ ನಿವೇದಿಸಿಕೊಂಡಿದ್ದರು. ಚಹಾ ಕುಡಿದು ಹೊರಗೆ ಬರುವಾಗ, ಇಷ್ಟಕ್ಕೆಲ್ಲ ಮುಖ್ಯ ಕಾರಣಕರ್ತರಾದ ಜಗನ್ನಾಥರಾಯರು ಎದುರಾದರು. ಒಂದು ಮಾತನ್ನೂ ಆಡಲಿಲ್ಲ. ತಾನು ಮಾಡಿದ ಅಪರಾಧಕ್ಕೆ ಪಶ್ಚಾತ್ತಾಪಪಟ್ಟು, ಶಾಸ್ತ್ರಿಗಳು ಹೊಸ ನಟರನ್ನು ರಂಗಭೂಮಿಗೆ ಅಣಿ ಮಾಡುವ ಕೆಲಸಕ್ಕೆ ಸಮರ್ಪಿಸಿಕೊಂಡರು. ಜಗನ್ನಾಥರಾಯರು ತಮ್ಮ ಸಂಗಡಿಗರೊಡನೆ ಹೊರಟುಹೋದರೂ ತನ್ನ ಬದುಕಿಗೆ ಆಸರೆ ನೀಡಿದ ಗರುಡರ ಕಂಪನಿ ಕುಸಿಯದಂತೆ ನೋಡಿಕೊಳ್ಳಬೇಕೆಂದು ಹಟ ತೊಟ್ಟರು. ನಿರೀಕ್ಷಿಸಿದಂತೆ 8-10 ದಿನಗಳಲ್ಲಿ ಸುಮಾರು 20 ಜನ ಕಂಪನಿಯನ್ನು ಬಿಟ್ಟು ಹೊರಟೇ ಹೋದರು. ಗರುಡರು ಅವರನ್ನು ತಡೆಯಲಿಲ್ಲ; ತಲೆಬಾಗಲೂ ಇಲ್ಲ. ಹೊಸ ನಟರನ್ನು ಹಾಕಿಕೊಂಡು ಅದೇ ದಿನ ನಾಟಕ ಆಡಿಯೇ ಬಿಟ್ಟರು. ಇದರ ಹಿಂದೆ ಶಾಸ್ತ್ರಿಗಳ ಶ್ರಮವಿತ್ತು, ಶ್ರದ್ಧೆಯಿತ್ತು, ನಿಷ್ಠೆಯಿತ್ತು.

ಕಾಲದ ಗತಿ ತುಂಬ ವಿಚಿತ್ರವಾದದ್ದು, ಅಂದುಕೊಂಡಂತೆಯೇ ಎಲ್ಲವೂ ಆಗುವಂತಿದ್ದರೆ ವಿಧಿಗೇನು ಕೆಲಸ? ಶಾಸ್ತ್ರಿಗಳು ಗರುಡರ ಕಂಪನಿಯ ಮಾನ ಕಾಯ್ದದ್ದೇನೋ ನಿಜ. ಆದರೆ ಗರುಡರು ಶಾಸ್ತ್ರಿಗಳನ್ನು ಪೂರ್ಣ ನಂಬಿರಲಿಲ್ಲ. ಒಮ್ಮೆ ಕೈಕೊಟ್ಟು ಹೋಗುವ ನಿರ್ಧಾರ ಮಾಡಿದ್ದ ಶಾಸ್ತ್ರಿಗಳನ್ನು ಅವಿಶ್ವಾಸದಿಂದಲೇ ನೋಡುತ್ತಿದ್ದ ಗರುಡರು ತಮ್ಮ ಸ್ವಾರ್ಥಕ್ಕಾಗಿ ಧೂರ್ತತನದಿಂದ ವರ್ತಿಸುತ್ತಿದ್ದರು. ಅವರ ಮನಸ್ಸಿನಲ್ಲಿ ಏನೋ ಕಹಿ ಶಾಸ್ತ್ರಿಗಳ ಬಗ್ಗೆ ತುಂಬಿತ್ತೆಂದು ತೋರುತ್ತದೆ. ಅದು ಪ್ರಕಟವಾಗುವ ಸಂದರ್ಭವೂ ಒಮ್ಮೆ ಬಂದಿತು. ಸದಾಶಿವರಾಯರ ಕಂಪನಿಯ ಉಳಿವಿಗಾಗಿ ತಮ್ಮ ವ್ಯಕ್ತಿಗತ ಲಾಭ -ಸ್ಥಾನಮಾನಗಳನ್ನು ಪಡೆಯುವ ಕನಸನ್ನೂ ಬಿಟ್ಟುಕೊಟ್ಟ ಸೀತಾರಾಮಶಾಸ್ತ್ರಿಗಳಿಗೆ ಗೌರವ ಮುಕ್ಕಾಗುವ ಘಟನೆಯೊಂದು ನಡೆದುಹೋಯಿತು. ಮನುಷ್ಯನ ಭಾವ ವೈಪರೀತ್ಯಗಳನ್ನು ಯಾರು ಬಲ್ಲರು?

ಅದು ಆದದ್ದು ಹೀಗೆ, ಊರಿನಿಂದ ಶಾಸ್ತ್ರಿಗಳಿಗೆ ಒಂದು ಪತ್ರ ಬಂದಿತ್ತು. ತಂದೆ ಅನಂತಯ್ಯ ಬರೆದಿದ್ದರು - 'ಸೀತಾರಾಮ, ನಿನಗೆ ಈಗ ಮದುವೆ ವಯಸ್ಸು. ತಂದೆಯಾಗಿ ನನ್ನ ಜವಾಬ್ದಾರಿಯನ್ನು ಮುಗಿಸಬೇಕಾಗಿದೆ. ಈ ವರ್ಷ ನಿನ್ನ ಲಗ್ನ ಮಾಡಬೇಕೆಂದು ಯೋಚಿಸಿದ್ದೇವೆ. ನೀನು ಸಾಧ್ಯವಾದಷ್ಟು ಹಣ ಸಂಗ್ರಹಿಸುವ ಪ್ರಯತ್ನ ಮಾಡು' ಶಾಸ್ತ್ರಿಗಳು ಒಂಟಿ ಜೀವನದಿಂದ ಬೇಸತ್ತಿದ್ದರು. ತಂದೆಯ ಅಭಿಪ್ರಾಯವನ್ನು ಗರುಡರಿಗೆ ತಿಳಿಸಿ, ಮುಂಗಡವಾಗಿ ಒಂದು ನೂರು ರೂಪಾಯಿ ಕೇಳಿದರು. ಗರುಡರಿಗೆ ಆಗ ಏನೂ ಉತ್ತರ ಹೇಳದೇ ಕೇಳಿಸಿಕೊಂಡು ಮೌನವಾಗಿದ್ದರು. ಆದರೆ ಕಂಪನಿಯ ಇತರ ನಟರ ಎದುರಿಗೆ - 'ನೂರು ರೂಪಾಯಿ ಬೇಕಂತೆ, ಅಷ್ಟೆಲ್ಲ ಹಣ ಇವನಿಗೆ ಕೊಡೋರು ಯಾರು?ಕಂಪನಿ ಬಿಟ್ಟು ಹೋಗೋದಾದರೆ ಹೋಗಲಿ, ಇವನಿಂದೇನಾಗಬೇಕಾಗಿದೆ?' - ಎಂದರಂತೆ. ಈ ಸುದ್ದಿ ಸೀತಾರಾಮಶಾಸ್ತ್ರಿಗಳ ಕಿವಿಗೆ ಬಿತ್ತು. ಮನಸ್ಸಿಗೆ ತುಂಬಾ ನೋವಾಯಿತು. ಹೀಗೆ ಅನ್ನಿಸಿಕೊಂಡು ಕಂಪನಿಯಲ್ಲಿರುವುದೆ? ಅಭಿಮಾನಿಗಳಾದ ಶಾಸ್ತ್ರಿಗಳಿಗೆ ಗರುಡರ ಆಶ್ರಯದಲ್ಲಿರಲು ಮನ ಬಾರದಾಯಿತು. ಒಂದು ತಿಂಗಳು ಹೇಗೋ ಕಳೆದು ದತ್ತಾತ್ರೇಯ ನಾಟಕ ಸಂಘಕ್ಕೆ ಶರಣು ಹೊಡೆದು ಊರಿಗೆ ಹೊರಟೇಬಿಟ್ಟರು. ಇಷ್ಟು ದಿನ ಅನ್ನವಿತ್ತು ಕಾಪಾಡಿದ ಕಂಪನಿಯನ್ನು ಬಿಡುವುದು ಅವರಿಗೆ ಸುಲಭವಾಗಿರಲಿಲ್ಲ. ಆದರೆ ಅದನ್ನು ಬಿಟ್ಟು ಬೇರೆ ದಾರಿಯೂ ಇರಲಿಲ್ಲ.

## ಪ್ರಸಿದ್ಧಿಯ ಹಾದಿಯಲ್ಲಿ

ಜಗನ್ನಾಥರಾವ್ ಕುಲಕರ್ಣಿ ಗರುಡರ ಕಂಪನಿಯಿಂದ ಕೆಲವು ನಟರನ್ನು ಒಡೆದುಕೊಂಡು ಹೊರಬಿದ್ದು ಹೊಸ ನಾಟಕ ಸಂಘ ಕಟ್ಟಿದ್ದರು. ಅದರ ಹೆಸರು 'ಗುರು ಸಮರ್ಥ ನಾಟಕ ಮಂಡಳಿ' ಎಂದು. ಅದು ರಾಣೆಬೆನ್ನೂರಿನಲ್ಲಿ ಠಿಕಾಣಿ ಹೂಡಿತ್ತು. ಗರುಡರನ್ನು ತೊರೆದು ಹೋಗುವಾಗಲೇ ಜಗನ್ನಾಥರಾಯರು ಶಾಸ್ತ್ರಿಗಳಿಗೆ ಆಮಿಷ ಒಡ್ಡಿದುದು ಹುಸಿಹೋಗಿತ್ತು. ರಾಯರಿಗೆ ತುಸು

ಅಸಮಾಧಾನವಾಗಿದ್ದರೂ ಎಂದಾದರೊಂದು ದಿನ ಶಾಸ್ತ್ರಿಗಳು ಗರುಡರ ಕಂಪನಿ ಬಿಟ್ಟು ಹೊರಬರಲೇಬೇಕಾಗುತ್ತದೆಂಬ ನಂಬಿಕೆಯಿಂದ ಜಗನ್ನಾಥರಾಯರು ಅವರ ನಿರೀಕ್ಷೆಯಲ್ಲಿ ಪತ್ರವ್ಯವಹಾರವನ್ನು ನಡೆಸಿಯೇ ಇದ್ದರು. ಸೀತಾರಾಮ ಶಾಸ್ತ್ರಿಗಳು ಗರುಡರ ಕಂಪನಿ ಬಿಟ್ಟವರು ಊರಿಗೆ ಹೋದರೂ, ಕೆಲದಿನಗಳಲ್ಲಿಯೇ ಹಳ್ಳಿಯ ಜೀವನ ಬೇಸರ ತಂದಿತ್ತು. ರಂಗಭೂಮಿಯ ಬಣ್ಣದ ಬದುಕಿಗೆ ಹೊಂದಿಕೊಂಡಿದ್ದ ಅವರಿಗೆ ಹಳ್ಳಿಯ ಜೀವನ ಬೇಸರ ತಂದಿತ್ತು. ಅವರಿಗೆ ಹಳ್ಳಿಯ ಮಣ್ಣಿನ ಬದುಕು ಆಕರ್ಷಕವೆನ್ನಿಸಲಿಲ್ಲ. ಅಲ್ಲದೆ ಜೀವನಕ್ಕೊಂದು ಮಾರ್ಗ ಹುಡುಕಬೇಕಲ್ಲ; ಎಷ್ಟೋ ಬಾರಿ, ಇಷ್ಟವಿರಲಿ ಇಲ್ಲದಿರಲಿ, ತಾತ್ವಿಕವಾಗಿ ವಿರೋಧವೇ ಇರಲಿ, ಪರಿಸ್ಥಿತಿಯ ಜೊತೆ ರಾಜಿ ಮಾಡಿಕೊಳ್ಳಬೇಕಾಗುತ್ತದೆ. ರಂಗಭೂಮಿಯೇ ತನ್ನ ಕರ್ಮಭೂಮಿ. ಏನನ್ನಾದರೂ ಸಾಧಿಸುವುದಿದ್ದರೆ ಅಲ್ಲಿಯೇ ಎಂಬುದು ಅವರ ನಿಶ್ಚಯವಾಗಿತ್ತು. ಗರುಡರಿಂದ ಆದ ಅವಮಾನಕ್ಕೆ ಪ್ರತಿಯಾಗಿ, ಅವರಿಗೆ ಸರಿ ಮಿಗಿಲೆನಿಸುವಂತೆ ಪಾತ್ರಗಳನ್ನು ಮಾಡಿ ತಮ್ಮ ಅಸ್ತಿತ್ವವನ್ನು ಸ್ಥಾಪಿಸಬೇಕು ಎಂಬುದೂ ಅವರ ಮನದ ಬಯಕೆಯಾಗಿತ್ತು. ಅದಕ್ಕೆ ತಕ್ಕ ಅವಕಾಶಗಳು ಗುರು ಸಮರ್ಥ ನಾಟಕ ಮಂಡಳಿಯಲ್ಲಿ ಸಿಗುವುದೆಂಬ ಭರವಸೆಯೂ ಇತ್ತು. ಜಗನ್ನಾಥರಾಯರ ಜೊತೆ ಪತ್ರ ಸಂಪರ್ಕವಂತೂ ಇದ್ದೇ ಇತ್ತು. ಅಂತೂ ಊರಿನಿಂದ ಮರಳಿದ ಶಾಸ್ತ್ರಿಗಳು ನೇರವಾಗಿ ರಾಣೆಬೆನ್ನೂರಿಗೆ ಬಂದರು.

ಜಗನ್ನಾಥರಾಯರು ಶಾಸ್ತ್ರಿಗಳನ್ನು ಆದರದಿಂದಲೇ ಸ್ವಾಗತಿಸಿದರು. ಶಾಸ್ತ್ರಿಗಳಂಥ ಪ್ರತಿಭಾವಂತ ನಟ - ನಾಟಕಕಾರನ ಅವಶ್ಯಕತೆ ಅವರ ಮಂಡಳಿಗೆ ತುಂಬಾ ಇತ್ತು. ಗರುಡರ ಕಂಪನಿಯಲ್ಲಿ ಆಡುತ್ತಿದ್ದ ನಾಟಕಗಳನ್ನು ಆಡಲು, ಗರುಡರು ನಿರ್ವಹಿಸುತ್ತಿದ್ದ ಪಾತ್ರಗಳನ್ನು ನಿರ್ವಹಿಸಲು ಶಾಸ್ತ್ರಿಗಳೇ ತಕ್ಕವರಾಗಿದ್ದರು. ಹೀಗಾಗಿ ಜಗನ್ನಾಥರಾಯರು ಶಾಸ್ತ್ರಿಗಳನ್ನು ಬರಮಾಡಿಕೊಂಡು, ಸೂಕ್ತವಾದ ನಾಟಕಗಳನ್ನು ಆಯ್ಕೆ ಮಾಡಿ ನಟರನ್ನು ತರಬೇತಿಗೊಳಿಸುವ ಸ್ವಾತಂತ್ರ್ಯ - ಜವಾಬ್ದಾರಿಗಳನ್ನು ಅವರಿಗೆ ವಹಿಸಿದರು. ಗರುಡರು ಆಡುತ್ತಿದ್ದ ' ವಿಷಮ ವಿವಾಹ', 'ಚೌತಿ ಚಂದ್ರ', 'ಮಾಯಾ ಬಜಾರ್', 'ಭಕ್ತ ಸುಧಾಮ' ಮುಂತಾದ ನಾಟಕಗಳನ್ನು ಕೂಡಿಸುವ ಹೊಣೆಯನ್ನು ಶಾಸ್ತ್ರಿಗಳೇ ಹೊತ್ತರು. ಗರುಡರು ವಹಿಸುತ್ತಿದ್ದ ಪಾತ್ರಗಳನ್ನೂ ಮಾಡಿದರು.

ನಾಟಕ ಕಂಪನಿಗಳೆಂದ ಮೇಲೆ ಎಲ್ಲ ಬಗೆಯ ಜನರೂ ಇರುತ್ತಿದ್ದರು. ಹೇಳಿಕೊಟ್ಟಷ್ಟನ್ನು ಮಾತ್ರ ಯಂತ್ರದಂತೆ ಒಪ್ಪಿಸುವ ಕೆಲವರು ಆಕಸ್ಮಾತ್ ಸಂದರ್ಭ ಬದಲಾದರೆ ಗಲಿಬಿಲಿಗೊಂಡು ಅಪಹಾಸ್ಯಕ್ಕೆ ಒಳಗಾಗುತ್ತಿದ್ದರು. ಕೆಲವರಿಗೆ ಕಂಠಶ್ರೀ ಚೆನ್ನಾಗಿರುತ್ತಿತ್ತು. ಅಭಿನಯದ ಗಂಧವೇ ಇರುತ್ತಿರಲಿಲ್ಲ. ಕೆಲವರು ಹಾಡುಗಳನ್ನು ಸೊಗಸಾಗಿ ಹಾಡುತ್ತ, ಜನರ ಪ್ರಶಂಸೆಗೆ ಉಬ್ಬಿ ಹಾಡಿನಲ್ಲಿ ಮೈಮರೆತುಬಿಡುತ್ತಿದ್ದರು. ಕೆಲವರನ್ನು ತಿದ್ದಿ ತರಬೇತಿಗೊಳಿಸುವ ಹೊತ್ತಿಗೆ ಕಂಪನಿ ಬಿಟ್ಟು ಓಡಿಹೋಗುತ್ತಿದ್ದರು. ಇಂಥವರನ್ನೆಲ್ಲ ಹೊಂದಿಸಿಕೊಂಡು ಕಂಪನಿ ನಡೆಸುವುದೆಂದರೆ ಸಾಹಸದ

ಕೆಲಸವೇ ಆಗಿರುತ್ತಿತ್ತು. ಉತ್ತಮವಾದ ಪರದೆ-ಸೀನರಿಗಳು, ಚೆನ್ನಾಗಿ ಪಾತ್ರ ನಿರ್ವಹಿಸಬಲ್ಲ ನಟರು, ಎಲ್ಲರನ್ನೂ ವಿಶ್ವಾಸದಿಂದ ನೋಡಿಕೊಂಡು ಹೋಗುವ ಮಾಲೀಕರು, ವ್ಯವಹಾರ ಚತುರ ಮ್ಯಾನೇಜರರು - ಈ ಎಲ್ಲವೂ ಸರಿಯಿದ್ದು ಅದೃಷ್ಟವೂ ಚೆನ್ನಾಗಿದ್ದರೆ ಕಂಪನಿ ಗಟ್ಟಿಯಾಗಿ ನಿಲ್ಲುತ್ತಿತ್ತು. ಆದರೆ ಗುರುಸಮರ್ಥ ನಾಟಕ ಮಂಡಳಿಗೆ ಇನ್ನೂ ಬಾಲಗ್ರಹವೇ ಬಿಟ್ಟಿರಲಿಲ್ಲ. ಆರ್ಥಿಕ ಸ್ಥಿತಿಯೂ ಭದ್ರವಿರಲಿಲ್ಲ. ನಟರು ಕಾಯಂ ಆಗಿ ನಿಲ್ಲುತ್ತಿರಲಿಲ್ಲ. ಆಡುತ್ತಿದ್ದ ನಾಟಕಗಳು ಹಳೆಯವಾಗಿದ್ದು, ಜನರು ನೋಡಲು ಬರುತ್ತಿರಲಿಲ್ಲ, ಹೊಸ ನಾಟಕಗಳನ್ನು ಕೊಡಿಸಬೇಕಾಗಿತ್ತು. ಅದಕ್ಕೆ ಹಣ -ಸಮಯ ಬೇಕಿತ್ತು. ಇಷ್ಟಾಗಿ ಪ್ರಯೋಗ ಸಫಲವಾಗಿಯೇ ಬಿಡುವುದೆಂಬ ಭರವಸೆ ಇರಲಿಲ್ಲ.

ಕಂಪನಿ ಮಂಗಳೂರಿನಲ್ಲಿದ್ದಾಗ ಇಂಥ ಒಂದು ಪ್ರಯೋಗ ನಡೆದಿತ್ತು. ಹೊಸ ನಾಟಕ ಬರೆದು ಕೊಡಲು ಶಿವರಾಮ ಕಾರಂತರನ್ನು ಕೇಳಿಕೊಳ್ಳಲಾಗಿತ್ತು. ಅವರ ಹೊಸ ನಾಟಕ 'ಕಠಾರಿ ಭೈರವ'ದ ನಿರ್ದೇಶನದ ಹೊಣೆಯನ್ನು ಕಾರಂತರೇ ಸ್ವಯಂ ಹೊತ್ತು ನಟರನ್ನು ತರಬೇತಿಗೊಳಿಸಿದ್ದರು. ಅದೊಂದು ವಿಷಾದಾಂತ ನಾಟಕ. ಆದರೆ ನಾಟಕ ಯಶಸ್ವಿಯಾಗಲೇ ಇಲ್ಲ. ಬದಲಿಗೆ ಕಂಪನಿಯ ಆರ್ಥಿಕ ಸ್ಥಿತಿ ಪೂರ್ತಿ ಕುಸಿದು ಹೋಯಿತು. ಸಂಬಳ ಕೊಡಲೂ ಹಣವಿರಲಿಲ್ಲ. ಸಾಲ ಹೆಚ್ಚುತ್ತಲೇ ಹೋಯಿತು. ಊಟ-ತಿಂಡಿಗೂ ಪರದಾಡುವ ಸ್ಥಿತಿ. ಇದೂ ಸಾಲದೆಂಬಂತೆ ಜಗನ್ನಾಥರಾಯರು ಕಾಯಿಲೆಯಿಂದ ಹಾಸಿಗೆ ಹಿಡಿದು ಮಲಗಿದ್ದರು. ಇಂಥ ಸ್ಥಿತಿಯಲ್ಲಿ ಮಂಡಳಿಯ ಪೂರ್ಣ ಜವಾಬ್ದಾರಿ ಸೀತಾರಾಮ ಶಾಸ್ತ್ರಿಗಳ ಹೆಗಲಿಗೆ ಬಿತ್ತು. ಸೋಲೊಪ್ಪಿಕೊಂಡು ಓಡುವ ಜಾಯಮಾನ ಶಾಸ್ತ್ರಿಗಳದಾಗಿರಲಿಲ್ಲ.

ಹೊಸ ನಾಟಕವನ್ನು ಕೊಡಿಸಿ ರಂಗಕ್ಕೆ ತರುವುದೊಂದೇ ಇದಕ್ಕೆ ಉಪಾಯವೆಂದು ಶಾಸ್ತ್ರಿಗಳಿಗೆ ಮನದಟ್ಟಾಯಿತು. ಆದರೆ ಯಾವ ನಾಟಕ ತರುವುದು? ಯಾರೂ ಈ ವರೆಗೆ ಆಡದ ನಾಟಕವಾಗಿರಬೇಕು. ಅಭಿನಯಕ್ಕೆ ಹೆಚ್ಚಿನ ಅವಕಾಶವಿರಬೇಕು. ರಸೋತ್ಕಟವಾದ ಸನ್ನಿವೇಶಗಳಿಂದ ಕೂಡಿದ್ದು, ಪ್ರೇಕ್ಷಕರ ಭಾವನೆಗಳನ್ನು ತಟ್ಟಿ ಎಬ್ಬಿಸಬೇಕು. ಸಮಕಾಲೀನ ಸಮಾಜಕ್ಕೆ ಕನ್ನಡಿ ಹಿಡಿಯುವಂತಿರಬೇಕು. ಹೀಗೆಲ್ಲ ಸೂತ್ರಗಳನ್ನು ರೂಪಿಸಿಕೊಂಡ ಶಾಸ್ತ್ರಿಗಳು ತಾವೇ ಒಂದು ನಾಟಕ ಬರೆದರು. ವ್ಯಾಪಕವಾಗಿ ಓದುತ್ತಿದ್ದ ಅವರಿಗೆ ಆ ನಾಟಕದ ವಸ್ತು ಸಿಕ್ಕಿದ್ದು ಮರಾಠಿಯಲ್ಲಿ. ಮೂಲ ಮರಾಠಿ ನಾಟಕ 'ಪಂತಾಚಿ ಸೂನ್' ಎಂಬುದನ್ನು ವಾಸ್ತವಿಕತೆ ಹಾಗೂ ರಂಗ ಸಾಧ್ಯತೆ ಎರಡನ್ನೂ ಗಮನದಲ್ಲಿರಿಸಿಕೊಂಡು ರೂಪಾಂತರಿಸಿ ಕನ್ನಡ ರಂಗಭೂಮಿಗೆ ಒಗ್ಗುವಂತೆ ಮಾರ್ಪಡಿಸಿದರು. ನಾಟಕವನ್ನು ಬರೆದು ಮಸಿ ಆರುವ ಮುನ್ನವೇ ರಂಗಕ್ಕೇರಿಸಿ ಪ್ರದರ್ಶನ ನಡೆಸುವ ತರಾತುರಿಯ ಪ್ರಯತ್ನವನ್ನು ನಡೆಸಿದರು. ಯಾಕೆಂದರೆ ಕಂಪನಿ ಜೀವನ - ಮರಣಗಳ ತೂಗುಯ್ಯಾಲೆಯಲ್ಲಿತ್ತು. ಹೊಸ ನಾಟಕದ ಗುಟುಕು ಕುಡಿಸಿ ಬದುಕಿಸಲೇ ಬೇಕಾಗಿತ್ತು.

ಶಾಸ್ತ್ರಿಗಳ ಈ ಹೊಸ ನಾಟಕ 'ವರದಕ್ಷಿಣೆ' ಮನ ಮಿಡಿಯುವ ಕಥಾವಸ್ತುವನ್ನೊಳಗೊಂಡಿತ್ತು. ಸಮಕಾಲೀನ ಸಮಾಜದ ಜ್ವಲಂತ ಸಮಸ್ಯೆಯ ವಾಸ್ತವದ ಸ್ಪರ್ಶವೂ ಇತ್ತು. ಭಾವನೆಗಳನ್ನು ಆರ್ದ್ರಗೊಳಿಸಿ, ತೀವ್ರ ಸಂವೇದನಶೀಲ ಪ್ರೇಕ್ಷಕರನ್ನು ತಲುಪಿ, ಅಂತಃಕರಣವನ್ನು ಕಲಕುವ ಈ ನಾಟಕವು ಸಾಹಿತ್ಯಕ ಗುಣವುಳ್ಳ ಸಂಭಾಷಣೆ ಹಾಗೂ ಭಾವಪೂರ್ಣ ಅಭಿನಯದ ಅವಕಾಶಗಳನ್ನು ಒಳಗೊಂಡಿತು. ನಾಟಕದ ಮುಖ್ಯಪಾತ್ರವಾದ ಲಕ್ಷ್ಮೀ ಪತಿರಾಯ ತನ್ನ ಮಗನಿಗೆ ಹೆಣ್ಣು ತರುವಾಗ ಮೂರು ಸಾವಿರ ರೂಪಾಯಿಗಳ ವರದಕ್ಷಿಣೆ ಕೊಡಬೇಕೆಂದು ಕರಾರು ಹಾಕುತ್ತಾನೆ. ಬಡತನದಲ್ಲಿ ಬೇಯುತ್ತಿದ್ದ ತಂದೆ ಪೂರ್ಣ ಹಣವನ್ನು ಕೊಡಲಾರದ ಸ್ಥಿತಿಯಲ್ಲಿರುವಾಗ, ಮನೆ ತುಂಬಿಸಿಕೊಂಡ ಗುಣವಂತೆ ಸೊಸೆಯನ್ನು ಮನೆಯಿಂದ ಹೊರತಳ್ಳುತ್ತಾನೆ. ಬಗೆಬಗೆಯ ಸಂಕಟಗಳಲ್ಲಿ ಸಿಲುಕಿದರೂ ಆಕೆಯ ಬಗ್ಗೆ ನಿಷ್ಕರುಣೆಯಿಂದ ನಡೆದುಕೊಳ್ಳುತ್ತಾನೆ. ಆಕೆಯನ್ನು ಪುನಃ ಮನೆ ಸೇರುವಂತೆ ಮಾಡುವ, ಹಾಗೂ ಧನದಾಹದ ಲಕ್ಷ್ಮೀಪತಿರಾಯನಿಗೆ ಬುದ್ಧಿ ಕಲಿಸುವ ಉಪಾಯ ಹೂಡಿದ ಡಾಕ್ಟರರೊಬ್ಬರ ಪ್ರಯತ್ನ ಫಲಿಸುತ್ತದೆ. ಅಂತಿಮವಾಗಿ ಲಕ್ಷ್ಮೀಪತಿರಾಯನ ಮನಸ್ಸು ಪರಿವರ್ತನೆಯಾಗಿ ನಾಟಕ ಸುಖಾಂತಗೊಳ್ಳುತ್ತದೆ.

ಈ ನಾಟಕದಲ್ಲಿ ಶಾಸ್ತ್ರಿಗಳು ಲಕ್ಷ್ಮೀಪತಿರಾಯನ ಪಾತ್ರದಲ್ಲಿ ಕಾಣಿಸಿಕೊಂಡು, ಅವನ ಹಣದ ದಾಹ, ದರ್ಪ, ಕಾಠಿಣ್ಯ, ಅಹಂಕಾರಗಳಿಗೆಲ್ಲ ಜೀವ ತುಂಬಿ ಅಭಿನಯಿಸಿದರು. ಕಂಚಿನ ಕಂಠ, ಎತ್ತರದ ನಿಲುವು, ತುಂಬಿದ ದೇಹದ ಶಾಸ್ತ್ರಿಗಳು ಆ ಪಾತ್ರಕ್ಕಾಗಿಯೇ ರೂಪುಗೊಂಡಂತಿದ್ದರು. ಅತ್ಯಂತ ತನ್ಮಯತೆಯಿಂದ ಪಾತ್ರ ನಿರ್ವಹಿಸುವಾಗ ಶಾಸ್ತ್ರಿಗಳು ತಮ್ಮ ಪ್ರತಿಭೆ -ಪರಿಶ್ರಮ - ಕೌಶಲಗಳನ್ನೆಲ್ಲ ಧಾರೆಯೆರೆಯುತ್ತಿದ್ದರು. ಮನುಷ್ಯ ಲೋಕದ ವಿಭಿನ್ನ ಗುಣ ಸ್ವಭಾವಗಳ ಪ್ರತಿನಿಧಿಗಳೆನಿಸಿದ ಹಲವು ಪಾತ್ರಗಳ ಒಂದು ಸಂಕೀರ್ಣ ಜಗತ್ತು ಈ ನಾಟಕದಲ್ಲಿ ಜೀವ ತಳೆಯುತ್ತಿತ್ತು. ಆದರೆ ಮೊದಲ ಬಾರಿಗೆ ಈ ನಾಟಕ ರಂಗಕ್ಕೇರಿದಾಗ ಶಾಸ್ತ್ರಿಗಳಿಗೂ ಒಂದು ಬಗೆಯ ಆತಂಕವಿತ್ತು. ಯಾಕೆಂದರೆ 'ವರದಕ್ಷಿಣೆ' ನಾಟಕದ ಯಶಸ್ಸನ್ನೇ ಆಧರಿಸಿ ಅವರ ಭವಿಷ್ಯ ನಿಂತಿತ್ತು.

ಶಾಸ್ತ್ರಿಗಳ ಗ್ರಹಗತಿ ಚೆನ್ನಾಗಿತ್ತು. ನಾಟಕ ಜಯಭೇರಿ ಬಾರಿಸಿತು. ಪ್ರೇಕ್ಷಕರನ್ನು ಸಂಮೋಹನಗೊಳಿಸಿ ಕೊನೆಯ ನಿಮಿಷದವರೆಗೆ ಸೆರೆ ಹಿಡಿದಿಡುತ್ತಿದ್ದ ನಾಟಕದಲ್ಲಿ ಲಕ್ಷ್ಮೀಪತಿರಾಯನ ಪಾತ್ರ ಜನರ ನಾಲಗೆಯ ಮೇಲೆ ನಲಿದಾಡಿತು. ದಿನದಿಂದ ದಿನಕ್ಕೆ ಗಲ್ಲಾಪೆಟ್ಟಿಗೆಯನ್ನೂ ತುಂಬುತ್ತ, ಆರ್ಥಿಕವಾಗಿ ತುಂಬ ದುಸ್ಥಿತಿಯಲ್ಲಿದ್ದ ಕಂಪನಿಗೆ ಮರಳಿ ಜೀವ ತುಂಬಿತು. ನಟರೂ ಉಸಿರಾಡಿಸುವಂತಾಯಿತು. ಹೊಟ್ಟೆ ತುಂಬ ಊಟ, ಕೈ ತುಂಬ ಸಂಬಳ ಇದ್ದರೆ ತಾನೆ ಯಾರಾದರೂ ತೃಪ್ತಿಯಿಂದ ಕೆಲಸ ಮಾಡಬಲ್ಲರು? ನಾಟಕ ಕಂಪನಿಯ ಜೀವನವೇ ಏರಿಳಿತಗಳುಳ್ಳದ್ದು. ಉತ್ತಮ ನಾಟಕ, ಒಳ್ಳೆಯ ನಟರು, ರಸಿಕರಾದ ಪ್ರೇಕ್ಷಕರು - ಈ ಎಲ್ಲವೂ

ಹೊಂದಿಕೆಯಾದರೆ ಕಂಪನಿ ಬಾಳುತ್ತದೆ. ಜೊತೆಗೆ ಕಂಪನಿಯ ಮಾಲೀಕರ ಮುತ್ಸದ್ಧಿತನ, ನಟರ ಸಹಕಾರ, ಅದೃಷ್ಟ ಎಲ್ಲ ಸರಿ ಇದ್ದರೆ ಹೆಸರೂ ಬರುತ್ತದೆ.

ಮೈಸೂರಿನಲ್ಲಿ ಕಂಪನಿ ಕ್ಯಾಂಪ್ ಮಾಡಿದ್ದೂ ಒಂದು ರೀತಿಯಲ್ಲಿ ಒಳ್ಳೆಯದೇ ಆಗಿತ್ತು. ಯಾಕೆಂದರೆ ಮೈಸೂರು ಸಾಂಸ್ಕೃತಿಕ ರಾಜಧಾನಿ. ಸಾಹಿತ್ಯ, ಸಂಗೀತ, ನೃತ್ಯ, ನಾಟಕ ಶಿಲ್ಪ, ಚಿತ್ರ - ಮುಂತಾದ ಎಲ್ಲ ಕಲೆಗಳಿಗೂ ಅಲ್ಲಿ ಪ್ರೋತ್ಸಾಹವಿದ್ದದ್ದೇ. ಉತ್ತಮ ಅಭಿರುಚಿಯ, ಸುಶಿಕ್ಷಿತರೂ ಸುಸಂಸ್ಕೃತರೂ ಆದ ಸಹೃದಯರು ಮೈಸೂರಿನಲ್ಲಿ ದೊಡ್ಡ ಸಂಖ್ಯೆಯಲ್ಲಿ ಇದ್ದರು. ಒಡೆಯರ ಕಾಲದಿಂದಲೂ ರಂಗಭೂಮಿಗೆ ಹೆಚ್ಚಿನ ಪ್ರೋತ್ಸಾಹವಿತ್ತು. ಇದರಿಂದ ಕಂಪನಿಗೆ ಲಾಭವಾಯಿತು. ಎಲ್ಲ ವರ್ಗದ ಜನರೂ ನಾಟಕ ನೋಡಲು ಬರುತ್ತಿದ್ದರು.

ಸೀತಾರಾಮ ಶಾಸ್ತ್ರಿಗಳ ಲಕ್ಷ್ಮೀಪತಿರಾಯನ ಪಾತ್ರವನ್ನು ಮೈಸೂರಿನ ಜನ ಮೆಚ್ಚಿ ಕೊಂಡಾಡಿದರು. ಶಾಸ್ತ್ರಿಗಳು ಜನಪ್ರಿಯರಾಗಲು ಇನ್ನೂ ಒಂದು ಕಾರಣವಿತ್ತು. ಸಾಮಾನ್ಯವಾಗಿ ಪ್ರತಿ ದಿನ ನಾಟಕದ ಕೊನೆಯ ದೃಶ್ಯಕ್ಕೆ ಮುನ್ನ ಕಂಪನಿಯ ಪರವಾಗಿ ಶಾಸ್ತ್ರಿಗಳು ಪುಟ್ಟ ಭಾಷಣ ಮಾಡುತ್ತಿದ್ದರು. ರಂಗಭೂಮಿಗೆ -ಕಂಪನಿಗೆ ಪ್ರೋತ್ಸಾಹ ನೀಡುತ್ತಿದ್ದ ಜನರನ್ನು ಅಭಿನಂದಿಸಿ ವಂದನೆ ಸಲ್ಲಿಸುತ್ತಿದ್ದರು. ಆದರೆ ಅವರ ಮಾತುಗಳು ಅಷ್ಟಕ್ಕೇ ಸೀಮಿತವಾಗಿರುತ್ತಿರಲಿಲ್ಲ. ಸಾಹಿತ್ಯ, ಮೀಮಾಂಸೆ ಎಲ್ಲವನ್ನೂ ಚೆನ್ನಾಗಿ ಅರಗಿಸಿಕೊಂಡಿದ್ದ ಶಾಸ್ತ್ರಿಗಳು ಸಮಕಾಲೀನ ರಂಗಭೂಮಿಯ ಸಮಸ್ಯೆಗಳನ್ನು ವಿಶ್ಲೇಷಿಸುತ್ತಿದ್ದರು. ತಮ್ಮ ಮುಂದಿನ ನಾಟಕಗಳ ಆಕರ್ಷಕ ಸಂದರ್ಭಗಳನ್ನು ಪರಿಚಯಿಸುತ್ತಿದ್ದರು. ಅಷ್ಟೇ ಅಲ್ಲ; ನಾಟಕದ ನೆವದಲ್ಲಿ ಸಮಕಾಲೀನ ರಾಜಕೀಯ ಪರಿಸ್ಥಿತಿಯ ಬಗೆಗೂ ವಿಮರ್ಶೆ, ಟಿಪ್ಪಣಿ ಇರುತ್ತಿತ್ತು. ಅಸ್ಖಲಿತವಾಗಿ ಅಷ್ಟೇ ಸೊಗಸಾಗಿ ಮಾತನಾಡುತ್ತಿದ್ದ ಶಾಸ್ತ್ರಿಗಳ ಭಾಷಣ ಮೈಸೂರಿನ ಪ್ರೇಕ್ಷಕರನ್ನು ಮುಗ್ಧಗೊಳಿಸಿತ್ತು. ಹಲವರಂತೂ ಅವರ ಭಾಷಣಕ್ಕೆ ಮಾರುಹೋಗಿ ಅದನ್ನು ಕೇಳಲೆಂದೇ ದಿನವೂ ಬರುತ್ತಿದ್ದರು. ಅಂತೂ ಶಾಸ್ತ್ರಿಗಳು ಜಗನ್ನಾಥರಾಯರ ಕಂಪನಿಯ ಪ್ರಮುಖ ವ್ಯಕ್ತಿಗಳಾಗಿಬಿಟ್ಟರು. ಜಗನ್ನಾಥರಾಯರಿಗೂ ಶಾಸ್ತ್ರಿಗಳಿಂದ ಬಹುದೊಡ್ಡ ಉಪಕಾರವಾಯಿತು. ಇನ್ನೇನು ಮುಳುಗಿಹೋಗುತ್ತದೆ ಎಂದುಕೊಂಡಿದ್ದ ಕಂಪನಿ ಸಾಲದ ಭಾರದಿಂದ ಮುಕ್ತಿ ಹೊಂದಿತ್ತು. ಜೀವ ತುಂಬಿ ಚೇತರಿಸಿಕೊಳ್ಳತೊಡಗಿತ್ತು.

ಆಗಿನ ಕಾಲದ ನಾಟಕ ಕಂಪನಿಗಳ ಸ್ಥಿತಿಯೇ ಹಾಗಿತ್ತು. ಒಳ್ಳೆಯ ಕಲಾವಿದರಿದ್ದರೆ ಮಾತ್ರ ಕಂಪನಿ ಬದುಕುತ್ತಿತ್ತು. ಮತ್ತು ಆ ಕಾಲದ ಯಶಸ್ವಿ ನಾಟಕ ಕಂಪನಿಗಳಲ್ಲಿ ಕೆಲವರಾದರೂ ಪ್ರಸಿದ್ಧ ನಟರು ಇರುತ್ತಿದ್ದರು. ಅವರ ಅಭಿನಯ ಕೌಶಲವೋ, ಸಂಗೀತದ ಮೋಡಿಯೋ, ಮಾತಿನ ವೈಖರಿಯೋ ಜನರನ್ನು ಸೆಳೆಯುತ್ತಿತ್ತು. ಕೆಲವರಲ್ಲಿ ಈ ಮೂರು ಸೇರಿಕೊಂಡು ಅವರನ್ನು ಮಹಾನ್ ನಟನನ್ನಾಗಿಸುತ್ತಿದ್ದವು. ವರದಾಚಾರ್ಯರು, ಗರುಡ ಸದಾಶಿವರಾಯರು, ಗುಬ್ಬಿ ವೀರಣ್ಣನವರು,

ಮಹಮ್ಮದ್ ಪೀರ್ ಸಾಹೇಬರು, ಕೆ. ಹಿರಣ್ಣಯ್ಯ ಮುಂತಾದವರೆಲ್ಲ ಕಂಪನಿಯ ಆಧಾರಸ್ತಂಭರೇ ಆಗಿದ್ದರು. ಮುಖ್ಯ ಪಾತ್ರಗಳಿಗೆ ಹೇಳಿ ಮಾಡಿದಂತಹ ಶರೀರ, ಅಷ್ಟೇ ಸೊಗಸಾದ ಶಾರೀರ ಎರಡೂ ಇದ್ದು, ಅಭಿನಯದ ಮೆರುಗೂ ಸೇರಿಕೊಂಡರೆ ಅಂಥವರನ್ನು ಹಿಡಿಯುವವರಾರು? ಅಲ್ಲದೆ ಮಹತ್ವಾಕಾಂಕ್ಷೆಯ ನಟ ತನ್ನ ಸ್ಥಾನವನ್ನು ಕಾಯ್ದುಕೊಳ್ಳಲು ಎಲ್ಲಿಲ್ಲದ ಪ್ರಯತ್ನವನ್ನೂ, ಸಿದ್ಧತೆಗಳನ್ನೂ ಮಾಡಿಕೊಳ್ಳುತ್ತಿದ್ದ. ಹಾಗಾಗಿ ಕೆಲವು ನಟರು ಜನರ ಅಭಿಮಾನ-ಗೌರವಗಳ ಕೇಂದ್ರವಾಗಿ, ಇದ್ದಾಗಲೇ ದಂತಕಥೆಯಾಗಿ ಬಿಡುತ್ತಿದ್ದರು. ಇಂಥ ಜನಪ್ರಿಯ ನಟರ ಅಭಿನಯ ನೋಡಲು, ಸಂಗೀತ ಕೇಳಲು, ಮಾತಿನ ವರಸೆಯ ಸಂತೋಷ ಅನುಭವಿಸಲು ಒಂದೇ ನಾಟಕವನ್ನು ದಿನವೂ ಬಿಡದೇ ನೋಡುತ್ತಿದ್ದುದೂ ಉಂಟು. ತಮ್ಮ ನೆಚ್ಚಿನ ನಟ ನಿಜ ಜೀವನದಲ್ಲಿ ಹೇಗಿದ್ದಾನೆಂದು ನೋಡುವ ಮಾತನಾಡಿಸುವ ಕುತೂಹಲವೂ ಜನರಲ್ಲಿ ಬೆಳೆಯುತ್ತಿತ್ತು. ಆದರೆ ರಂಗದ ಮೇಲೆ ತಮ್ಮ ಕಲಾ ಕೌಶಲದಿಂದ ಸಹೃದಯರ ಮನಸ್ಸನ್ನು ಸೂರೆಗೊಳ್ಳುತ್ತಿದ್ದ ನಟರ ವ್ಯಕ್ತಿಗತ ಜೀವನದ ಕಷ್ಟಕೋಟಲೆಗಳು, ನೋವು-ನರಕಗಳು ಜನರಿಗೆ ತಿಳಿಯುತ್ತಿರಲಿಲ್ಲ. ನಟರೂ ಅಷ್ಟೇ; ಜನರನ್ನು ತೃಪ್ತಿಪಡಿಸಲು ಸಾಧ್ಯವಾದ ಪ್ರಯತ್ನ ಮಾಡುತ್ತಿದ್ದರು. ತಮ್ಮ ಬಡತನ, ದುಃಖ, ಸಂಕಟಗಳನ್ನು ಮುಚ್ಚಿಟ್ಟು, ಪಾತ್ರ ನಿರ್ವಹಣೆಗೆ ಪ್ರಾಮಾಣಿಕವಾಗಿ ತೆತ್ತುಕೊಂಡು ಸಹೃದಯರನ್ನು ಮೆಚ್ಚಿಸುತ್ತಿದ್ದರು. ಮತ್ತು ಅದರಲ್ಲಿಯೇ ತಮ್ಮ ಜೀವನದ ಧನ್ಯತೆಯನ್ನು ಕಾಣುತ್ತಿದ್ದರು. ಸೀತಾರಾಮ ಶಾಸ್ತ್ರಿಗಳ ಜೀವನದ ಅನುಭವವೂ ಇದಕ್ಕೆ ಹೊರತಾಗಿರಲಿಲ್ಲ.

## ಧನ್ಯತೆಯ ಅನುಭವ

ನಾಟಕ ಕಲಾವಿದರೆಂದರೆ ಅಷ್ಟೊಂದು ಗೌರವವಿಲ್ಲದಿದ್ದ ಕಾಲ ಅದು. ಕಲೆಯನ್ನು ಮೆಚ್ಚಿ ಹೊಗಳಿದರೂ, ಕಲಾವಿದನ ಬಗ್ಗೆ ಕಾಳಜಿ ತೋರಿಸುತ್ತಿರಲಿಲ್ಲ. ಅದಕ್ಕೆ ಬೇರೆ ಬೇರೆ ಕಾರಣಗಳೂ ಇದ್ದವು. ಆದರೆ ಎಲ್ಲರೂ ಹಾಗಿರಲಿಲ್ಲ. ತಮ್ಮ ಅಭಿಮಾನಿ ಕಲಾವಿದರ ಬಗ್ಗೆ ವ್ಯಕ್ತಿಗತ ಆದರ ಪ್ರೀತಿ, ವಿಶ್ವಾಸ ಬೆಳೆಸಿಕೊಂಡವರೂ ಇರುತ್ತಿದ್ದರು. ಕಲಾವಿದನು ತಮ್ಮ ಮೇಲೆ ಬೀರಿದ ಪ್ರಭಾವವನ್ನು ನೆನಪಿಸಿಕೊಳ್ಳುತ್ತ ಮೆಲುಕು ಹಾಕುತ್ತಿದ್ದರು. ನಾಟಕದ ಸಂದರ್ಭಗಳನ್ನು ಚಪ್ಪರಿಸಿಕೊಳ್ಳುತ್ತಿದ್ದರು.

ಕಲಾವಿದರಾದರೂ ಅಷ್ಟೇ. ರಂಗದ ಮೇಲೆ ಅಭಿನಯಿಸುವಾಗ, ಪಾತ್ರದ ಮನೋಧರ್ಮ, ಆಡುವ ಮಾತಿನ ಭಾವಕ್ಕೆ ತಕ್ಕ ಏರಿಳಿತ - ಅಭಿನಯಗಳಲ್ಲಿ ತನ್ಮಯಗೊಂಡು ತೊಡಗಿಸಿಕೊಳ್ಳುತ್ತಿದ್ದ ಕಲಾವಿದರು ವಿಶಿಷ್ಟ ಸಂದರ್ಭದಲ್ಲಿ ಪ್ರೇಕ್ಷಕ ಗಣದಿಂದ ತೂರಿಬರುವ 'ಶಹಬ್ಬಾಸ್', 'ವ್ಹಾ ವ್ಹಾ'ಗಳಿಗೆ ಶಿಳ್ಳೆಗಳ-ಚಪ್ಪಾಳೆಗಳ ಪ್ರೋತ್ಸಾಹಕ್ಕೆ 'ಒನ್ಸ್‌ಮೋರ್' ಎಂಬ ಬೇಡಿಕೆಯ ಕೂಗಿಗೆ ಪುಳಕಗೊಳ್ಳುತ್ತಿದ್ದರು. ಆ ಸಂತೋಷದಲ್ಲಿ ತಮ್ಮ ನಿಜ ಜೀವನದ ದುಃಖ-ನೋವುಗಳನ್ನು

ಮರೆಯುತ್ತಿದ್ದರು. ರಾತ್ರಿ ಕಳೆದು ಬೆಳಗಾದ ಮೇಲೆ ಕಾಫಿ ಕುಡಿಯಲೂ ಕಾಸಿಲ್ಲದೆ ವ್ಯಥೆ ಪಡುತ್ತಿದ್ದ ನಟ, ರಾತ್ರಿ ರಂಗದ ಮೇಲೆ ಬಂದಾಗ ಅಭಿಮಾನಿಗಳ ಸಾಮ್ರಾಟನಾಗಿಬಿಡುತ್ತಿದ್ದ. ಬದುಕಿನ ಎಲ್ಲ ನೋವುಗಳನ್ನು ಮರೆಯುವ ಶಕ್ತಿವರ್ಧಕ ಟಾನಿಕ್ ಸಹೃದಯದ ಮೆಚ್ಚುಗೆಯಿಂದ ದೊರೆಯುತ್ತಿತ್ತು. ಹಾಗಾಗಿ ಕಲಾವಿದರು ಪ್ರೇಕ್ಷಕರ ಇಂಥ ಮೆಚ್ಚುಗೆಗಾಗಿ ಕಾತರದಿಂದ ಕಾಯುತ್ತಿದ್ದರು. ಶಕ್ತಿ ಮೀರಿ ಪ್ರಯತ್ನವನ್ನೂ ಮಾಡುತ್ತಿದ್ದರು.

ಸೀತಾರಾಮ ಶಾಸ್ತ್ರಿಗಳು 'ವರದಕ್ಷಿಣೆ' ನಾಟಕವನ್ನು ಸ್ವಯಂ ಬರೆದಿದ್ದರು. ಆ ನಾಟಕದ ಮೂಲಕ ಯಾವ ಸಂದೇಶವನ್ನು ಜನತೆಗೆ ತಲುಪಬೇಕೆಂದು ಅರಿತಿದ್ದರು. ಅಲ್ಲದೆ, ಆ ನಾಟಕದ ಪ್ರತಿಯೊಂದು ಪಾತ್ರದ ಅಂತರಂಗವನ್ನೂ ಅರಿತಿದ್ದವರು. ವರದಕ್ಷಿಣೆ ನಾಟಕದಲ್ಲಿ ಅವರು ಲಕ್ಷ್ಮೀಪತಿರಾಯನ ಪಾತ್ರ ವಹಿಸುತ್ತಿದ್ದರು. ಜಿಪುಣನೂ, ದುರಾಸೆಯ ಪ್ರತಿ ಅವತಾರವೂ, ನೀಚ ಸ್ವಾರ್ಥಿಯೂ ಆಗಿದ್ದ ಲಕ್ಷ್ಮೀಪತಿರಾಯನ ಪಾತ್ರದ ಅಂತರಂಗವನ್ನು ಹೊಕ್ಕು ಅರಿತುಕೊಂಡವರಂತೆ, ಶಾಸ್ತ್ರಿಗಳು ಆ ಪಾತ್ರಕ್ಕೆ ನ್ಯಾಯ ಒದಗಿಸುತ್ತಿದ್ದರು. ಈ ಧನಪಿಶಾಚಿಯು ತನ್ನ ಸೊಸೆಗೆ ನೀಡುತ್ತಿದ್ದ ಹಿಂಸೆ ಭಾವುಕ ಜನರ ಮನಸ್ಸಿಗೆ ತಟ್ಟುತ್ತಿತ್ತು. ಅದು ನಾಟಕವೆಂದೂ ಅಭಿನಯದ ಕೌಶಲವನ್ನು ಪ್ರದರ್ಶಿಸುತ್ತಿರುವವರು ಶಾಸ್ತ್ರಿಗಳೆಂಬುದನ್ನು ಮರೆತು ಲಕ್ಷ್ಮೀಪತಿರಾಯನನ್ನು ಜನರು ಶಪಿಸುತ್ತಿದ್ದರು. ಹಗಲು ವೇಳೆಯಲ್ಲಿ ಶಾಸ್ತ್ರಿಗಳು ರಸ್ತೆಯಲ್ಲಿ ಹೋಗುತ್ತಿದ್ದರೆ 'ಲಕ್ಷ್ಮೀಪತಿರಾಯ ಬಂದ ನೋಡು' ಎಂದು ಪಿಸುಗುಟ್ಟುತ್ತಿದ್ದರು. ಅಂತೂ ಎಲ್ಲರ ನಾಲಗೆಯ ಮೇಲೆ ಲಕ್ಷ್ಮೀಪತಿರಾಯನ ಪಾತ್ರ ಕುಣಿದಾಡತೊಡಗಿತು. ಆ ಸಂದರ್ಭದಲ್ಲಿ ನಡೆದ ಎರಡು ಘಟನೆಗಳನ್ನು ಇಲ್ಲಿ ಹೇಳಲೇಬೇಕು.

ಸಾಮಾನ್ಯವಾಗಿ ನಾಟಕ ಕಂಪನಿ ದೊಡ್ಡ ಊರುಗಳಲ್ಲಿ 3-4-6 ತಿಂಗಳುಗಳ ಕಾಲ ಬೀಡು ಬಿಡುತ್ತಿತ್ತು. ಹೋಟೆಲ್ -ದಿನಸಿ ಅಂಗಡಿ - ಪಾನ್‌ಶಾಪ್‌ಗಳಿಗೆ ಕಲಾವಿದರು ದಿನವೂ ಭೇಟಿಕೊಡುತ್ತಿದ್ದುದರಿಂದ ಅವರ ಪರಿಚಯ ಸಹಜವಾಗಿಯೇ ಅಂಗಡಿಯವರಿಗೆ ಆಗುತ್ತಿತ್ತು. ಶಾಸ್ತ್ರಿಗಳು ದಿನಾ ಬೆಳಿಗ್ಗೆ ಒಂದು ಉಡುಪಿ ಹೋಟೆಲ್‌ಗೆ ಬೆಳಗಿನ ನಾಷ್ಟಾಕ್ಕೆ ಹೋಗುವುದು ರೂಢಿ. ಹೋಟೆಲ್ ಮಾಲೀಕರು ಸ್ನೇಹಪರ ವ್ಯಕ್ತಿ. ಜೊತೆಗೆ ನಾಟಕದ ಗೀಳು. 'ವರದಕ್ಷಿಣೆ' ನಾಟಕದ ಒಂದು ಪ್ರಯೋಗವನ್ನೂ ಅವರು ಬಿಟ್ಟಿರಲಿಲ್ಲ. ಲಕ್ಷ್ಮೀಪತಿರಾಯ ಅವರ ಮೆಚ್ಚಿನ ಪಾತ್ರ. ಒಂದು ದಿನ ಅವರು ತಮ್ಮ ಜೊತೆಗೆ ತಮ್ಮ ಆರು ವರ್ಷದ ಮಗಳನ್ನೂ ನಾಟಕ ನೋಡಲು ಕರೆ ತಂದಿದ್ದರು. ತಂದೆಯ ಪಕ್ಕದಲ್ಲಿ ಕೂತು ನಾಟಕದಲ್ಲಿ ತಲ್ಲೀನವಾಗಿದ್ದ ಆ ಹುಡುಗಿಯ ಮನಸ್ಸಿನ ಮೇಲೆ ಲಕ್ಷ್ಮೀಪತಿರಾಯನ ದುಷ್ಟತನ, ತನ್ನ ಸೊಸೆಗೆ ಅವನು ಕೊಡುತ್ತಿದ್ದ ಹಿಂಸೆಯಿಂದಾಗಿ ಆಕೆ ಪಡುತ್ತಿದ್ದ ದುಃಖ - ಎಲ್ಲವೂ ಅಚ್ಚೊತ್ತಿದಂತೆ ಪರಿಣಾಮ ಬೀರಿತ್ತು. ಮರುದಿನ ಬೆಳಿಗ್ಗೆ ಸೀತಾರಾಮ ಶಾಸ್ತ್ರಿಗಳು ಕಾಫಿ-ತಿಂಡಿಗಾಗಿ ಹೋಟೆಲ್‌ಗೆ ಹೋದಾಗ ಆ ಪುಟ್ಟ ಹುಡುಗಿಯೂ ತಂದೆಯೊಂದಿಗೆ ಗಲ್ಲಾದ ಬಳಿ ಕೂತಿದ್ದವಳು ಈ ಲಕ್ಷ್ಮೀಪತಿರಾಯನನ್ನು

ಗುರುತಿಸಿದಳು. ಕಾಫಿ-ತಿಂಡಿಯನ್ನು ಅವರಿಗೆ ಕೊಡಕೂಡದೆಂದು ಹಠ ಹಿಡಿದಳು. 'ಪಪ್ಪಾ, ಈತನಿಗೆ ಏನೂ ಕೊಡ್ಬೇಡಿ ಎಂಥಾ ಒಳ್ಳೆಯವಳು ಆ ಸೀತಾ! ಅವಳನ್ನು ಮನೆಯಿಂದ ಹೊರಗೆ ಹಾಕಿದ್ದೂ ಅಲ್ದೆ ಭಿಕ್ಷೆ ಕೂಡ ಸಿಗದ ಹಾಗೆ ಮಾಡ್ಬಿಟ್ನಲ್ಲ ಈ ಪಾಪಿ!.... ಕಾಫಿ- ಇಡ್ಲಿ ಏನೂ ಕೊಡ್ಬೇಡಿ' ಎಂದು ಪಟ್ಟು ಹಿಡಿದು, ಶಾಸ್ತ್ರಿಗಳು ಹಾಗೆಯೇ ಹಿಂತಿರುಗುವಂತೆ ಮಾಡಿದಳು. ಹೋಟೆಲ್ ಯಜಮಾನರಿಗೆ ಮಗಳ ಹಠಮಾರಿತನದಿಂದ ಮುಜುಗರವಾದರೂ ಶಾಸ್ತ್ರಿಗಳಿಗೆ ತುಂಬ ಖುಷಿಯಾಯಿತು. ತಮ್ಮ ಪಾತ್ರದ ಯಶಸ್ಸಿಗೆ ಇದೊಂದು ನಿದರ್ಶನವೆಂದೂ, ಇದು ತಮ್ಮ ಕಲಾಪರಿಣತಿಗೆ ಸಂದ ಗೌರವವೆಂದೂ ಅವರು ಭಾವಿಸಿದರು.

ಈ ನೆನಪು ಹಸಿಯಾಗಿರುವಾಗಲೇ ಇನ್ನೊಂದು ಘಟನೆ ನಡೆಯಿತು. ಅದೂ ವರದಕ್ಷಿಣೆ ನಾಟಕದ ಸಂದರ್ಭದಲ್ಲಿಯೇ. ಆ ದಿನ ಥಿಯೇಟರ್ ತುಂಬಿತ್ತು. ಶಾಸ್ತ್ರಿಗಳು ಲಕ್ಷ್ಮೀಪತಿರಾಯನನ್ನು ಮೈದುಂಬಿಸಿಕೊಂಡು ಅಭಿನಯಿಸುತ್ತಿದ್ದರು. ಜನರೂ ಅಷ್ಟೇ ತನ್ಮಯತೆಯಿಂದ ಲೋಕ ಜೀವನದ ತಮ್ಮ ಅಸ್ತಿತ್ವವನ್ನೇ ಮರೆತು ನಾಟಕದ ಸನ್ನಿವೇಶಗಳ ರಸ ಆಸ್ವಾದನೆಯಲ್ಲಿ ಮುಳುಗಿದ್ದರು. ಲಕ್ಷ್ಮೀಪತಿರಾಯ ತನ್ನ ಸೊಸೆಯನ್ನು ವರದಕ್ಷಿಣೆ ತರಲು ತವರಿಗೆ ಕಳಿಸುತ್ತಾನೆ. ಆಕೆ ಬರಿಗೈಯಿಂದ ಮರಳಿದಾಗ ಸಿಟ್ಟಿಗೆದ್ದು ನಿಷ್ಕರುಣೆಯಿಂದ ಬೈದು ಹೊರ ತಳ್ಳುತ್ತಾನೆ. ಅಸಹಾಯಕಳಾದ ಆಕೆ ಬೀದಿಗಿಳಿದು ಭಿಕ್ಷೆ ಬೇಡಿ ಬದುಕಲು ಯತ್ನಿಸುತ್ತಾಳೆ. ಲಕ್ಷ್ಮೀ ಪತಿರಾಯ ಅಲ್ಲಿಯೂ ಅವಳನ್ನು ಬದುಕಗೊಡದಂತೆ ಮಾಡಲು, ಅವಳು ಭಿಕ್ಷೆಯಿಂದ ಪಡೆದಿದ್ದ ಹಣವನ್ನೂ ಆಕೆಯ ಜೋಳಿಗೆಗೆ ಕೈ ಹಾಕಿ ಕಿತ್ತುಕೊಂಡು ಹೋಗತೊಡಗುತ್ತಾನೆ. ಸೀತಾ ಗೋಳಿಟ್ಟು ರೋದಿಸಿದರೂ ಅವನ ಹೃದಯ ಕರಗುವುದಿಲ್ಲ.... - ಈ ದೃಶ್ಯ ರಂಗದ ಮೇಲೆ ನಡೆಯುತ್ತಿದ್ದಂತೆ, ರಂಗದ ಎದುರೇ ಕೂತಿದ್ದ ಒಬ್ಬ ಮಹಾಶಯ ಹಠಾತ್ತನೇ ರಂಗದ ಮೇಲೆ ಬಂದು ಲಕ್ಷ್ಮೀಪತಿ ರಾಯನ ಕೈ ಹಿಡಿದು ಕೂಗಾಡತೊಡಗಿದ - ' ಅವಳು ಕಷ್ಟಪಟ್ಟು ಗಳಿಸಿದ ಕಾಸನ್ನೂ ಕಿತ್ತುಕೋತಿದಿಯಾ.. ಸೂ...ಮಗನೆ! ಅವಳ ಕಾಸು ಅವಳಿಗೆ ಕೊಡು... ಕೊಡ್ತೀಯಾ ಇಲ್ಲವಾ?'... ನಾಟಕ ನೋಡುತ್ತಿದ್ದ ಮತ್ತೆ ಕೆಲವರು ಎದ್ದುನಿಂತು ಕೂಗಾಡತೊಡಗಿದರು - 'ಬಿಡಬೇಡ... ಹೊಡಿ.... ಆ... ಬೋ -ಮಗನಿಗೆ'.... ಇಡೀ ಥಿಯೇಟರ್ ಗದ್ದಲದಲ್ಲಿ ಮುಳುಗಿತು.

ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತಿರುವುದನ್ನು ಕಂಡು ಉಳಿದ ಕಲಾವಿದರು, ಪ್ರೇಕ್ಷಕರು ರಂಗಕ್ಕೆ ಧಾವಿಸಿ ಲಕ್ಷ್ಮೀಪತಿರಾಯನ ಪಾತ್ರ ಮಾಡಿದ ಸೀತಾರಾಮ ಶಾಸ್ತ್ರಿಗಳನ್ನು ರಕ್ಷಿಸಿದರು. ಅರ್ಧ ಗಂಟೆಕಾಲ ನಾಟಕ ನಿಂತುಹೋಯಿತು. ಶಾಸ್ತ್ರಿಗಳು ಸೃಷ್ಟಿಸಿದ್ದ ರಸಲೋಕದಲ್ಲಿ ಮುಳುಗಿ, ಭಾವನೆಗಳನ್ನು ಅನುಭವಿಸುತ್ತಿದ್ದ ಜನರು ವಾಸ್ತವ ಲೋಕಕ್ಕೆ ಮರಳಿ ಆಗಲಿದ್ದ ಅನಾಹುತವನ್ನು ತಪ್ಪಿಸಿದರು. ಆದರೆ ಇದರಿಂದ ಶಾಸ್ತ್ರಿಗಳಿಗೆ ಆದ ಸಂತೋಷ ಮಾತ್ರ ಅಷ್ಟಿಷ್ಟಲ್ಲ. ತಮ್ಮ ಕಲಾಸಿದ್ಧಿಗೆ ದೊರೆತ ಸನ್ಮಾನವೆಂದೇ ಭಾವಿಸಿ ಅವರು ಧನ್ಯತೆಯ ಭಾವವನ್ನು ಅನುಭವಿಸಿದರು.

ಇಂಥ ಸಂದರ್ಭಗಳಲ್ಲೆಲ್ಲಾ ಶಾಸ್ತ್ರಿಗಳಿಗೆ ನೆನಪಾಗುತ್ತಿದ್ದುದು ತಮಗೆ ಗುರುವಾಗಿ ತರಬೇತಿ ನೀಡಿದ್ದ ಗರುಡ ಸದಾಶಿವರಾಯರದು. ಅವರ ತಾಲೀಮು ಹಾಗಿತ್ತು. ಗರುಡರಿಂದ ಅವರು ಕಲಿತದ್ದು ಬಹಳ. ಆದರೆ ಅವರ ಪಡಿಯಚ್ಚಾಗಲಿಲ್ಲ. ತಮ್ಮ ವಿಚಾರಶೀಲತೆಯಿಂದ ಪ್ರತಿಭೆಯಿಂದ, ಅಧ್ಯಯನ - ಅಭ್ಯಾಸಗಳಿಂದ ಅವರು ಬೆಳೆದರು. ನಿಜವಾದ ಕಲಾವಿದ ಬೆಳೆಯಬೇಕಾದ್ದು ಹಾಗೆಯೇ.

ಮೈಸೂರಿನಿಂದ ಕಂಪನಿಯು ಮುಂದಿನ ಮುಕ್ಕಾಂ ಚೆನ್ನಪಟ್ಟಣಕ್ಕೆ. ಮೈಸೂರಿನಲ್ಲಿ ಜಯಭೇರಿ ಬಾರಿಸಿದ ಆತ್ಮವಿಶ್ವಾಸದಲ್ಲಿ ಬೀಗುತ್ತಿದ್ದ ಶಾಸ್ತ್ರಿಗಳನ್ನು ಎಚ್ಚರಿಸುವಂತೆ ಮೈಸೂರು ಪೋಲೀಸು ಠಾಣೆಯ ಇನ್‌ಸ್ಪೆಕ್ಟರ್ ಒಂದು ಸೂಚನೆಯನ್ನು ಕೊಟ್ಟರು. 'ಚೆನ್ನಪಟ್ಟಣ ತುಂಬ ಸೂಕ್ಷ್ಮಸ್ಥಳ. ನೀವು ರಂಗಭೂಮಿಯಲ್ಲಿ ಮಾತನಾಡುವಾಗ ರಾಜಕೀಯ ಪರಿಸ್ಥಿತಿಯನ್ನು ವಿಶ್ಲೇಷಿಸುತ್ತೀರಿ. ಇದು ಒಳ್ಳೆಯದಲ್ಲ. ಮೈಸೂರಿನಲ್ಲೇನೋ ನಡೆದೀತು. ಆದರೆ ಚೆನ್ನಪಟ್ಟಣದಲ್ಲಿ ಹಾಗಲ್ಲ. ಏನಾದರೂ ಹೆಚ್ಚುಕಡಿಮೆ ಆದರೆ ನೀವೇ ಜವಾಬ್ದಾರರು. ಆಮೇಲೆ ನಾಟಕದ ಲೈಸೆನ್ಸನ್ನೇ ರದ್ದುಪಡಿಸಬೇಕಾಗುತ್ತೆ; ಜಾಗ್ರತೆ' ಒಂದು ರೀತಿಯಿಂದ ಶಾಸ್ತ್ರಿಗಳಿಗೆ ಈ ಸೂಚನೆ ಒಳಿತನ್ನೇ ಮಾಡಿತು. ಚೆನ್ನಪಟ್ಟಣದಲ್ಲಿ ತಮ್ಮ ಚಾಣಾಕ್ಷತನದಿಂದ, ಮುತ್ಸದ್ದಿತನದಿಂದ ಜನರನ್ನು ಗೆದ್ದರು. ಅಷ್ಟೇ ಅಲ್ಲ; ಅಲ್ಲಿಯೂ ತಮ್ಮ ಮಾತಿನ ಮೋಡಿಯಿಂದ ಜನರನ್ನು ಮರಳು ಮಾಡಿದರು.

ಚೆನ್ನಪಟ್ಟಣದಲ್ಲಿಯೂ ಕಂಪನಿ ಲಾಭವನ್ನೇ ಗಳಿಸಿತ್ತು. 'ವರದಕ್ಷಿಣೆ' ನಾಟಕ ಕಂಪನಿಯ ಪಾಲಿಗೆ ವರದಾನವೇ ಆಯಿತು. ಮುಂದಿನ ಕ್ಯಾಂಪ್ ಬೆಂಗಳೂರಿಗೆ. ಬೆಂಗಳೂರು ನಗರದಲ್ಲಿ ಕನ್ನಡದ ಅನೇಕ ಹಿರಿಯ ಸಾಹಿತಿಗಳು, ಕಲಾವಿದರು, ಸಮಾಜ ಸೇವಕರು ನೆಲೆಸಿದ್ದರು. ಅವರಲ್ಲಿ ಅನೇಕರನ್ನು ಶಾಸ್ತ್ರಿಗಳು ಬಲ್ಲವರಾಗಿದ್ದರು. ಚಾಮರಾಜೇಂದ್ರ ಸಂಸ್ಕೃತ ವಿದ್ಯಾಲಯದಲ್ಲಿ ಓದುತ್ತಿರುವಾಗ ಸಾಹಿತಿಗಳು - ಕಲಾವಿದರೊಂದಿಗೆ ಅವರು ಸಂಪರ್ಕವಿರಿಸಿಕೊಂಡಿದ್ದರು. ಈಗ ರಂಗಭೂಮಿಯಲ್ಲಿ ಪ್ರಸಿದ್ಧಿಗೊಳಿಸಿ ಬೆಂಗಳೂರಿಗೆ ಬಂದಿರುವುದು ಅವರಿಗೆ ಸಂತಸವನ್ನು ತಂದಿತ್ತು. ಪರಿಚಿತರ ಎದುರು ಕಲಾಪ್ರತಿಭೆಯನ್ನು ಮೆರೆಯುವ ಅವಕಾಶವೂ ಲಭ್ಯವಾಗಿತ್ತು. ಮಗನನ್ನು ಕಂಡು ಮಾತನಾಡಲೆಂದು ಬೆಂಗಳೂರಿಗೆ ಬಂದ ಅನಂತಯ್ಯನವರಿಗೂ ಮಗನ ಅಭಿನಯ ಕೌಶಲವನ್ನು ಕಣ್ಣಾರೆ ಕಾಣುವ ಮುಹೂರ್ತ ಕೂಡಿಬಂದಿತ್ತು.

ಬೆಂಗಳೂರಿನಲ್ಲಿಯೂ ಮೊದಲ ನಾಟಕ 'ವರದಕ್ಷಿಣೆ' ಕಂಪನಿಯ ಟ್ರಂಪ್ ಕಾರ್ಡ್ ಅದು. ಸಾಹಿತಿಗಳು, ಕಲಾವಿದರ ಬೀಡಾಗಿದ್ದ ಬೆಂಗಳೂರಿನಲ್ಲಿ ಅದಕ್ಕೆ ಪ್ರೋತ್ಸಾಹವೂ ದೊರೆಯಿತು. ಶಾಸ್ತ್ರಿಗಳು ಬೆಂಗಳೂರಿನಲ್ಲಿ ನಾಟಕದ ಪ್ರಾರಂಭದ ದಿನವೇ, ತಮ್ಮ ಅಧ್ಯಾಪಕರಾಗಿದ್ದ ವಿದ್ವಾನ್ ದೇಶಿಕಾಚಾರ್ಯರನ್ನು ಅಧ್ಯಕ್ಷರನ್ನಾಗಿ ಆಮಂತ್ರಿಸಿದ್ದರು. ಗುರುವನ್ನು ಮೀರಿಸುವ ಶಿಷ್ಯರಾಗಿ ಬೆಳೆದಿದ್ದ ಸೀತಾರಾಮ ಶಾಸ್ತ್ರಿಗಳ ಕಲಾಪ್ರೌಢಿಮೆ ದೇಶಿಕಾಚಾರ್ಯರನ್ನು ಮಂತ್ರಮುಗ್ಧಗೊಳಿಸಿತ್ತು.

ತಮ್ಮ ಶಿಷ್ಯನನ್ನು ಬಾಯಿತುಂಬಾ ಹೊಗಳಿ ಹರಸಿದರು. ಅವರು ದಿನವೂ ಒಬ್ಬೊಬ್ಬ ಮಹಾನ್ ಲೇಖಕರು ನಾಟಕ ನೋಡಲು ಬರುತ್ತಿದ್ದರು. ಒಂದು ದಿನ ಪ್ರಗತಿಶೀಲ ಚಳವಳಿಯ ಮುಂಚೂಣಿಯ ನಾಯಕ ಅ. ನ. ಕೃಷ್ಣರಾಯರು, ಹಿರಿಯ ವಿದ್ವಾಂಸರಾದ ದೇವುಡು ನರಸಿಂಹಶಾಸ್ತ್ರಿಗಳು, ಖ್ಯಾತ ಕವಿ ವಿ. ಸೀತಾರಾಮಯ್ಯನವರು, ಸುಪ್ರಸಿದ್ಧ ಬರಹಗಾರ ಸಿ.ಕೆ. ವೆಂಕಟರಾಮಯ್ಯನವರು ಹೀಗೇ ಹಲವರು ಬಂದಿದ್ದರು. ಶಾಸ್ತ್ರಿಗಳಿಗೂ ಈ ವಿದ್ವಾಂಸರ ಸಾನ್ನಿಧ್ಯದಿಂದ ಸ್ಫೂರ್ತಿ ಬಂದಿತ್ತು. ಅವರ ಅಭಿನಯ ಮಾತುಗಾರಿಕೆಗೆ ಅಂದು ಗರಿ ಮೂಡಿತ್ತು. ನಾಟಕ ಮುಗಿದ ಮೇಲೆ ಎಲ್ಲರೂ ನಾಟಕದ ಬಗ್ಗೆ ಶಾಸ್ತ್ರಿಗಳ ಅಭಿನಯದ ಬಗ್ಗೆ ಮುಕ್ತ ಕಂಠದಿಂದ ಪ್ರಶಂಸಿಸಿದರು. ಶ್ರೀಮಾನ್ ಸಿ.ಕೆ. ವೆಂಕಟರಾಮಯ್ಯನವರಂತೂ ಶಾಸ್ತ್ರಿಗಳನ್ನು ಬೆಳಗಿನ ಉಪಾಹಾರಕ್ಕೆ ತಮ್ಮ ಮನೆಗೆ ಆಮಂತ್ರಿಸಿದರು. ನಾಟಕದವರನ್ನು ಇಂಥ ಮಹನೀಯರು ಮೆಚ್ಚುಗೆಯಿಂದ ಆಹ್ವಾನಿಸಿದ್ದು ದೊಡ್ಡ ಸಂಗತಿಯೇ ಆಗಿತ್ತು.

ಮರುದಿನ ಬೆಳಿಗ್ಗೆ ಬೇಗನೇ ಎದ್ದು ಶಾಸ್ತ್ರಿಗಳು ವೆಂಕಟರಾಮಯ್ಯನವರ ಮನೆಗೆ ಹೋದರು. 'ದೊಡ್ಡವರನ್ನು ಕಾಯಿಸಬಾರದಲ್ಲ' ಎಂದು. ಆಗ ಇನ್ನೂ ಎಂಟೂವರೆ ಗಂಟೆ. ಮುಚ್ಚಿಕೊಂಡಿದ್ದ ಬಾಗಿಲನ್ನು ತಟ್ಟಿದಾಗ ವೆಂಕಟರಾಮಯ್ಯನವರೇ ಬಂದು ಬಾಗಿಲು ತೆರೆದರು. ಹೊರಗೆ ವಿನೀತರಾಗಿ ನಿಂತಿದ್ದ ಶಾಸ್ತ್ರಿಗಳ ಪರಿಚಯ ಅವರಿಗೆ ಹತ್ತಲಿಲ್ಲ. ಸಹಜವಾಗಿ ಯಾರೋ ಆಗಂತುಕರನ್ನು ಸ್ವಾಗತಿಸುವಂತೆ 'ಬನ್ನಿ...... ಕೂತ್ಕೊಳ್ಳಿ' ಅಂದರು. ಶಾಸ್ತ್ರಿಗಳು ಮಾತನಾಡದೇ ಕೂತರು. ಸಿ.ಕೆ. ವೆಂಕಟರಾಮಯ್ಯ ಅದೇನೋ ಬರೆಯುವುದರಲ್ಲಿ ತೊಡಗಿಸಿಕೊಂಡರು. ತಲೆಬಗ್ಗಿಸಿ ಬರೆಯುತ್ತಿದ್ದಂತೆ ಕೇಳಿದರು - 'ಮತ್ತೇನು ವಿಶೇಷ.. ಬಂದದ್ದು?... ಶಾಸ್ತ್ರಿಗಳು ಒಂದು ಕ್ಷಣ ಕಕ್ಕಾಬಿಕ್ಕಿಯಾದರೂ ಮರುಕ್ಷಣ ಸಾವರಿಸಿಕೊಂಡರು. ಅವರಿಗೆ ಅರ್ಥವಾಗಿತ್ತು. ವೆಂಕಟರಾಮಯ್ಯನವರಿಗೆ ತಮ್ಮ ಪರಿಚಯ ಹತ್ತಲಿಲ್ಲವೆಂದು. ನಿಧಾನವಾಗಿ ಕೇಳಿದರು 'ನನ್ನ ಪರಿಚಯ ಹತ್ತಲಿಲ್ಲವಾ?' ವೆಂಕಟರಾಮಯ್ಯ ತಲೆಯೆತ್ತಿ ವಿಸ್ಮಯದಿಂದ 'ಇಲ್ಲ'... ಯಾರು ತಾವು?' ಅಂದರು. ಶಾಸ್ತ್ರಿಗಳು ತಮ್ಮ ಪರಿಚಯ ಮಾಡಿಕೊಟ್ಟರು. ಸಿ.ಕೆ. ವೆಂಕಟರಾಮಯ್ಯ ತಮ್ಮ ಆಸನದಿಂದ ಎದ್ದು ಬಂದು ಶಾಸ್ತ್ರಿಗಳನ್ನು ತಬ್ಬಿಕೊಂಡರು. 'ಕ್ಷಮಿಸಿ..... ನಿಮ್ಮನ್ನು ಯಾರೋ ಅಂತ ತಿಳಿದೆ. ಗುರುತಿಸಲು ಆಗಲೇ ಇಲ್ಲ. ನಿನ್ನೆಯ ಪಾತ್ರ ನೋಡಿದಾಗ ನೀವು ನಿಜವಾಗಿಯೂ ಅರುವತ್ತು ವರ್ಷದ ವೃದ್ಧರಿರಬೇಕು ಎಂದುಕೊಂಡಿದ್ದೆ. ಮುದುಕರಾಗೇ ಅಭಿನಯಿಸಿದ್ದೀರಲ್ಲಾ. ಈಗ ನಿಮಗೆ ವಯಸ್ಸೆಷ್ಟು? ಇಷ್ಟು ಚಿಕ್ಕ ವಯಸ್ಸಿನ ತರುಣರು ಅಂದರೆ ನಂಬುವುದಕ್ಕೇ ಆಗುವುದಿಲ್ಲ. ಭಲೇ... ಅನ್ನಬೇಕು ನಿಮ್ಮ ಅಭಿನಯಕ್ಕೆ' ಎಂದು ಕೊಂಡಾಡಿದರು. ಅನಂತರ ಉಪಾಹಾರ ಬಂತು. ರಂಗಭೂಮಿಯ ಬಗ್ಗೆ, ಸಮಕಾಲೀನ ನಟರ ಬಗ್ಗೆ ಮಾತುಕತೆ ಆಯಿತು 'ಇನ್ನೊಮ್ಮೆ ಬನ್ನಿ' ಎಂದು ಅವರು ಬೀಳ್ಕೊಟ್ಟಾಗ ಶಾಸ್ತ್ರಿಗಳ ಹೃದಯ ತುಂಬಿ ಬಂದಿತ್ತು.

'ಗುರುಸಮರ್ಥ ನಾಟಕ ಮಂಡಳಿ' ಬೆಂಗಳೂರಿನಲ್ಲಿ ಮುಕ್ಕಾಂ ಹೂಡಿದಾಗ, ಮಗನ ಪ್ರಖ್ಯಾತಿಯನ್ನು ಕೇಳಿ ತಿಳಿದ ತಂದೆ ಅನಂತಯ್ಯ ನಾಟಕ ನೋಡಲೆಂದು ಬೆಂಗಳೂರಿಗೆ ಬಂದರು. ಮತ್ತೆ ಮತ್ತೆ ನಾಟಕ ನೋಡಿದರು. ಮಗನ ಸಿದ್ಧಿ - ಪ್ರಸಿದ್ಧಿ ಗಳನ್ನು ಕಂಡಾರೆ ಕಂಡು ಸಂತೋಷಪಟ್ಟರು. ಸಹಜವಾಗಿಯೇ ಅನಂತಯ್ಯನವರಿಗೆ ಒಂದು ನೋವಿತ್ತು. 'ಸೀತಾರಾಮನೂ ನನ್ನ ಮಗನೇ. ಅವನನ್ನು ಕಡೆಗಣಿಸಿ ನಾನು ತಪ್ಪು ಮಾಡಿದೆ. ಅವನಿಗೊಂದು ಒಳ್ಳೆಯ ಹುಡುಗಿಯನ್ನು ಹುಡುಕಿ ಮದುವೆ ಮಾಡಿ ತನ್ನ ಜವಾಬ್ದಾರಿ ಮುಗಿಸಬೇಕು. ಅನಂತರ ಅವನ ಜೊತೆಗೇ ಇದ್ದು, ಅವನ ಶ್ರೇಯಸ್ಸನ್ನೂ ಉನ್ನತಿಯನ್ನು ನೋಡಿ ಸಂತೋಷಪಡಬೇಕು' - ಎಂದು ಅಂದುಕೊಂಡರು. ಮಗನ ಬಳಿ ಅದನ್ನೇ ಹೇಳಿದರು. ಶಾಸ್ತ್ರಿಗಳಿಗೂ ಸಂಸಾರಿಯಾಗಲು ಇಷ್ಟವಿತ್ತು. ಮಗನ ಒಪ್ಪಿಗೆ ಪಡೆದು ಊರಿಗೆ ಹೋದ ಅನಂತಯ್ಯ ಸೊಸೆಯಾಗಬಲ್ಲ ಒಳ್ಳೆಯ ಹುಡುಗಿಗಾಗಿ ಹುಡುಕಾಟ ನಡೆಸಿದರು. ಸೀತಾರಾಮ ಶಾಸ್ತ್ರಿಗಳು ರಂಗಭೂಮಿಯಲ್ಲಿ ಗಳಿಸಿದ ಯಶಸ್ಸು - ಪ್ರಸಿದ್ಧಿ ಎಲ್ಲರಿಗೂ ಅಭಿಮಾನದ ಸಂಗತಿ ಆಗಿತ್ತಾದರೂ, ಊರಿಂದ ಊರಿಗೆ ಅಲೆಯುತ್ತ ಹೋಗುವ ವ್ಯಕ್ತಿಗೆ ಮಗಳನ್ನು ಕೊಡಲು ಒಪ್ಪುವುದು ಯಾವ ಕನ್ಯಾಪಿತೃವಿಗೂ ಸುಲಭದ ಮಾತಾಗಿರಲಿಲ್ಲ. ಆದರೂ ಪರಿಚಿತ ಕುಟುಂಬವೊಂದರ ಹುಡುಗಿಯನ್ನು ಆಯ್ಕೆ ಮಾಡಿ, ಮಗನಿಗೆ ಪತ್ರ ಬರೆದರು - 'ಸೀತಾರಾಮ, ಊರಿನಲ್ಲೊಂದು ಹುಡುಗಿ ನೋಡಿದ್ದೇನೆ. ತುಂಬ ಚೆನ್ನಾಗಿದ್ದಾಳೆ. ನೀನು ಊರಿಗೇ ಬಂದು ನೆಲೆಸುವುದಾದರೆ ಹುಡುಗಿಯನ್ನು ಮದುವೆ ಮಾಡಿಕೊಡಬಹುದು ಎಂದು ಅವಳ ಅಪ್ಪ ಹೇಳಿದ್ದಾರೆ. ಹಾಗಾಗಿ ನೀನು ಒಂದು ತಿಂಗಳು ರಜಾ ಹಾಕಿ ಊರಿಗೆ ಬಂದುಬಿಡು. ಆಮೇಲೆ ನಿನಗೆ ಹೇಗೆ ಇಷ್ಟವೋ ಹಾಗೆ ಮಾಡಬಹುದು.'...

'ನಿಜ ಊರಿಗೆ ಹೋಗಬೇಕು, ಮದುವೆಯಾಗಬೇಕು. ಆದರೆ ಒಂದು ತಿಂಗಳು ರಜಾ ಹಾಕುವುದು? ಎಲ್ಲಿ ಸಾಧ್ಯ? ಯಾವುದೇ ಕಂಪನಿ ತನ್ನ ಪ್ರಧಾನ ನಟನನ್ನು ಬಿಟ್ಟು ಒಂದು ತಿಂಗಳು ನಿಭಾಯಿಸುವುದು ಹೇಗೆ? ಕಂಪನಿಯ ಪಾಲಿಗೆ ಆಧಾರಸ್ತಂಭರೇ ಆದ ಶಾಸ್ತ್ರಿಗಳನ್ನುಳಿದು ಕಂಪನಿ ಬದುಕೀತೇ? ಏನು ಮಾಡುವುದು? ಇದು ಕೇವಲ ಶಾಸ್ತ್ರಿಗಳ ತೊಳಲಾಟ ಮಾತ್ರವಾಗಿರಲಿಲ್ಲ. ಇಡೀ ಕಂಪನಿಯ ನಟರನ್ನೆಲ್ಲ ಕಾಡುತ್ತಿದ್ದ ಪ್ರಶ್ನೆ. ಯಾಕೆಂದರೆ ಇದು ಎಲ್ಲರ ಸಾವು-ಬದುಕಿನ ಸವಾಲು. ದಿನಾ ಕಂಪನಿ ಮನೆಯಲ್ಲಿ ಚರ್ಚೆ-ಸಂವಾದ. ನಿರ್ಧಾರಕ್ಕೆ ಬರುವುದೇ ಅಸಾಧ್ಯವಾಯಿತು. ಆದರೆ ವಿಧಿಯ ನಿರ್ಧಾರ ಬೇರೆಯದೇ ಆಗಿತ್ತು.

ಇದ್ದಕ್ಕಿದ್ದಂತೆ ಒಂದು ದಿನ ಟೆಲಿಗ್ರಾಂ ಬಂತು. ಶಾಸ್ತ್ರಿಗಳ ಹೆಸರಿಗೆ. ಊರಿನಿಂದ ಅಣ್ಣ ಕಳಿಸಿದ ತಂತಿ. ಅದರಲ್ಲಿ ಎರಡೇ ಸಾಲು - 'ತಂದೆಯವರು ದೈವಾಧೀನರಾಗಿದ್ದಾರೆ. ಊರಿಗೆ ಹೊರಟು ಬಾ' ಇದೆಂಥ ವಿಚಿತ್ರ! ವಿಧಿಯ ಅಣಕ! ಮದುವೆಯಾಗಲು ಊರಿಗೆ

ಹೊರಡಬೇಕೆಂದಿದ್ದಾಗ, ತಂದೆಯ ಅಂತ್ಯಕ್ರಿಯೆಗೆ ಆಹ್ವಾನ! ಆಘಾತಕಾರಿ ಸುದ್ದಿ. ಅದೇ ದಿನ ವರದಕ್ಷಿಣೆಯ ನಾಟಕ. ಬಿಟ್ಟು ಹೋಗುವಂತಿರಲಿಲ್ಲ. ಮನಸ್ಸನ್ನು ಕಲ್ಲು ಮಾಡಿದರು. ತಂದೆಯ ವೈಕುಂಠ ಸಮಾರಾಧನೆಗೆ 2-3 ದಿನ ಮೊದಲು ಊರಿಗೆ ಹೋಗುವುದು ಎಂದು ನಿರ್ಧಾರ ಮಾಡಿದರು. ತಂದೆಯ ಸಾವಿನ ನೋವನ್ನು ಎದೆಯೊಳಗೆ ಅಡಗಿಸಿಟ್ಟುಕೊಂಡು ರಂಗಭೂಮಿಯನ್ನು ಏರಿದರು. ಲಕ್ಷ್ಮೀಪತಿರಾಯನ ಪಾತ್ರ ಪ್ರಪಂಚದಲ್ಲಿ ವಾಸ್ತವ ಪ್ರಪಂಚವನ್ನು ಮರೆತರು. ಬದುಕಿನ ಕ್ಷಣಗಳು ಎಷ್ಟು ಕಠೋರ! ಕರ್ತವ್ಯವೆನ್ನುವುದು ಎಷ್ಟು ನಿಷ್ಠುರ! ತಂದೆಯ ಸಾವಿನ ಒಂಬತ್ತನೇ ದಿನ ಊರಿಗೆ ಹೋದರು. ಕ್ರಿಯಾಕರ್ಮ ಮುಗಿಸಿ ಬೆಂಗಳೂರಿಗೆ ಬಂದರು. ಬರುವ ಮುನ್ನ ಅವರ ಹೃದಯ ಭಾರವಾಗಿತ್ತು.

ತಿಂಗಳು ಉರುಳಿದವು. ಹೊಸ ವರ್ಷ ಬಂದ ಮೇಲೆ ಶಾಸ್ತ್ರಿಗಳು ತಮಗಾಗಿ ಯೋಗ್ಯಳಾದ ಹುಡುಗಿಯನ್ನು ಹುಡುಕಲು ಅಣ್ಣಂದಿರಿಗೆ ಕೇಳಿಕೊಂಡರು. ಯಾಕೆಂದರೆ ಕುಲಬಾಂಧವರೆಲ್ಲ ಇದ್ದುದು ಸಿದ್ದಾಪುರ -ಶಿರಸಿ ತಾಲೂಕುಗಳಲ್ಲಿ. ಅಲ್ಲದೆ ಮನೆಯ ಹಿರಿಯರು ಹುಡುಗಿಯನ್ನು ಕೇಳಬೇಕು ತಾನೆ? ಈ ಮಧ್ಯೆ ಶಾಸ್ತ್ರಿಗಳಿಗೆ ಬಹುದಿನಗಳಿಂದ ಒಂದು ಆಲೋಚನೆ ಬಂದಿತ್ತು. ತಾನು ಮದುವೆಯಾದ ಹೆಣ್ಣು ತನ್ನೊಂದಿಗೆ ಬಣ್ಣ ಹಚ್ಚಿ ರಂಗದ ಮೇಲೆ ಅಭಿನಯಿಸಲು ಸಿದ್ಧಳಿರಬೇಕು. ಇಬ್ಬರೂ ಮನಃಪೂರ್ವಕ ಪ್ರಯತ್ನಿಸಿ ಆದರ್ಶ ನಟ-ನಟಿ ಜೋಡಿಯಾಗಿ ರಂಗಭೂಮಿಯ ಚರಿತ್ರೆಗೇ ಒಂದು ಹೊಸ ಅಧ್ಯಾಯ ಬರೆಯಬೇಕು - ಹೀಗೆ ಏನೇನೋ ಕನಸುಗಳು.

ಶಾಸ್ತ್ರಿಗಳು ಹೀಗೆ ಯೋಚಿಸುತ್ತಿದ್ದ ದಿನಗಳಲ್ಲಿ ರಂಗಭೂಮಿಯನ್ನು ಕೆಲವೇ ಸ್ತ್ರೀಯರು ಪ್ರವೇಶ ಮಾಡಿದ್ದರು. ಒಂದು ರೀತಿಯಲ್ಲಿ ರಂಗಭೂಮಿ ಕುಲೀನ ಸ್ತ್ರೀಯರಿಗೆ ಸಂಸಾರಿಗಳಿಗೆ ನಿಷಿದ್ಧ ಸ್ಥಾನವೆಂದೇ ಭಾವಿಸಲಾಗಿತ್ತು. ಅಲ್ಲದೆ ಪುರುಷನೇ ಸ್ತ್ರೀಪಾತ್ರವನ್ನು ಸಹಜವೆಂಬಂತೆ ಅಭಿನಯಿಸುವುದೇ ನಿಜವಾದ ಕಲೆಗಾರಿಕೆ ಎಂದು ಭಾವಿಸಲಾಗಿತ್ತು. ಯಾಕೆಂದರೆ ಸ್ತ್ರೀಯು ಪುರುಷನೊಂದಿಗೆ ಅಭಿನಯಿಸುವಾಗ ಪೂರ್ಣ ನಿಸ್ಸಂಕೋಚದಿಂದ ಅಭಿನಯಿಸಲಾರಳು. ಇದರಿಂದ ನಿಜವಾದ ಕಲಾಭಿವ್ಯಕ್ತಿ ಆಗಲಾರದು ಎಂಬ ವಾದ ಆಗ ಪ್ರಬಲವಾಗಿತ್ತು. ಶಾಸ್ತ್ರಿಗಳ ಗುರುಗಳಾದ ಸದಾಶಿವರಾವ್ ಗರುಡರೂ ಈ ಸಿದ್ಧಾಂತವನ್ನೇ ಒಪ್ಪಿಕೊಂಡಿದ್ದರು. ಆದರೆ ಕಾಲ ಬದಲಾದಂತೆ ಜನರು ಸ್ತ್ರೀ ಪಾತ್ರಗಳಲ್ಲಿ ಸ್ತ್ರೀಯರನ್ನೇ ನಿರೀಕ್ಷಿಸಿದರು. ಸ್ತ್ರೀ ಸಹಜ ನಾಜೂಕು, ಮೈಮಾಟ, ಭಂಗಿ ಪುರುಷನಿಗೆ ಬಾರದು. ಹೆಣ್ಣು ಹೇಗೇ ಅಭಿನಯಿಸಿದರೂ ಅದೇ ಚೆನ್ನ ಎಂದು ಭಾವಿಸತೊಡಗಿದರು. ಸ್ತ್ರೀಯರೂ ಅಷ್ಟೇ ಮೈ ಚಳಿ ಬಿಟ್ಟು, ರಂಗಭೂಮಿಯಲ್ಲಿ ನಟಿಸಲು ಮುಂದಾದರು. ಹಾಗಾಗಿ ತಾನೂ ತನ್ನ ವೃತ್ತಿಗೆ ಅನುರೂಪಳಾದವಳನ್ನೇ ಆಯ್ಕೆ ಮಾಡಿಕೊಂಡರೆ ಜೀವನಯಾಪನೆಗೂ ಅನುಕೂಲ, ತನ್ನ ಆದರ್ಶಕ್ಕೂ ಅನುಕೂಲ ಎಂದು ಆಲೋಚಿಸಿದರು.

ಶಾಸ್ತ್ರಿಗಳಿಗೆ ಗೊತ್ತಿರಲಿಲ್ಲ - ರಂಗಭೂಮಿಯ ಮೇಲೆ ನಾಟಕ ಅಭಿನಯಿಸುತ್ತಿದ್ದ ತನಗೆ ಜೀವನ ರಂಗಭೂಮಿಯಲ್ಲಿ 'ಮದುವೆಯ ನಾಟಕ'ವನ್ನೂ ಅಭಿನಯಿಸಬೇಕಾದ ದಿನಗಳೂ ಬರಲಿವೆ ಎಂಬುದು. ಊರಿನಿಂದ ಹೊರಗಿದ್ದ ಶಾಸ್ತ್ರಿಗಳು ತಮಗೆ ತಾವೇ ಹೆಣ್ಣು ಹುಡುಕಿಕೊಳ್ಳಲು ಸಾಧ್ಯವಿಲ್ಲವಾಗಿ, ತಮಗೆ ಸೂಕ್ತವಾದ, ಅಭಿನೇತ್ರಿಯಾಗಬಲ್ಲ ಸುಶೀಲ ರೂಪವತಿಯೊಬ್ಬಳನ್ನು ಹುಡುಕುವ ಜವಾಬ್ದಾರಿಯನ್ನು ತಮ್ಮನಾದ ಪರಮೇಶ್ವರ ಶಾಸ್ತ್ರಿಗೆ ವಹಿಸಿದರು. ಹುಡುಗಿಯನ್ನಷ್ಟೇ ಅಲ್ಲ; ಮದುವೆಯ ದಿನ ಮುಹೂರ್ತಗಳನ್ನೂ ನಿರ್ಧರಿಸಿ ತಂತಿ ಕಳಿಸಿದರೆ ಎರಡು ದಿನಗಳ ಮಟ್ಟಿಗೆ ಬಂದು ಮದುವೆಯಾಗಿ ಹೆಂಡತಿಯನ್ನು ಕರೆದುಕೊಂಡು ಹೋಗುತ್ತೇನೆ - ಎಂದೂ ತಿಳಿಸಿಬಿಟ್ಟಿರು.

ಕಂಪನಿ ಬೆಂಗಳೂರಿನಿಂದ ಹಾಸನಕ್ಕೆ ಸ್ಥಳಾಂತರಗೊಂಡಿತ್ತು. ಯೋಗ್ಯ ವಧುವಿನ ಹುಡುಕಾಟ ಊರಿನಲ್ಲಿ ನಡೆದೇ ಇತ್ತು. ಆ ದಿನಗಳಲ್ಲಿ ಶಿರಸಿಯ ಅಕದಾಸ ಗಣಪತಿಭಟ್ಟರು ವಿಧವಾವಿವಾಹ ಚಳವಳಿಯನ್ನೇ ಪ್ರಾರಂಭಿಸಿದ್ದರು. ದಾಂಪತ್ಯದ ಬದುಕಿನಿಂದ ವಂಚಿತರಾದ ಬಾಲವಿಧವೆಯರಿಗೆ ಬದುಕು ಕೊಡಲು ಮುಂದೆ ಬರಬೇಕೆಂದು ಯುವಕರಿಗೆ ಕರೆ ನೀಡಿದ್ದರು. ಅವರ ಮೂಲಕ ಪುನರ್ವಿವಾಹಗಳು ಬಯಸಿದ ವಿಧವೆ ಯುವತಿಯೊಬ್ಬಳು ಇರುವುದು ಪರಮೇಶ್ವರ ಶಾಸ್ತ್ರಿಗೆ ಗೊತ್ತಾಯಿತು. ಸೀತಾರಾಮ ಶಾಸ್ತ್ರಿಗಳಿಗೆ ಪತ್ರ ಹೋಯಿತು. ಶಾಸ್ತ್ರಿಗಳು ತಮ್ಮ ನಿಬಂಧನೆಗಳಿಗೆ ಸರಿ ಹೊಂದುವಂತಿದ್ದರೆ, ಮದುವೆ ನಿರ್ಧರಿಸಿ ತಂತಿ ಕೊಡಲು ತಿಳಿಸಿಬಿಟ್ಟರು. ಮೂರನೆಯ ದಿನವೇ ಟೆಲಿಗ್ರಾಂ - 'ನಾಳೆ ಬೆಳಿಗ್ಗೆ 11 ಗಂಟೆಗೆ ಶಿರಸಿಯಲ್ಲಿ ಮದುವೆ. ಹೊರಟು ಬಾ'

ಯಾರ ಜೀವನದಲ್ಲಿಯೂ ಅಂದುಕೊಂಡದ್ದೆಲ್ಲ ನಡೆಯುವುದಿಲ್ಲ, ಕನಸುಗಳಿಗೆಲ್ಲ ಜೀವ ಬರುವುದಿಲ್ಲ; ನಿಜ. ಆದರೆ ಶಾಸ್ತ್ರಿಗಳ ಜೀವನದಲ್ಲಿ ಅನಿರೀಕ್ಷಿತಗಳೇ ಹೆಚ್ಚು. ಅನಪೇಕ್ಷಿತವಾದುದನ್ನೂ ಒಪ್ಪಿಕೊಳ್ಳಬೇಕಾದ ಅನಿವಾರ್ಯಗಳೇ ಅಧಿಕ. ಶಾಸ್ತ್ರಿಗಳ ದುಡುಕೋ, ವಿಧಿ ಉಂಟು ಮಾಡಿದ ಕೆಡುಕೋ! ಅವರು ತೆಗೆದುಕೊಂಡ ನಿಲುವು ಅವರಿಗೇ ಮುಳುವಾಗುವಂತೆ ಹಣೆಯಲ್ಲಿ ಬರೆದಿತ್ತೇನೋ! ಮನುಷ್ಯ ಪ್ರಯತ್ನ ಮೀರಿದ ಇನ್ನೇನೋ ಒಂದು ಕಾದುಕೊಂಡಿದ್ದರೆ ತಪ್ಪಿಸುವವರು ಯಾರು?

ಎರಡು ದಿನಗಳ ಮಟ್ಟಿಗೆ ವ್ಯವಸ್ಥೆ ಮಾಡಿ ರಾತ್ರಿಯ ರೈಲಿಗೆ ಶಾಸ್ತ್ರಿಗಳು ಊರಿಗೆ ಹೊರಟರು. ಸಾಗರಕ್ಕೆ ಹೋಗಿ ಅಲ್ಲಿಂದ ನಸುಕಿನಲ್ಲಿ ಸಿದ್ಧಾಪುರಕ್ಕೆ ಬಂದು ಅಣ್ಣ ಗಣಪತಿ ಮನೆ ತಲುಪಿದರು. ಅಣ್ಣ ಈ ತಮ್ಮನನ್ನು ಕಾಣುತ್ತಲೇ ಹೇಳಿದ - 'ನೋಡು ಸೀತಾರಾಮ, ನಾನು ನಿನ್ನ ಅಣ್ಣ. ನಿನಗಿಂತ ಈ ವಿಷಯದಲ್ಲಿ ನನ್ನ ಅನುಭವಕ್ಕೇ ಬೆಲೆ ಹೆಚ್ಚು. ಪರಮೇಶ್ವರ ನಿನಗಾಗಿ ನೋಡಿದ ಹುಡುಗಿ ಏನೇನೂ ಚೆನ್ನಾಗಿಲ್ಲ. ಕುರೂಪಿಯೂ ಕುಬ್ಜೆಯೂ ಆದ ಆಕೆ ನಿನಗೆ ಯೋಗ್ಯಳಲ್ಲ.

ನೀನು ಅವಳನ್ನು ಒಪ್ಪಲಾರೆ. ಆದರೆ ಶಿರಸಿಗೆ ನೀನು ಹೋದರೆ ನೀನು ಅವಳಿಗೆ ತಾಳಿ ಕಟ್ಟಲೇ ಬೇಕಾಗುತ್ತದೆ. ಆದ್ದರಿಂದ ಇಲ್ಲಿಂದಲೇ ಹಿಂತಿರುಗಿ ಹೋಗಿಬಿಡುವುದು ಒಳ್ಳೆಯದು..... ಇಲ್ಲವಾದರೆ ಜೀವನದುದ್ದಕ್ಕೂ ವಿಷಮದಾಂಪತ್ಯ ಅನುಭವಿಸಬೇಕಾಗುತ್ತದೆ'

ಶಾಸ್ತ್ರಿಗಳಿಗೆ ಉಭಯ ಸಂಕಟ. ಅಣ್ಣನ ಮಾತಿನಲ್ಲಿ ಅರ್ಥವಿದೆ. ಆದರೆ ಪರಮೇಶ್ವರನಿಗೆ ಮಾತು ಕೊಟ್ಟಾಗಿದೆ. ಈಗ ಹಿಂಜರಿದರೆ ಪರಮೇಶ್ವರನ ಮರ್ಯಾದೆಯ ಗತಿ ಏನು? ವಿಧವೆಯಾದ ಹುಡುಗಿಯ ಭವಿಷ್ಯಕ್ಕೆ ದಿಕ್ಕು ಯಾರು? ಏನೂ ತೋಚದೆ ಶಾಸ್ತ್ರಿಗಳು ಶಿರಸಿಗೆ ಹೋದರು. ಮದುವೆಯಾಗಲು ಕಾದಿದ್ದ ಹುಡುಗಿಯನ್ನು ನೋಡಿ ಭೂಮಿಗೆ ಇಳಿದುಹೋದರು. ಮೂರಡಿ ಎತ್ತರದ ಕುರೂಪಿ. ಸಿಟ್ಟು ನೆತ್ತಿಗೇರಿತು. ತಮ್ಮನನ್ನು ಕರೆದು ಕೂಗಾಡಿದರು. 'ಏನು ಪರಮೇಶ್ವರ? ನಾನು ಹೇಳಿದ್ದೇನು, ನೀನು ಮಾಡಿದ್ದೇನು? ಈಕೆಯನ್ನು ಕಟ್ಟಿಕೊಂಡು ನಾನೇನು ಮಾಡಲಿ? ನೀನೇ ಈಕೆಯನ್ನು ಮದುವೆಯಾಗು. ನಾನು ಹೊರಟೆ'... ಎಂದು ಎದ್ದರು. ಅವಮಾನಿತನಾದ ಪರಮೇಶ್ವರ ಪ್ರಾಣ ಕಳೆದುಕೊಳ್ಳಲು ಉಧ್ಯುಕ್ತನಾದ. ಬೇರೆ ದಾರಿಯಿಲ್ಲದೇ, ಅಕದಾಸ ಗಣಪತಿಭಟ್ಟರ ಮಧ್ಯಸ್ಥಿಕೆಯಲ್ಲಿ ಅವಳೊಂದಿಗೆ ಶಾಸ್ತ್ರಿಗಳ ಮದುವೆ ಆಗಿಯೇ ಹೋಯಿತು. ಗತ್ಯಂತರವಿಲ್ಲದೆ ಅವರ ಜೀವನದಲ್ಲಿ ಸಂಗಾತಿಯೊಬ್ಬಳ ಪ್ರವೇಶವಾಯಿತು. ಆದರೆ ಒಲವಿಲ್ಲದ ದಾಂಪತ್ಯ ಎಷ್ಟು ದಿನ ನಡೆದೀತು?

ಶಾಸ್ತ್ರಿಗಳು ಹೆಂಡತಿಯೊಂದಿಗೆ ಹಾಸನಕ್ಕೆ ಹೋದರು. ಕೆಲವು ತಿಂಗಳು ಆಕೆಯೊಂದಿಗೆ ಸಂಸಾರ ಮಾಡಿದರು. ಅಸಮಾಧಾನದ ನಡುವೆಯೂ ಅವಳಿಗೆ ತರಬೇತಿ ನೀಡಿ ರಂಗದ ಮೇಲೆ ಪಾತ್ರವನ್ನು ಮಾಡಿಸಿಯೂ ಬಿಟ್ಟರು. ಆದರೆ ಜೀವನರಂಗದಲ್ಲಿ ಆಕೆ ಯಶಸ್ವಿಯಾಗಲಿಲ್ಲ. ಅಭಿರುಚಿ, ಅಭಿಮತ ಬೇರೆಯಾಗಿದ್ದಾಗ ಒಟ್ಟಿಗೆ ಬದುಕುವುದೆಂತು? ಮದುವೆಯ ಮೂಲಕ ಒಂದಾಗಿದ್ದ ಅವರು ಬೇರೆಯಾಗಲೇಬೇಕಾಯಿತು. ಅಂತೂ ಆಕೆ ನೇಪಥ್ಯಕ್ಕೆ ಸರಿದು ಹೋದಳು. ಇದರಿಂದ ಆದದ್ದೆಂದರೆ ಶಾಸ್ತ್ರಿಗಳಿಗೆ 'ಮದುವೆಯ ಸಂಸ್ಕಾರ' ಮಾತ್ರ. ಮುಂದೆಂದೂ ಶಾಸ್ತ್ರಿಗಳು ಮತ್ತೆ ಮದುವೆಯಾಗುವ ಮನಸ್ಸು ಮಾಡಲಿಲ್ಲ.

## ಮುಳುಗಿದ ಹಡಗು

ರಂಗಭೂಮಿಯ ಬದುಕು ಸ್ಥಿರತೆಯಿಲ್ಲದ್ದು. ಒಮ್ಮೊಮ್ಮೆ ಯಶಸ್ಸಿನ ಪ್ರವಾಹದ ಉಕ್ಕು, ಮೇಲಕ್ಕೇರಿ ಮೆರೆಯುತ್ತಿದ್ದಂತೆ ಒಮ್ಮೆಲೇ ಇಳಿತದ ಪಾತಾಳಕ್ಕೆ. ನಟನ ಬದುಕು ಸದಾ ಅತಂತ್ರದ್ದು. ಅದು ಸಮತಟ್ಟಿನ ಹಾದಿಯಲ್ಲಿ. ಏರಿಳಿತ - ಕೊರಕಲು ಅಲ್ಲಿ ಮಾಮೂಲು. ಕಾಲಕ್ಕೆ, ಸಂದರ್ಭಕ್ಕೆ ತಕ್ಕ ಪ್ರಯೋಗಶೀಲತೆಯಿಲ್ಲದಿದ್ದರಂತೂ ಮುಗಿದೇ ಹೋಯಿತು; ಗಟ್ಟಿಯಾದ ಕಂಪನಿಯೂ ಒಡೆದ ಹಡಗಾಗಿ ಬಿಡುತ್ತಿತ್ತು.

ಗುರು ಸಮರ್ಥ ನಾಟಕ ಮಂಡಳಿಯ ಸ್ಥಿತಿ ತೂಗುಯ್ಯಾಲೆಯಾಗಿತ್ತು. ಕೆಲವು ಮುಕ್ಕಾಮುಗಳಲ್ಲಿ ಗಲ್ಲಾಪೆಟ್ಟಿಗೆ ತುಂಬುತ್ತಿರಲಿಲ್ಲ. ಆಡುತ್ತಿದ್ದ ನಾಟಕಗಳೆಲ್ಲ ಹಳೆಯವಾಗಿದ್ದವು. ಹೊಸ ನಾಟಕವನ್ನು ಕೂಡಿಸಲು ಬಿಡುವು ಬೇಕಾಗಿತ್ತು. ಬಿಡುವಿನಲ್ಲಿ ಹೊಟ್ಟೆಗೇನು ಮಾಡುವುದು? ಮಂಡಳಿಯ ಯಜಮಾನರಾದ ಜಗನ್ನಾಥರಾಯರಲ್ಲಿ ನಟರಿಗೆ ವಿಶ್ವಾಸ ಕಡಿಮೆಯಾಗತೊಡಗಿತ್ತು. 1932ರಲ್ಲಿ ಇಂಗ್ಲಿಷರ ವಿರುದ್ಧ ಚಳವಳಿ ತೀವ್ರವಾಗತೊಡಗಿತ್ತು. ಒಡೆದು ಆಳುವ ನೀತಿಯಲ್ಲಿ ಚಾಣಾಕ್ಷರಾಗಿದ್ದ ಇಂಗ್ಲಿಷರು ಚಳವಳಿಗಾರರ ಒಗ್ಗಟ್ಟನ್ನು ಮುರಿಯಲು ತಂತ್ರಗಳನ್ನು ಹೂಡುತ್ತಿದ್ದರು. ಜನರಲ್ಲಿ ದೇಶಭಕ್ತಿಯನ್ನೂ, ಸ್ವಾತಂತ್ರ್ಯದ ಕೆಚ್ಚನ್ನೂ ಹೆಚ್ಚಿಸಲು ಭಾಷಣ, ಪುರಾಣ ಪ್ರವಚನ, ಕಥನ ಗೀತೆಗಳ ಹಾಡು, ನಾಟಕ ಇತ್ಯಾದಿ. ಅಲ್ಲಲ್ಲಿ ನಾಟಕವಾಡುತ್ತಿದ್ದ ಕಂಪನಿಗಳು ನಾಟಕದ ನಡುವೆ ದೇಶಭಕ್ತಿ ಪ್ರಚೋದಕವಾದ ಮಾತುಗಳನ್ನು - ಹಾಡುಗಳನ್ನು ಉಪಾಯಾಂತರದಿಂದ ಬಳಸಿಕೊಳ್ಳುತ್ತಿದ್ದರು. ಅಬ್ಬಿಗೇರಿ ಕಂಪನಿಯವರು 'ಕಿತ್ತೂರು ಚೆನ್ನಮ್ಮ' ನಾಟಕವಾಡಲು ಹೋಗಿ ಇಂಗ್ಲಿಷ್ ಸರಕಾರದಿಂದ ಲೈಸನ್ಸ್ ರದ್ದುಪಡಿಸಿಕೊಂಡಿದ್ದರು. ಇಂಥ ಸ್ಥಿತಿಯಲ್ಲಿ ಶಾಸ್ತ್ರಿಗಳಿಗೆ ಹೊಳೆದದ್ದು - ಸಮಕಾಲೀನ ಸಂದರ್ಭಕ್ಕೆ ಉಚಿತವಾದ 'ಟಿಪ್ಪು ಸುಲ್ತಾನ್' ಚರಿತ್ರೆಯನ್ನು ನಾಟಕವಾಗಿ ಬರೆಯಬೇಕೆಂಬುದು. ಗುರು ಸಮರ್ಥ ನಾಟಕ ಮಂಡಳಿಗೆ ಜೀವ ಕೊಡಲು ಹೊಸ ನಾಟಕವೂ ಬೇಕಾಗಿತ್ತು.

ಅರಸೀಕೆರೆಯಲ್ಲಿ ಮಂಡಳಿ ಬೀಡು ಬಿಟ್ಟಾಗ ಶಾಸ್ತ್ರಿಗಳು ಚೆನ್ನಪಟ್ಟಣದ ಗ್ರಂಥಾಲಯಕ್ಕೆ ಹೋಗಿ ಪುಸ್ತಕಗಳನ್ನು ತಂದು ಟಿಪ್ಪೂ ಇತಿಹಾಸವನ್ನು ಅಧ್ಯಯನ ಮಾಡಿದರು. ಶ್ರೀರಂಗಪಟ್ಟಣಕ್ಕೆ ಹೋಗಿ ಟಿಪ್ಪೂ ಸುಲ್ತಾನನ ಜೀವನಕ್ಕೆ ಸಂಬಂಧಿಸಿದ ಅವಶೇಷಗಳನ್ನು - ಸ್ಮಾರಕಗಳನ್ನು ನೋಡಿಬಂದರು. ಇದರಿಂದ ಅವರಿಗೆ ಒಂದು ಖಚಿತ ಚಿತ್ರ ಸಿಕ್ಕಿತು. ಟಿಪ್ಪು ಸ್ವಾತಂತ್ರ್ಯಪ್ರೇಮಿ, ರಾಷ್ಟ್ರಭಕ್ತ. ಹಿಂದೂಗಳನ್ನು ಸಮಾನವಾಗಿ ನೋಡಿಕೊಳ್ಳುತ್ತಿದ್ದ ಪ್ರಜಾವತ್ಸಲ - ಸಹಿಷ್ಣು. ಹಿಂದೂ-ಮುಸ್ಲಿಮರ ನಡುವಣ ಮೈತ್ರಿಯನ್ನು ಕೆಡಿಸಲು ಟಿಪ್ಪು ಹಿಂದೂ ದ್ವೇಷಿಯಾಗಿದ್ದನೆಂಬ ಕಥೆಯನ್ನು ಪ್ರಚಾರ ಮಾಡಿದ್ದು ಇಂಗ್ಲಿಷರ ತಂತ್ರವಾಗಿತ್ತು. ಇದು ಸತ್ಯವಾಗಿರದಿದ್ದರೂ ಜನರಿಗೆ ಅರ್ಥವಾಗುತ್ತಿರಲಿಲ್ಲ. ಕೆಲವು ನೀಚ ಸ್ವಾರ್ಥಿಗಳು ಇಂಗ್ಲಿಷರ ಪರವಾಗಿ ಕೆಲಸ ಮಾಡಿ ರಾಜ್ಯವನ್ನು -ರಾಷ್ಟ್ರವನ್ನು ಬಿಳಿಯರಿಗೆ ಒಪ್ಪಿಸಿದ್ದರು. ನಮ್ಮವರೇ ನಮಗೆ ದ್ರೋಹ ಬಗೆದಿದ್ದರು. ಈ ಸತ್ಯಕತೆಯನ್ನು ನಾಟಕದಲ್ಲಿ ನಿರೂಪಿಸಿದರೆ ಜನರು ಪರಸ್ಪರ ದ್ವೇಷ ಮರೆತು ಪ್ರೀತಿಯಿಂದ ಬಾಳಲು, ದೇಶಭಕ್ತಿಯ ಪ್ರೇರಣೆ ಪಡೆಯಲು ಸಾಧ್ಯವಾದೀತು ಎಂದು ಶಾಸ್ತ್ರಿಗಳ ಯೋಚನೆ. ಹುಚ್ಚು ಧೈರ್ಯ ಮಾಡಿ ನಾಟಕ ಬರೆದೇ ಬಿಟ್ಟರು.

ಆಗ ಮೈಸೂರಿನ ದಿವಾನರಾಗಿದ್ದವರು ಸರ್ ಮಿರ್ಜಾ ಇಸ್ಮಾಯಿಲ್ ಸಾಹೇಬರು. ಶಾಸ್ತ್ರಿಗಳು ಅವರಿಗೆ ನಾಟಕ ತೋರಿಸಿದರು. ಅದನ್ನು ಓದಿ ದಿವಾನರು ಸಂತೋಷಪಟ್ಟರು. ಆದರೆ

'ಇಂಗ್ಲಿಷರು ಭಾರತದಲ್ಲಿ ಇರುವವರೆಗೆ ಈ ನಾಟಕ ಆಡಲು ನಿಮಗೆ ಅನುಮತಿ ಸಿಗಲಾರದು. ಹಾಗೊಮ್ಮೆ ಆಡಲು ಹೋದರೆ ಭಾರೀ ಕಷ್ಟವನ್ನು ಎದುರಿಸಬೇಕಾದೀತು'- ಎಂದು ಸೂಚನೆ ನೀಡಿದರು. ಅಂದಿನ ಸ್ಥಿತಿಯಲ್ಲಿ ಅವರು ಹೇಳಿದ ಮಾತು ನಿಜವಾಗಿತ್ತು. ಹಾಗಾಗಿ 'ಟಿಪ್ಪು ಸುಲ್ತಾನ' ನಾಟಕ ಶಾಸ್ತ್ರಿಗಳ ಪೆಟ್ಟಿಗೆಯ ತಳದಲ್ಲಿ ಭದ್ರವಾಗಿ ಅಡಗಿ ಉಳಿತಿತ್ತು.

ಹೀಗಾಗಿ ಹೊಸ ನಾಟಕವಿಲ್ಲದೆ ಹಳೆಯ ನಾಟಕಗಳನ್ನು ಮತ್ತೆ ರಂಗದ ಮೇಲೆ ತರುವ ಪ್ರಯತ್ನ ನಡೆಯಿತು. ಅದರಲ್ಲಿ 'ಪನ್ನಾದಾಸಿ' ಪ್ರಮುಖವಾಗಿತ್ತು. ಆಗ ಕಂಪನಿ ದಾವಣಗೆರೆಯಲ್ಲಿತ್ತು. ಪನ್ನಾದಾಸಿ ನಾಟಕದಲ್ಲಿ ಶಾಸ್ತ್ರಿಗಳದ್ದು ಖಳನಾಯಕನ ಪಾತ್ರ. ಸ್ವಾರ್ಥ -ನೀಚತನಗಳೇ ಜೀವ ತಳೆದಂತೆ ಇದ್ದ ಬನಬೀರನ ಪಾತ್ರವನ್ನು ಶಾಸ್ತ್ರಿಗಳು ತುಂಬ ಅದ್ಭುತವಾಗಿ ಮಾಡುತ್ತಿದ್ದರು. ಆ ದಿನವೂ ಪಾತ್ರದಲ್ಲಿ ತನ್ಮಯರಾಗಿ ಅಭಿನಯಿಸುತ್ತಿದ್ದರು. ಪನ್ನಾದಾಸಿಯ ಮನೆಯಲ್ಲಿದ್ದ ಬಾಲಕ ಉದಯಸಿಂಹನನ್ನು ಹೊಂಚುಹಾಕಿ ಇರಿದು ಕೊಲ್ಲಲು ಮುಂದಾಗುತ್ತಿದ್ದ ಪ್ರಸಂಗ ಅದು. ಇಡೀ ಥಿಯೇಟರಿನಲ್ಲಿ ಸ್ತಬ್ಧತೆ ನೆಲೆಸಿತ್ತು. ಉಸಿರುಬಿಗಿ ಹಿಡಿದು ಜನ ಕೂತಿದ್ದರು. ಎಲೆ ಅಡಿಕೆ ಹಾಕುತ್ತ ಕೂತಿದ್ದ ಪ್ರೇಕ್ಷಕನೊಬ್ಬ ಇದ್ದಕ್ಕಿದ್ದಂತೆ ಎದ್ದು ನಿಂತು 'ಏಯ್ ಕಳ್ಳ... ಸೂ... ಮಗನೆ! .... ಏನು ನಡೆಸೀದಿ...?' ಎಂದು ಕೂಗುತ್ತ ಕೈಯಲ್ಲಿದ್ದ ಅಡಿಕೆ ಕತ್ತರಿಯನ್ನು ಬನಬೀರನ ಮುಖಕ್ಕೆ ಗುರಿಯಿಟ್ಟು ಎಸೆದಿದ್ದ. ಶಾಸ್ತ್ರಿಗಳ ಹಣೆ ತೂತಾಗಿ ರಕ್ತ ಬಸಿಯಿತು. ಜನರೆಲ್ಲ ಹಾಹಾಕಾರ ಮಾಡಿದರು. ಹೊಡೆದ ವ್ಯಕ್ತಿಗೂ ನಾಚಿಕೆಯಾಗಿತ್ತು. ಅವನು ಶಾಸ್ತ್ರಿಗಳ ಕ್ಷಮಾಪಣೆಯನ್ನು ಕೇಳಿದ. ಸುಮಾರು ಅರ್ಧ ಗಂಟೆಗಳ ಕಾಲ ನಿಂತುಹೋಗಿದ್ದ ನಾಟಕ ಅನಂತರ ಮುಂದುವರಿಯಿತು. ಈ ಅನುಭವ ಶಾಸ್ತ್ರಿಗಳಿಗೆ ತಮ್ಮ ಅಭಿನಯದ ಬಗೆಗೆ ಮತ್ತಷ್ಟು ಭರವಸೆಯನ್ನು ಮೂಡಿಸಿತು.

ಇಷ್ಟಾದರೂ ಮಂಡಳಿಯ ಆರ್ಥಿಕ ಸ್ಥಿತಿಗತಿ ಸುಧಾರಿಸಲಿಲ್ಲ. ಮುಕ್ಕಾಮು ಬದಲಾಯಿಸುತ್ತ ಹರಪನಹಳ್ಳಿಗೆ ಬರುವ ವೇಳೆಗೆ ಕೆಲವು ನಟರು ಕೈ ಕೊಟ್ಟು ಹೋದರು. ನಾಟಕಗಳು ನಿಂತವು. ಸಾವಿರಾರು ರೂಪಾಯಿ ಸಾಲವಾಯಿತು. ಮಳೆ ಬೇರೆ ಜೋರಾಗಿ ಸುರಿಯಲು ಶುರುವಾಯಿತು. ಇನ್ನೇನು ದಾರಿಯೆಂದು ಯೋಚಿಸುತ್ತಿರುವಾಗ ಸದಾಶಿವರಾವ್ ಗರುಡರಿಂದ ಶಾಸ್ತ್ರಿಗಳಿಗೆ ಒಂದು ಪತ್ರ ಬಂತು. ಅವರ ಕಂಪನಿ ಆಗ ಮಂಗಳೂರಿನಲ್ಲಿತ್ತು. ಒಮ್ಮೆಲೇ ದೊಡ್ಡ ಸಂಖ್ಯೆಯ ನಟರು ಬಿಟ್ಟು ಹೋಗಿದ್ದರಿಂದ ಅವರೂ ಸಂಕಷ್ಟದಲ್ಲಿದ್ದರು. ಗುರು ಸಮರ್ಥ ನಾಟಕ ಮಂಡಳಿಯನ್ನು ಮುಚ್ಚಿ ಎಲ್ಲ ನಟರೂ ದತ್ತಾತ್ರೇಯ ನಾಟಕ ಸಂಘಕ್ಕೆ ಯಾಕೆ ಬರಬಾರದೆಂಬ ಸಲಹೆಯನ್ನು ಮುಂದಿಟ್ಟಿದ್ದರು ಅವರು. ಜಗನ್ನಾಥರಾಯರಿಗೆ ಇದು ಇಷ್ಟವಿಲ್ಲದಿದ್ದರೂ ಶಾಸ್ತ್ರಿಗಳ ಮಧ್ಯಸ್ಥಿಕೆಯಿಂದ ವ್ಯವಹಾರ ಸರಳವಾಯಿತು. ಗುರು ಸಮರ್ಥ ನಾಟಕ ಮಂಡಳಿ ಗರುಡರ ಕಂಪನಿಯಲ್ಲಿ ಸೇರಿ ಹೋಯಿತು. ಹುಟ್ಟಿ ಕೇವಲ ಐದೇ ವರ್ಷಕ್ಕೆ ಕಂಪನಿಯ ಬಾಗಿಲು ಮುಚ್ಚಿದ್ದಕ್ಕೆ

ವ್ಯರ್ಥವಾದರೂ ಗರುಡರು ಭರವಸೆಯನ್ನು ನೆಚ್ಚಿ ಶಾಸ್ತ್ರಿಗಳು ಸಂಗಡಿಗರೊಂದಿಗೆ ಮಂಗಳೂರಿಗೆ ಸೇರಿದರು. ಜಗನ್ನಾಥರಾಯರು ಗರುಡರ ಭಾವನಾಗಿದ್ದರೂ ಅವರು ಮಾತ್ರ ಹೊರಗೇ ಉಳಿದರು.

ಆದರೆ ಶಾಸ್ತ್ರಿಗಳ ಅದೃಷ್ಟ ಚೆನ್ನಾಗಿರಲಿಲ್ಲ. ಗರುಡರು ಮೊದಲು ವಿಶ್ವಾಸ ತೋರಿಸಿದ್ದರೇನೋ ನಿಜ. ಶಾಸ್ತ್ರಿಗಳೂ ಅದನ್ನು ನಂಬಿ ಹೊಸ ನಾಟಕಗಳನ್ನು ಅಭ್ಯಾಸ ಮಾಡಿಸಿ ಆಡಲು ಪ್ರಾರಂಭ ಮಾಡಿದರು. ಆದಾಯವೂ ಚೆನ್ನಾಗಿಯೇ ಇತ್ತು. ಮಳೆಗಾಲ ಮುಗಿದರೂ ನಟರ ಸಂಬಳ ಬಟವಾಡೆ ಸುಧಾರಿಸಲಿಲ್ಲ. ಶಾಸ್ತ್ರಿಗಳು ಪ್ರತಿಭಟಿಸಿದರು. ಒಳಗೊಳಗೇ ಶಾಸ್ತ್ರಿಗಳ ವಿರುದ್ಧ ಸಂಚು ನಡೆಯಿತು. ಅವರ ಬೆಂಬಲಕ್ಕೆ ಯಾರೂ ಬರಲಿಲ್ಲ. ಪರಿಣಾಮವೆಂದರೆ ಶಾಸ್ತ್ರಿಗಳೇ ಗರುಡರ ಆಶ್ರಯ ತೊರೆದು ಹೊರಬರಬೇಕಾಯಿತು.

ಅನಂತರದ ದಿನಗಳಲ್ಲಿ ಶಾಸ್ತ್ರಿಗಳು ಹೆಜ್ಜೆಹೆಜ್ಜೆಗೂ ಬಿಕ್ಕಟ್ಟು - ಸಂಕಟಗಳನ್ನು ಎದುರಿಸಬೇಕಾಯಿತು. ಲಕ್ಕುಂಡಿ ಶಾಮಣ್ಣ ಎಂಬವರು ಗುರು ಸಮರ್ಥ ನಾಟಕ ಮಂಡಳಿಯ ಸಾಮಾನುಗಳನ್ನು ಸಾಲಕ್ಕೆ ಒತ್ತೆಯಿರಿಸಿಕೊಂಡಿದ್ದರು. ಅವರೇ ಒಂದು ನಾಟಕ ಕಂಪನಿ ಕಟ್ಟುವ ಯೋಚನೆಯಲ್ಲಿದ್ದಾಗ ಶಾಸ್ತ್ರಿಗಳು ಅಲ್ಲಿ ಸೇರಿಕೊಂಡು ಸಹಕಾರ ನೀಡಿದರು. ಆದರೆ ಯಾವುದೂ ಫಲಕಾರಿಯಾಗಲಿಲ್ಲ. ಅವರ ಹತ್ತಿರದ ಸ್ನೇಹಿತರೇ ಅವರ ವಿರುದ್ಧ ತಿರುಗಿ ಬಿದ್ದರು. ಶಾಸ್ತ್ರಿಗಳು ಹಾಕಿದ್ದ ಬಂಡವಾಳವೂ ಹೋಯಿತು. ಲಕ್ಕುಂಡಿ ಶಾಮಣ್ಣ ಶಾಸ್ತ್ರಿಗಳ ಪೆಟ್ಟಿಗೆಯನ್ನೂ ಕಸಿದುಕೊಂಡು ಬಾಗಿಲ ಕಡೆ ಬೆರಳು ತೋರಿಸಿದಾಗ ಶಾಸ್ತ್ರಿಗಳ ಸ್ಥೈರ್ಯದ ಬುಡವೇ ಕುಸಿದು ಹೋಯಿತು.

ಅದು 1936ನೆಯ ಇಸವಿ. ಪಿತೂರಿಗೆ ಸಿಕ್ಕು ಹೊರ ತಳ್ಳಿಸಿಕೊಂಡ ಶಾಸ್ತ್ರಿಗಳು ಅವಮಾನಿತರಾಗಿದ್ದರು. ಅವರದೆಂಬ ಯಾವ ವಸ್ತುವಾಗಲಿ, ಕಿಲುಬುಕಾಸಾಗಲಿ ಇರಲಿಲ್ಲ. ಬದುಕಿನ ಆ ಕೆಟ್ಟ ಗಳಿಗೆಯಲ್ಲಿ ಆಸೆಗಳೆಲ್ಲ ಕಮರಿಹೋಗಿದ್ದವು. ಇಷ್ಟು ದಿನ ಹುಲಿಯಾಗಿ ಮೆರೆದವರು ಇಂದು ಅನಾಥರಾಗಿದ್ದರು. ನಂಬಿದವರೆಲ್ಲ ಕೈಕೊಟ್ಟ ಕ್ಷಣದ ಮಾನಸಿಕ ಒತ್ತಡಕ್ಕೆ ಒಳಗಾಗಿ, ಗಟ್ಟಿ ಗುಂಡಿಗೆಯ ಶಾಸ್ತ್ರಿಗಳು ಆತ್ಮಹತ್ಯೆಯ ಯೋಚನೆ ಮಾಡಿದ್ದರು.

ಅಂದು ಯುಗಾದಿ. ಹೊಸ ವರ್ಷದ ಆಚರಣೆಯ ಸಂಭ್ರಮ ಸುತ್ತೆಲ್ಲ ಹರಡಿರುವಾಗ ಶಾಸ್ತ್ರಿಗಳ ಬಾಳಿಗೆ ಕತ್ತಲೆ ಕವಿದಿತ್ತು. ಆಸೆಗಳೇ ಸತ್ತ ಮೇಲೆ ಉಸಿರಿಟ್ಟುಕೊಂಡು ಬದುಕಿ ಫಲವೇನು? ದುಃಖ ತಡೆಯಲಾರದೆ ಬಿಕ್ಕಿ ಬಿಕ್ಕಿ ಅಳುತ್ತ ನದಿಯ ದಂಡೆಗುಂಟ ಸಾಗಿದ್ದರು. ನಿರ್ಧಾರ ಕ್ಷಣಕ್ಷಣಕ್ಕೂ ಬಲಿಯುತ್ತಿತ್ತು. ನದಿ ಅವರನ್ನು ಕೈ ಬೀಸಿ ಕರೆಯುತ್ತಿತ್ತು. ಅಷ್ಟರಲ್ಲಿ ಅಜಾನುಬಾಹು ವ್ಯಕ್ತಿಯೊಬ್ಬ ಎದುರುಬಂದು ನಿಂತಂತಾಯಿತು. ತಲೆಯೆತ್ತಿ ನೋಡಿದರೆ ಪೈಲ್ವಾನ್ ಹನುಮಪ್ಪ! ಕೊಲ್ಲಲು ಹೊರಟಿದ್ದ ವಿಧಿ ಕಾಯಲು ಮನಸ್ಸು ಮಾಡಿತ್ತು.

ಆಶ್ಚರ್ಯ, ಅನುಮಾನಗಳಿಂದ ಪೈಲ್ವಾನ್ ಹನುಮ ಹೇಳಿದ - 'ಇದೇನು ಸ್ವಾಮಿಯೋರು ಇಲ್ಲಿ!...ಕಣ್ಣಾಗ ನೀರು ಯಾಕೆ? ಏನಾತು ಹೇಳಿ...ಯಾವನಾರಾ ಏನಾದ್ರೂ ಕೈ ಮಾಡಿದನೇನು? ಯಾಂವಾ ಅಂವಾ ಮಗಾ!.. ಹೇಳಿ?' ಶಾಸ್ತ್ರಿಗಳಿಗೆ ಏನೂ ಹೇಳಲು ತೋಚಲಿಲ್ಲ. ಎಲ್ಲಿಂದ ಬಂದ ಈ ಆಪದ್ಬಾಂಧವ? ಯಾರು ಕಳಿಸಿದ್ದು ಇವನನ್ನು? ಇವನಿಗೆ ಎಲ್ಲ ಹೇಳಲೇ? ನನ್ನ ಬದುಕು ನನ್ನ ಜವಾಬ್ದಾರಿ. ಇವನ ಮೇಲೆ ಯಾಕೆ ಭಾರ ಹಾಕಬೇಕು? - ಎಂದು ಒಂದು ಕ್ಷಣ ಮನಸ್ಸು ಹಿಂಜರಿಯಿತು. ಮತ್ತೆ ಮತ್ತೆ ಅವನು ಒತ್ತಾಯಿಸಿದಾಗ ತಮ್ಮ ಸ್ಥಿತಿಯನ್ನು ಹೇಳಲೇಬೇಕಾಯಿತು. ಹನುಮ ಶಾಸ್ತ್ರಿಗಳನ್ನು ಎಳೆದುಕೊಂಡು ಹೋಗುತ್ತ ಹೇಳಿದ - 'ಏ.... ಬುಡಿ ಸ್ವಾಮಿಯೋರಾ. ಇಷ್ಟಕ್ಕೆಲ್ಲ ಹೆದರೋದಾ! ನಾವೆಲ್ಲಾ ಇಲ್ಲವಾ? ಬನ್ನಿ ನಮ್ಮೂರಿಗೆ ಹೋಗಾನಾ. 'ನಿಮ್ಮನ್ನು ಸಾಕಾ ಜವಾಬುದಾರಿ ನಮ್ದು, ಕಂಪನಿ ದಾವಣಗೆರೆಯಲ್ಲಿದ್ದಾಗ ಶಾಸ್ತ್ರಿಗಳು 'ಸೋಹಂ' ನಾಟಕದಲ್ಲಿ 'ಬಹೂರಂಗೀ ಬಾಜೀರಾಯ'ನ ಪಾತ್ರ ಮಾಡುತ್ತಿದ್ದರು. ಆ ವರೆಗೆ ಗಂಭೀರವಾದ ಪಾತ್ರಗಳನ್ನು ಮಾಡುತ್ತಿದ್ದವರು, ತುಂಬ ಭಿನ್ನವಾದ ವರ್ಣಮಯ ವ್ಯಕ್ತಿತ್ವದ ಬಾಜೀರಾಯನ ಪಾತ್ರವನ್ನು ಅಷ್ಟೇ ಅದ್ಭುತವಾಗಿ ಮಾಡುತ್ತಿದ್ದರು. ಸುತ್ತುಮುತ್ತಲಿನ ಹಳ್ಳಿಯ ಜನರಿಗೆ ಶಾಸ್ತ್ರಿಗಳ ಈ ಪಾತ್ರ ಮೋಡಿಯನ್ನೇ ಮಾಡಿತ್ತು. ಮಾರನೂರಿನ ಪೈಲ್ವಾನ್ ಹನುಮನೂ 'ಬಹುರಂಗೀ ಬಾಜೀರಾಯನ ಪಾತ್ರವನ್ನು ತುಂಬ ಮೆಚ್ಚಿಕೊಂಡಿದ್ದ. ಆಗಲೇ ಅವನ ಪರಿಚಯವೂ ಆಗಿ, ಸ್ನೇಹವಾಗಿ ವರ್ಧಿಸಿತ್ತು. ಮೇಲುನೋಟಕ್ಕೆ ಒರಟು ಮನುಷ್ಯನಾಗಿ ತೋರುತ್ತಿದ್ದ ಪೈಲ್ವಾನ್ ಹನುಮ ಶಾಸ್ತ್ರಿಗಳ ಬಗ್ಗೆ ಅಭಿಮಾನ-ಪ್ರೀತಿಯನ್ನು ಹೊಂದಿದ್ದ.

ಹನುಮನ ಜೊತೆ 'ಮಾರನೂರು' ಸೇರಿದಾಗ ಜನರೇನೋ ವಿಶ್ವಾಸದಿಂದ ಸ್ವಾಗತಿಸಿದರು. ಅವರ ನೆನಪಿನಲ್ಲಿ 'ಬಹುರಂಗೀ ಬಾಜೀರಾಯ' ನೆಲೆಯೂರಿದ್ದ. ಊರಿನ ನೂರಾರು ಮನೆಯವರೆಲ್ಲ ಸೇರಿ ಶಾಸ್ತ್ರಿಗಳಿಗೆ ಒಂದಿಷ್ಟು ವಂತಿಗೆಯನ್ನು ಸಂಗ್ರಹಿಸಿಕೊಟ್ಟರು. ಮುದುಕಿಯೊಬ್ಬಳು 'ನಮ್ಮನೇಲೇ ಇದ್ಬುಡಿ....ಜಾಗಾ ನಾ ಕೊಡ್ತೀನಿ' ಎಂದು ಕರೆದಳು. ಯಾರು ಯಾರೋ ಧವಸ-ಧಾನ್ಯ ತಂದುಕೊಟ್ಟರು. ಹೊಟ್ಟೆಪಾಡಿನ ಸಮಸ್ಯೆಯೇನೋ ದೂರವಾಯಿತು.

ಆದರೆ ಸದಾ ಚಟುವಟಿಕೆಯ ಬುಗ್ಗೆಯಾಗಿದ್ದ ಶಾಸ್ತ್ರಿಗಳು ಈಗ ರೆಕ್ಕೆ ಕಳೆದುಕೊಂಡ ಹಕ್ಕಿಯಂತಾಗಿದ್ದರು. ತಾವು ದುಡಿಯದೇ ದಾನವಾಗಿ ಬಂದ ಅನ್ನ ತಿನ್ನುವುದು ಕಹಿಯೆನ್ನಿಸತೊಡಗಿತು. ರಂಗಭೂಮಿಯೇ ಉಸಿರಾಗಿದ್ದ ಅವರಿಗೆ ಮೂಲೆ ಸೇರಿ ಮಲಗುವುದು ದುಸ್ಸಹವಾಯಿತು. ತಾವೇ ಒಂದು ನಾಟಕ ಕಂಪನಿ ಕಟ್ಟಿ, ತಾವು ಬರೆದ ನಾಟಕಗಳನ್ನೆಲ್ಲ ಆಡಿಸಿ ಭಲೇ ಅನಿಸಿಕೊಳ್ಳಬೇಕೆಂಬ ಆಸೆ ಇನ್ನೂ ಜೀವಂತವಾಗಿತ್ತು. ಆದರೆ ಹಣ ಇಲ್ಲ, ನಟರಿಲ್ಲ, ನಾಟಕಗಳಿಲ್ಲ. ಇಚ್ಛಾಶಕ್ತಿಗೆ ಬಲ ನೀಡಲು ಇತರರ ಬೆಂಬಲವಿರಲಿಲ್ಲ. ಮಾರನೂರಿನಲ್ಲಿ

ಯುವಕರೇನೋ ಇದ್ದರು. ಆದರೆ ನಾಟಕವಾಡಲು ಅವರನ್ನು ಬಳಸಿಕೊಳ್ಳಕೂಡದು ಎಂದು ಊರಿನವರು ಮೊದಲೇ ಷರತ್ತು ಹಾಕಿದ್ದರು.

ಸಮಯ ಕಳೆಯಲು ಶಾಸ್ತ್ರಿಗಳಿಗಿದ್ದ ಏಕೈಕ ಕೆಲಸವೆಂದರೆ, ಕಂಠಪಾಠವಾಗಿದ್ದ ಅನೇಕ ನಾಟಕಗಳನ್ನು ನೋಟ್‌ಬುಕ್‌ನಲ್ಲಿ ಬರೆದಿಡುವುದು. ಸಂದರ್ಭ ಸಿಕ್ಕಾಗ ನಾಟಕ ಕಲಿಸಲು ಪಠ್ಯವು ಸಿದ್ಧವಿರಬೇಕಲ್ಲ. ನಾಲ್ಕು ತಿಂಗಳ ಕಾಲ ತಪಸ್ಸಿಗೆ ಕೂತವರ ಹಾಗೆ ಕೂತು ಪಟ್ಟಾಗಿ ನಾಟಕಗಳನ್ನು ಬರೆದರು. ಅದೇ ಹೊತ್ತಿಗೆ ಯಾರೋ ಹೇಳಿದರಂತೆ. ರಾಣಿಬೆನ್ನೂರಿನಲ್ಲಿ ಸಂಗೀತವನ್ನು ಕಲಿತ ಕೆಲವು ಯುವಕರಿದ್ದಾರೆ ಎಂದು. ಶಾಸ್ತ್ರಿಗಳ ತಲೆ ಚುರುಕಾಯಿತು. ಹೋಗಿ ಯಾಕೆ ನೋಡಬಾರದು?ಚೆನ್ನಾಗಿ ಸಂಗೀತ ಹಾಡಬಲ್ಲವರಿದ್ದರೆ ನಾಟಕವಾಡಲು ಅನುಕೂಲ ಅನ್ನಿಸಿತು. ರಾಣಿಬೆನ್ನೂರು ಬಳಿಯ ಲಿಂಗದಹಳ್ಳಿಗೆ ಹೋಗಿ ವಿಚಾರಿಸಿದಾಗ ಕೆಲವು ಯುವಕರಿಗೆ ನಾಟಕದಲ್ಲಿ ಪಾತ್ರ ವಹಿಸಲು ಆಸಕ್ತಿಯಿರುವುದೂ ಗೊತ್ತಾಯಿತು. ಆದರೆ ಅವರಿಗೆ ಸಂಗೀತ ಬಿಟ್ಟರೆ ಏನೂ ಗೊತ್ತಿಲ್ಲ. ಓದು -ಬರೆಹ ಕೂಡ ಇಲ್ಲ. ತರಬೇತುಗೊಳಿಸುವುದು ಸುಲಭದ ಮಾತಲ್ಲ. ನಾಟಕ ಅಂದಮೇಲೆ ಪರದೆ-ಸೀನರಿ- ಬೆಳಕು - ಧ್ವನಿವರ್ಧಕ ಇವಕ್ಕೆಲ್ಲ ಹಣ ಬೇಡವೇ? ಎಲ್ಲಿಂದ ತರುವುದು ಬಂಡವಲು? ನಟರಿಗೆ ಸಂಬಳ ಕೊಡಲು ಹಣವೆಲ್ಲಿ?

ಶಾಸ್ತ್ರಿಗಳು ಕಂಗೆಡಲಿಲ್ಲ. ಎಲ್ಲ ಯುವಕರನ್ನೂ ಸೇರಿಸಿ ನಾಟಕ ಕಂಪೆನಿ ಕಟ್ಟಲು ಮೊದಲು ಎದುರಿಸಬೇಕಾದ ಸಮಸ್ಯೆಗಳನ್ನೆಲ್ಲ ವಿವರಿಸಿದರು. 'ನಾಟಕ ಮಂಡಳಿಯು ತನ್ನ ಕಾಲಮೇಲೆ ತಾನು ನಿಲ್ಲುವವರೆಗೆ ಯಾರೂ ಸಂಬಳ ಕೇಳಬಾರದು. 3 ವರ್ಷಗಳ ವರೆಗೆ ಯಾರೂ ನಡುವೆ ಕಂಪನಿ ಬಿಡುವಂತಿಲ್ಲ. ಈ ಷರತ್ತಿನ ಪತ್ರಕ್ಕೆ ಎಲ್ಲರೂ ರುಜು ಮಾಡಬೇಕು' - ಈ ಸಲಹೆಗೆ ಎಲ್ಲರೂ ಒಪ್ಪಿದರು. ಸರಿ, ಶಾಸ್ತ್ರಿಗಳು ಮಾರನೂರಿನ ಅಜ್ಞಾತವಾಸವನ್ನು ಮುಗಿಸಿ ಲಿಂಗದಹಳ್ಳಿಗೆ ಬಂದರು. ನಾಟಕಗಳನ್ನಂತೂ ಶಾಸ್ತ್ರಿಗಳು ಬರೆದಿಟ್ಟಿದ್ದರು. ತಾಲೀಮು ಪ್ರಾರಂಭವಾಯಿತು. ಎಲ್ಲರೂ ಕೂಲಿನಾಲಿ ಮಾಡುತ್ತಿದ್ದ ಜನ. ಹಗಲೆಲ್ಲ ದುಡಿದು ದಣಿದು ಬರುತ್ತಿದ್ದರು. ನಿದ್ದೆಗೆಟ್ಟು ರಿಹರ್ಸಲ್ ಮಾಡಬೇಕಾಗುತ್ತಿತ್ತು. ಒಮ್ಮೊಮ್ಮೆ ತಾಳ್ಮೆ ತಪ್ಪಿಹೋಗುವಂತಿದ್ದರೂ, ಶಾಸ್ತ್ರಿಗಳು ಸಹಿಸಿಕೊಂಡರು. ಒಂಬತ್ತು ತಿಂಗಳವರೆಗೆ 'ವರದಕ್ಷಿಣೆ' ನಾಟಕದ ತಯಾರಿ ನಡೆಯಿತು. ಕಾಸಿಲ್ಲದೆ ಬರಿಗೈಯಲ್ಲಿ, ಪರಿಚಿತರಿಲ್ಲದ ಊರಲ್ಲಿ ಶಾಸ್ತ್ರಿಗಳು ಧೈರ್ಯ ಮಾಡಿ ಪ್ರಯೋಗಕ್ಕೆ ಇಳಿದಿದ್ದರು. ಅನುಭವಿಸಿದ ಕಷ್ಟ, ನೋವು ಅಷ್ಟಿಷ್ಟಲ್ಲ. ಆದರೆ ಹಟ ಮಾತ್ರ ಬಿಡಲಿಲ್ಲ.

ಮಾರನೂರಿಗೆ 18 ಮೈಲಿ ದೂರದ ಬ್ಯಾಡಗಿಯಲ್ಲಿ ತುಕಾರಾಮಪ್ಪನವರ ಶ್ರೀ ಶಾರದಾ ಸಂಗೀತ ನಾಟಕ ಮಂಡಳಿ ಬೀಡುಬಿಟ್ಟಿತ್ತು. ತುಕಾರಾಮಪ್ಪನವರು ಶಾಸ್ತ್ರಿಗಳಿಗೇ ಪರಿಚಿತರೇ ಆಗಿದ್ದರು. ಅವರ ನೆರವು ಪಡೆಯಲು ನಿರ್ಧರಿಸಿ ಶಾಸ್ತ್ರಿಗಳು ಕಾಲ್ನಡಿಗೆಯಲ್ಲೇ ಬ್ಯಾಡಗಿಗೆ

ಹೋದರು. ಒಂಬತ್ತು ತಿಂಗಳಿಂದ ತಪಸ್ಸಿಗೆ ಕೂತು ಜಡೆ-ದಾಡಿ ಬೆಳೆಸಿಕೊಂಡ 'ಋಷಿಯಾಗಿದ್ದ' ಶಾಸ್ತ್ರಿಗಳನ್ನು ಯಾರೂ ಗುರುತಿಸುವಂತಿರಲಿಲ್ಲ. ತುಕಾರಾಮಪ್ಪನವರನ್ನು ಕಾಣಲು ಹೋಗುತ್ತಿರುವಾಗಲೇ ಅಕಸ್ಮಾತ್ ದಾರಿಯಲ್ಲಿ ನಾಯಕ ಫೌಜದಾರರು ಭೆಟ್ಟಿಯಾದರು. ಕಾರವಾರದ ನಾಯಕರು ಶಾಸ್ತ್ರಿಗಳಿಗೆ ತುಂಬ ಬೇಕಾದವರು. ಒಂದೇ ಜಿಲ್ಲೆಯವರೆಂಬ ಅಭಿಮಾನ. ನಾಯಕ ಫೌಜದಾರರು ಶಾಸ್ತ್ರಿಗಳನ್ನು ತಮ್ಮ ಮನೆಗೇ ಕರೆದೊಯ್ದು, ತುಕಾರಾಮಪ್ಪನವರನ್ನು ಕರೆಯಿಸಿ ಒಂದು ದಿನ ಥಿಯೇಟರ್ ಬಿಟ್ಟುಕೊಡಲು ಒಪ್ಪಿಸಿದರು. ಪರದೆ ಸೀನರಿಗಳು ಸಿಕ್ಕರೂ ಬಣ್ಣ, ಚೌರಿ, ಸೀರೆ, ರುಮಾಲು, ಕೋಟು ಎಲ್ಲ ಬೇಡವೇ? ನಾಟಕವೆಂದರೆ ಸುಮ್ಮನೆ ಆಗುತ್ತದೆಯೇ? ನಾಯಕ ಫೌಜದಾರರೇ ಬ್ಯಾಡಗಿಯ ವರ್ತಕರನ್ನೆಲ್ಲ ಕರೆಯಿಸಿ ದೇಣಿಗೆ ವಸೂಲಿ ಮಾಡಿಸಿಕೊಟ್ಟರು. ಉಳಿದ ಸಾಮಗ್ರಿಗಳೂ - ಕೋಟು-ರುಮಾಲು, ಸೀರೆ, ಶಲ್ಯ ಮುಂತಾದವೆಲ್ಲ ಎಲ್ಲೆಲ್ಲಿಂದಲೋ ಒದಗಿ ಬಂದವು. ಫೌಜದಾರರ ಕೃಪೆಯಿಂದ ನಾಟಕವಾಡಲು ಅನುಮತಿಯೂ ದೊರೆಯಿತು. 'ಶ್ರೀ ಜಯ ಕರ್ನಾಟಕ ನಾಟಕ ಕಂಪನಿ ಸಿದ್ಧಾಪುರ' ಎಂಬ ಬೋರ್ಡ್ ಬರೆಯಿಸಿಯೇ ಬಿಟ್ಟರು. ಅಂದು 1935ನೇ ಇಸವಿ ಡಿಸೆಂಬರ್ 10ನೇ ತಾರೀಕು.

ರಂಗಭೂಮಿಯ ಸಾಮಾನ್ಯ ಪರಿಚಯವೂ ಇಲ್ಲದ ಹೊಸಬರನ್ನು ಕಟ್ಟಿಕೊಂಡು, ಎಲ್ಲವನ್ನೂ ಹೇಳಿಕೊಟ್ಟು ನಾಟಕವನ್ನು ಆಡಬೇಕಾದ ಸವಾಲು ಶಾಸ್ತ್ರಿಗಳ ಎದುರಿಗೆ ಇತ್ತು. ಚಿಕ್ಕಪುಟ್ಟ ಸಂಗತಿಗಳಿಗೂ ಅವರೆಲ್ಲ ಶಾಸ್ತ್ರಿಗಳನ್ನೇ ಆಶ್ರಯಿಸಬೇಕಾಗಿತ್ತು. ಉಡುಪು ಧರಿಸುವುದಾಗಲೀ, ಮೇಕಪ್ ಮಾಡಿಕೊಳ್ಳುವುದಾಗಲೀ ದೂರ ಉಳಿಯಿತು. ಶಾಸ್ತ್ರಿಗಳೇ ಕಷ್ಟಪಟ್ಟು ಎಲ್ಲರಿಗೂ ಬಣ್ಣ ಹಚ್ಚಿದರು. ಒಂದು ರೀತಿಯಲ್ಲಿ ಏಕವ್ಯಕ್ತಿ ಪ್ರದರ್ಶನ. ಹರ ಸಾಹಸ ಮಾಡಿ ಎಲ್ಲರನ್ನೂ ಸಿದ್ಧಗೊಳಿಸಿ ತಾವೂ ಮೇಕಪ್ ಮುಗಿಸಿ ಪ್ರಾರ್ಥನಾ ಪದ ಹಾಡಲು ಪ್ರಾರಂಭಿಸಿದಾಗ ರಾತ್ರಿ 12 ಗಂಟೆ! ಜನ ತಾಳ್ಮೆಯಿಂದ ಕಾದು ಕುಳಿತಿದ್ದರು. ಎಲ್ಲರನ್ನೂ ನಿಭಾಯಿಸಿಕೊಳ್ಳುತ್ತ ಹೇಗೋ ನಾಟಕ ಮುಗಿಸಿದಾಗ ಬೆಳಗಿನ ಆರು ಗಂಟೆ. ಹಲವು ದಿನಗಳ ಶ್ರಮ, ಮಾನಸಿಕ ಒತ್ತಡ, ನಿದ್ರಾಹೀನತೆ, ನಿಶ್ಶಕ್ತಿಗಳಿಂದ ಬಳಲುತ್ತಿದ್ದ ಶಾಸ್ತ್ರಿಗಳು ಮಂಗಳಗೀತೆ ಹಾಡಿ ಅಂಕದ ಪರದೆ ಬಿಡುತ್ತಿದ್ದಂತೆ ಬವಳಿ ಬಂದು ಬಿದ್ದರು.

ನಾಯಕ ಫೌಜದಾರರು ಶಾಸ್ತ್ರಿಗಳನ್ನು ಅಭಿನಂದಿಸಲೆಂದು ಒಳಗೆ ಬಂದಾಗ ಈ ಸ್ಥಿತಿಯನ್ನು ಕಂಡು ಗಾಬರಿಯಾದರು. ಮುಖದ ಮೇಲೆ ನೀರು ಚಿಮುಕಿಸಿ ಗಾಳಿ ಹಾಕಿದಾಗ ಶಾಸ್ತ್ರಿಗಳು ಎಚ್ಚರಗೊಂಡರು. ಶಾಸ್ತ್ರಿಗಳ ಕೌಟುಂಬಿಕ ಹಿನ್ನೆಲೆಯನ್ನು ಚೆನ್ನಾಗಿ ತಿಳಿದಿದ್ದ ನಾಯಕ ಫೌಜದಾರರು ಶಾಸ್ತ್ರಿಗಳಿಗೆ ಬುದ್ಧಿವಾದ ಹೇಳಿದರು - 'ಶಾಸ್ತ್ರಿಗಳೇ, ನಿಮ್ಮ ಹಟಮಾರಿತನ ಬಿಟ್ಟುಬಿಡಿ. ಈ ನಾಟಕ ಕಂಪನಿ ಕಟ್ಟುವ ವ್ಯರ್ಥ ಸಾಹಸಕ್ಕೆ ಹೋಗಬೇಡಿ. ಆಯುಷ್ಯ, ಆರೋಗ್ಯ ದಂಡವಾಗುತ್ತದೆ. ಒಳ್ಳೆಯ ಕೃಷಿಕರಾಗಿರುವ ನಿಮಗೆ ಈ ವೃತ್ತಿ ಹೇಳಿಸಿದ್ದಲ್ಲ. ಊರಿಗೆ ಹೋಗಿ ಹಾಯಾಗಿ ಬದುಕಿ.

ಯಾಕೆ ಸುಮ್ಮನೇ ಈ ಕಷ್ಟಗಳನ್ನೆಲ್ಲ ಮೈಮೇಲೆ ಎಳೆದುಕೊಳ್ಳುತ್ತೀರಿ? ನಿಮಗೆ ಊರಿನಲ್ಲಿ ಏನು ಕಡಿಮೆ? ನಿಮ್ಮ ಮನೆಯಲ್ಲಿ ಊಟ ಮಾಡಿದ ಋಣ ನನ್ನ ಮೇಲಿದೆ. ಅದಕ್ಕೇ ಈ ಮಾತು ಹೇಳಿದ್ದೇನೆ.'

ಶಾಸ್ತ್ರಿಗಳಿಗೆ ದುಃಖದ ಕಟ್ಟೆಯೇ ಒಡೆಯಿತು. ಅವರ ಕೈ ಹಿಡಿದುಕೊಂಡು ಹೇಳಿದರು - 'ನೋಡಿ ನಾಯಕರೆ, ನೀವು ಹೇಳುವುದು ತಪ್ಪೇನೂ ಅಲ್ಲ. ನಾನು ಸುಖವಾಗಿರಲಿ ಎಂದು ಹೇಳುತ್ತಿದ್ದೀರಿ. ಆದರೆ ರಂಗಭೂಮಿಯನ್ನು ಬಿಟ್ಟು ನಾನು ಬದುಕಲಾರೆ. ನಾಟಕ ಕಂಪನಿಗೆ ಕೈ ಹಾಕುವಾಗಲೇ ನನ್ನ ಸುಖಕ್ಕೆ ತಿಲಾಂಜಲಿ ಕೊಟ್ಟು ಕೊಂಡಿದ್ದೇನೆ. ಅದು ಸುಲಭದ ಕೆಲಸ ಅಲ್ಲ ಎಂದು ನನಗೆ ಗೊತ್ತಿದೆ. ಆದರೆ ನಾನು ಜಿಗುಟು ಮನುಷ್ಯ. ಇಟ್ಟ ಹೆಜ್ಜೆಯಿಂದ ಹಿಂದೆ ಸರಿಯಲಾರೆ. ನನಗೂ ಒಂದು ಮಹತ್ವಾಕಾಂಕ್ಷೆಯಿದೆ. ನನ್ನದೇ ಒಂದು ನಾಟಕ ಕಂಪನಿ ಕಟ್ಟಿ, ಜಯಭೇರಿ ಹೊಡೆಯಬೇಕು. ನನ್ನನ್ನು ಅವಮಾನಿಸಿದವರಿಗೂ ನನ್ನ ಕಂಪನಿಯಲ್ಲಿ ಆಶ್ರಯ ಕೊಡಬೇಕು. ನನ್ನನ್ನು ತುಚ್ಛವಾಗಿ ನಡೆಸಿಕೊಂಡವರ ಎದುರೇ ಗೌರವದ ಸ್ಥಾನ ಪಡೆದು ಮೆರೆಯಬೇಕು ಎಂದೆಲ್ಲ ಆಸೆ ಇದೆ. ಅದೆಲ್ಲ ಸಾಧ್ಯವಾಗುವುದು ಬಿಡುವುದು ವಿಧಿಯ ಇಚ್ಛೆ. ಆದರೆ ನಾನು ಹೀಗೆಲ್ಲ ಹೇಳಿದೆ ಎಂದು ಬೇಜಾರುಪಟ್ಟುಕೊಳ್ಳಬೇಡಿ. ನಿಮ್ಮ ಉಪಕಾರಕ್ಕೆ ನಾನು ಋಣಿ.'

ಶಾಸ್ತ್ರಿಗಳ ಖಂಡತುಂಡ ಮಾತಿಗೆ ನಾಯಕರು ಮತ್ತೇನೂ ಹೇಳಲಾರದೆ ಸುಮ್ಮನಾದರು.

## ಜಯ ಕರ್ನಾಟಕ ನಾಟಕ ಸಂಘ ಸಿದ್ಧಾಪುರ

ಕಂಪನಿಯ ಹೆಸರು ಬರೆಯಿಸಿ ತೂಗು ಹಾಕಿದ್ದಾಯಿತು. ಇದರಿಂದ ಶಾಸ್ತ್ರಿಗಳ ಜವಾಬ್ದಾರಿ ಇನ್ನಷ್ಟು ಹೆಚ್ಚಾಯಿತು. ಬೇರೆ ಕಂಪನಿಗಳಲ್ಲಿ ನಟರಾಗಿ, ಪ್ರಾಕ್ಟೀಸ್ ಮ್ಯಾನೇಜರ್ ಆಗಿ ದುಡಿದಿದ್ದ ಅವರಿಗೆ ಸಾಮಾನ್ಯ ಆಡಳಿತಾತ್ಮಕ ಅನುಭವವಿತ್ತು. ಈಗ ಒಂದು ಹೊಸ ಕಂಪನಿಯ ಯಜಮಾನರಾಗಿ ಅದನ್ನು ಕಟ್ಟುವ ಹೊಣೆ ಹೆಗಲಿಗೇರಿತು. ಸಲಕರಣೆ ಇಲ್ಲ, ನಟರು ಹೊಸಬರು, ಆಡಲು ಥಿಯೇಟರ್ ಇಲ್ಲ. ಕೈಯಲ್ಲಿ ಹಣವಿಲ್ಲ. ಧೈರ್ಯಗೆಡದೆ ಸವಣೂರಿಗೆ ಹೋಗಿ ಅಲ್ಲಿ ಮುಕ್ಕಾಮು ಮಾಡಿದ್ದ ಕೊಟ್ರಬಸಪ್ಪನವರನ್ನು ಕಂಡು ಎರಡು ದಿನ ನಾಟಕವಾಡಲು ಥಿಯೇಟರನ್ನು ಬಾಡಿಗೆಗೆ ಪಡೆದರು. ರಂಗಭೂಮಿಯಲ್ಲಿ ಹೆಸರು ಮಾಡಿದ ಶಾಸ್ತ್ರಿಗಳ ಬಗೆಗೆ ಕೊಟ್ರಬಸಪ್ಪನವರಿಗೆ ತುಂಬ ಗೌರವವಿತ್ತು. ಅವರ ಪೂರ್ಣ ಸಹಕಾರ ದೊರೆತದ್ದರಿಂದ, ಎರಡು ದಿನಗಳ ನಾಟಕದಿಂದ 1200 ರೂಪಾಯಿ ಸಂಗ್ರಹವಾಯಿತು. ಅದೇ ಮೂಲ ಬಂಡವಾಳ.

ಎರಡು ನಾಟಕಗಳು ತುಸು ಯಶಸ್ಸನ್ನು ಕಂಡಿದ್ದರಿಂದ ನಟರೆಲ್ಲ ತಮ್ಮನ್ನು ದೊಡ್ಡ ನಟರೆಂದೇ ಭಾವಿಸತೊಡಗಿದ್ದರು. ಅವರೆಲ್ಲ ಸೇರಿ 'ನಮ್ಮದೇ ಥಿಯೇಟರು ಪರದೆ ಸಾಮಗ್ರಿಗಳೆಲ್ಲ

ಆದರೆ ಮಾತ್ರ ನಾವು ನಾಟಕ ಆಡುವವರು. ಬೇರೆಯವರ ಥೇಟರಿನಲ್ಲಿ ನಾವು ನಾಟಕ ಆಡೋದಿಲ್ಲ' - ಎಂದು ಹೇಳಿ ಬಿಟ್ಟರು. ಏನು ಮಾಡುವುದು? ಯಾರೋ ಹೇಳಿದರು - ಚಿತ್ರದುರ್ಗದಲ್ಲಿ ಗುರುಸಮರ್ಥ ನಾಟಕ ಕಂಪನಿಯ ಸಾಮಗ್ರಿಗಳೆಲ್ಲ ಒತ್ತೆಯಲ್ಲಿವೆ. ಅದನ್ನು ಅವರು ಮಾರಾಟ ಮಾಡಲು ತಯಾರಿದ್ದಾರೆ' ಎಂದು. ಶಾಸ್ತ್ರಿಗಳು ಹುರುಪಿನಿಂದ ವಿಚಾರಿಸಿದರೆ ಮೂರು ಸಾವಿರ ರೂಪಾಯಿ ಕೊಟ್ಟರೆ ಮಾರುವುದಾಗಿ ಹೇಳಿದಾಗ ನಿರಾಶರಾದರು. ಈ ಮಾತುಕತೆಗಾಗಿ ತಿರುಗಾಟ ನಡೆಸಿದ್ದಾಗ ನಟರೆಲ್ಲ ಊರಿನ ದಾರಿ ಹಿಡಿದಿದ್ದರು. ಏನೋ ಆಸೆಯನ್ನು ಹೊತ್ತು ಅಲೆದಾಡಿ, ಹಂಸಬಾವಿಯ ಹವ್ಯಾಸಿ ಸಂಘವೊಂದರ ಪರದೆ ಸಾಮಗ್ರಿಗಳನ್ನು ಊರಿನ ಮುಖಂಡರಾದ ನಿಲವಗಿ ಈರಪ್ಪನವರ ನೆರವಿನಿಂದ ಕ್ರಯಕ್ಕೆ ಪಡೆದುಕೊಂಡರು. ಆದರೆ ಹಣ ಕೊಡುವುದು? ನಾಟಕಗಳನ್ನಾಡಿ ಹಣ ಬಂದ ನಂತರ ಎಂದು ಮಾತಾಯಿತು. ಒಂದು ಟೆಂಟ್ ಥಿಯೇಟರನ್ನೂ ಖರೀದಿಸಿ, ಆಣೆ ಮಾಡಿಕೊಂಡು ಲಿಂಗದಹಳ್ಳಿಗೆ ಹೋದರೆ ನಟರು ಬರಲು ಸಿದ್ಧರಿರಲಿಲ್ಲ. ಯಾಕೆಂದರೆ ಅವರಲ್ಲಿ ಕೆಲವರು ಸಂಸಾರಸ್ಥರು. ಮತ್ತೆ ಕೆಲವರಿಗೆ ನಾಟಕ ಕಂಪನಿ ಸೇರಿದರೆ ಯಾರೂ ಹೆಣ್ಣು ಕೊಡಲಿಕ್ಕಿಲ್ಲವೆಂಬ ಭಯ. ಮನೆಯ ಹಿರಿಯರ ಬೈಗಳನ್ನು ಎದುರಿಸಲಾರದ ಅಧೈರ್ಯ ಇನ್ನು ಕೆಲವರಿಗೆ. ಮತ್ತೆ ಮತ್ತೆ ಕಾಡಿ ಬೇಡಿ ಅವರನ್ನು ನಾಟಕವಾಡಲು ಕರೆದು ತಂದದ್ದಾಯಿತು. ಆದರೆ ಅಂದಿನ ಉತ್ಪನ್ನವನ್ನೆಲ್ಲ ನಾಟಕದ ಪರದೆ ಸಾಮಗ್ರಿಗಳಿಗಾಗಿ ಕೊಡಬೇಕಾಯಿತು. ಶಾಸ್ತ್ರಿಗಳನ್ನು ನಂಬಿಕೊಂಡರೆ ತಮಗೆ ಕಷ್ಟವೇ ಗತಿಯಾದೀತು ಎಂದು ಹೆದರಿ ನಟರೆಲ್ಲ ಮರುದಿನವೇ ಊರಿಗೆ ಹೋಗುವುದಾಗಿ ಹೇಳಿದರು. ಅವರ ದುಃಖ - ನೋವು ಶಾಸ್ತ್ರಿಗಳಿಗೆ ಅರ್ಥವಾಗಿತ್ತು. ಎಲ್ಲರನ್ನೂ ಊರಿಗೆ ಹೋಗಲು ತಿಳಿಸಿಬಿಟ್ಟರು. ಮತ್ತೆ ಏಕಾಂಗಿಯಾಗಿ ಚಿಂತಿಸುತ್ತ ಕೂತರು.

ಸೋಲನ್ನೊಪ್ಪುವ ಜಾಯಮಾನವಲ್ಲ ಶಾಸ್ತ್ರಿಗಳದು. ಎದೆಗುಂದಿಸುವಂಥ ಕಷ್ಟಗಳು ಬಂದಾಗೆಲ್ಲ ಸೆಡ್ಡು ಹೊಡೆದು ನಿಲ್ಲುವುದು ಅವರ ಗುಣ. ಶಾಸ್ತ್ರಿಗಳ ಗೆಳೆಯರ ಬಳಗ ದೊಡ್ಡದು. ಹಣವಿಲ್ಲದಿದ್ದರೂ ಸ್ನೇಹಿತರನ್ನು ಗಳಿಸಿದ್ದರು. ಆದರೆ ಏನೆಲ್ಲ ಇದ್ದರೂ ಒಮ್ಮೆಲೇ ಮೇಲೇಳುವುದು ಕಷ್ಟದ ಕೆಲಸ. ಈ ಮಧ್ಯೆ ಸಿರಸಿಗೆ ಹೋಗಿ ರಾ. ವೆ. ವಾಲಗಳ್ಳಿ ಅವರನ್ನು ಭೇಟಿಯಾದರು. ಅವರೂ ನಟರು, ನಾಟಕಕಾರರು. ಕಂಪನಿಯ ಕಷ್ಟ-ನಷ್ಟಗಳನ್ನು ಕಂಡವರು. ಶಾಸ್ತ್ರಿಗಳೊಂದಿಗೆ ಬಂದು ಜೊತೆಯಲ್ಲಿ ನಿಂತರು. 'ಸಾತೇನಹಳ್ಳಿ'ಯಲ್ಲಿ 'ಎಚ್ಚಮನಾಯಕ' ನಾಟಕವನ್ನು ಊರಿನವರ ನೆರವಿನಿಂದ ಆಡಿದ್ದೂ ಆಯಿತು. ಕಾಯಂ ಆದಾಯ ನೀಡದ ಈ ಬಗೆಯ ಹವ್ಯಾಸ ಎಷ್ಟು ದಿನ ನಡೆದೀತು? ಬರಿಗೈಯಲ್ಲಿ ಹೋದರೆ ಯಾವ ನಟ ಬಂದಾನು? ಸಂಬಳವಿಲ್ಲದೆ ಯಾರಾದರೂ ಹೇಗೆ ದುಡಿದಾರು? ಸುಮ್ಮನೇ ತಿರುಗಾಟ, ಹಣ - ಸಮಯ ವ್ಯರ್ಥ. ಹಾಗಾದರೆ ಕಂಪನಿ ಕಟ್ಟುವುದು ಇನ್ನು ಕನಸೇ? ಪ್ರಶ್ನೆಗಳು ಶಾಸ್ತ್ರಿಗಳನ್ನು ಕಾಡುತ್ತಿದ್ದವು.

ಹಣ ಬೇಕು ಮೊದಲು. ಹಣದಿಂದ ಹಣ ಗಳಿಸಬಹುದು. ಒಂದು ದಿನ ಬೆಳಿಗ್ಗೆ ಎದ್ದು ಶಾಸ್ತ್ರಿಗಳು ಏನೇನೋ ಲೆಕ್ಕಾಚಾರ ಹಾಕಿದರು. ಜೇಬಿನಲ್ಲಿ ಕೈ ಹಾಕಿ ನೋಡಿದರು. ಹದಿನಾಲ್ಕು ಆಣೆಗಳು ಉಳಿದಿದ್ದವು. ಪ್ರಯಾಣದರ ತುಂಬ ಅಗ್ಗವಾಗಿದ್ದ ಕಾಲ ಅದು. ನೇರವಾಗಿ ಸೊರಬದ ಬಸ್ಸು ಹತ್ತಿದರು.

ಸೊರಬದಲ್ಲಿ ಇಳಿಯುವಾಗ ಅವರೊಂದಿಗೆ ರಾ. ವೆ. ವಾಲಗಳ್ಳಿಯವರೂ ಇದ್ದರು. ಇಬ್ಬರೂ ನಾಟಕದವರೇ. ಚೆನ್ನಾಗಿ ರಿಹರ್ಸಲ್ ಮಾಡಿಕೊಂಡು, ಕಟ್ಟಿದ ನಾಟಕ ಕಂಪನಿಯನ್ನು ಉಳಿಸಲಿಕ್ಕಾಗಿ ಹೊಸ ನಾಟಕವೊಂದನ್ನು ಆಡಲು ಸಿದ್ಧವಾದರು. ಹುಂಬ ಧೈರ್ಯ ಬೇರೆ. ದಾರಿ ಕಾಣದ ಅವರಿಗೆ ಒಂದು ಪ್ರಯೋಗ ಮಾಡುವ ಹಂಬಲ. ಇಬ್ಬರೂ ನೇರವಾಗಿ ಒಂದು ಹೋಟೆಲ್‌ಗೆ ಹೋಗಿ ಗಾಂಭೀರ್ಯದ ಪೋಸು ನೀಡಿ ರೂಂ ಮಾಡಿದರು. ಊಟವೂ ಆಯಿತು. ಊರಿನ ಮುಖಂಡರು ಯಾರು ಯಾರೆಂದು ಪತ್ತೆಹಚ್ಚಿದರು. ನಾಟಕ ಕಂಪನಿಯನ್ನು ಸೊರಬದಲ್ಲಿ ಮುಕ್ಕಾಮ ಮಾಡಬೇಕಾಗಿದೆಯೆಂದೂ, ಅದಕ್ಕಾಗಿ ಸ್ಥಳ ಹಾಗೂ ಲೈಸೆನ್ಸ್ ಪಡೆಯಲು ಮಾತುಕತೆಗಾಗಿ ಬಂದಿರುವುದಾಗಿಯೂ ಹೇಳಿದರು. ನರಹಳ್ಳಿ ಕೃಷ್ಣಪ್ಪನವರು, ಆನೆಕಲ್ ಸುಬ್ಬರಾಯರು, ಪಾಂಗಾಳ ಡಾಕ್ಟರರು ಮತ್ತು ಇಂಗ್ಲಿಷ್ ಶಾಲೆಯ ಮುಖ್ಯೋಪಾಧ್ಯಾಯರು ಇವರನ್ನು ಕಂಡು ತಮ್ಮ ಅನುಭವಗಳನ್ನೆಲ್ಲ ಆದ್ರತೆಯಿಂದ ಹೇಳಿಕೊಂಡರು.

ಎಲ್ಲರೂ ಶಾಸ್ತ್ರಿಗಳ ಮಾತಿನ ವೈಖರಿಗೆ ಮರುಳಾದರು. ನಾಲ್ವರೂ ಸೇರಿ ನಾಟಕದ ಥಿಯೇಟರ್ ಹಾಕುವ ಜಾಗವನ್ನು ನೋಡಿದರು. ತಹಸೀಲ್ದಾರರನ್ನು ಕಂಡು ಲೈಸನ್ಸ್ ಪಡೆಯಲು ಮಾತುಕತೆ ನಡೆಸಿದರು. ಶಾಸ್ತ್ರಿಗಳ ವ್ಯಕ್ತಿತ್ವಕ್ಕೆ ಮಾರುಹೋದ ನಾಲ್ವರೂ ಶಾಸ್ತ್ರಿಗಳು 'ಏನೇ ಸಹಾಯ ಕೇಳಿದರೂ ನೀಡಲು ಸಿದ್ಧವಾಗಿರುವುದಾಗಿ' ತಿಳಿಸಿದರು. ಇಂಥ ಸಂದರ್ಭವನ್ನು ತುಂಬ ಮುತ್ಸದ್ದಿತನದಿಂದ ಸೃಷ್ಟಿಸಿಕೊಂಡ ಶಾಸ್ತ್ರಿಗಳು ಬಿಟ್ಟಾರೆಯೇ? ಹಂಸಬಾವಿಯಲ್ಲಿ ಕಂಪನಿಗಾಗಿ ಸಾಲ ಮಾಡಿರುವುದಾಗಿಯೂ, ಸಾಲ ತೀರಿಸದ ಹೊರತು ಕಂಪನಿಯ ಸಾಮುಗ್ರಿಗಳನ್ನು ತರುವಂತಿಲ್ಲವೆಂದು ಮನವರಿಕೆ ಮಾಡಿಕೊಟ್ಟರು. ಕೃಷ್ಣಪ್ಪನವರು ಡಾಕ್ಟರರು, ಸುಬ್ಬರಾಯರು ತಲಾ 250 ರೂಪಾಯಿಗಳಂತೆ ಸಾಲ ನೀಡಲು ತಯಾರಾದರು. ಸುಬ್ಬರಾಯರನ್ನೂ ಕರೆದುಕೊಂಡು ಹಂಸಬಾವಿಗೆ ಮರುದಿನವೇ ಹೋಗುವುದೆಂದು ನಿರ್ಧಾರವಾಯಿತು.

ವಾಸ್ತವವಾಗಿ ಹಂಸಬಾವಿಯಲ್ಲಿ ಮಾಡಿದ ಸಾಲ 250 ರೂ. ಗಳು ಮಾತ್ರ. ಸುಬ್ಬರಾಯರು ಜೊತೆಗೇ ಇದ್ದರೂ, ಉಪಾಯದಿಂದ 250 ರೂ. ನೀಡಿ ಸಾಮುಗ್ರಿಗಳನ್ನು ಬಿಡಿಸಿಕೊಂಡು, ಸುಬ್ಬರಾಯರ ಜೊತೆಗೇ ಸೊರಬಕ್ಕೆ ಕಳಿಸಿದರು. ನಟರನ್ನು ಹೊಂದಿಸುವ ಪ್ರಯಾಸದ ಕಾರ್ಯ ಎದುರಿಗಿತ್ತು. ನಿಜವಾದ ದುಸ್ಥಿತಿಯನ್ನು ಪೂರ್ಣವಾಗಿ ಹೇಳದೇ ಗತ್ತಿನಿಂದಲೇ ನಡೆದುಕೊಂಡ

ಶಾಸ್ತ್ರಿಗಳು ವಾಲಗಳ್ಳಿಯವರ ನೆರವಿನೊಂದಿಗೆ ಶಿರಸಿಯ ಗುಲಾಬಿ ಎಂಬ ಒಬ್ಬ ನಟಿಯೂ ಸೇರಿದಂತೆ ಕೆಲವು ಹೊಸ ಕಲಾವಿದರನ್ನು, ಹಳೆಯ ಕಲಾವಿದರನ್ನು ಸೇರಿಸಿದರು. ಹದಿನೈದು ದಿನಗಳಲ್ಲಿ ಸೊರಬದಲ್ಲಿ ಥಿಯೇಟರ್ ಸಿದ್ಧವಾಯಿತು. ಆದರೆ ಲೈಸನ್ಸ್ ನೀಡಲು ತಡವಾಯಿತು. ಅಂತೂ 'ವರದಕ್ಷಿಣೆ', 'ಪನ್ನಾದಾಸಿ', 'ಭಕ್ತ ಸುಧಾಮ', 'ಸತಿ ಸಾವಿತ್ರಿ' ಮುಂತಾದ ನಾಟಕಗಳನ್ನು ಆಡಿದರು. ಆದರೆ ಅದೃಷ್ಟ ಚೆನ್ನಾಗಿರಲಿಲ್ಲ. ಉತ್ಪನ್ನವು ದಿನನಿತ್ಯದ ಊಟಕ್ಕೆ ಸಾಕಾಯಿತೇ ವಿನಾ ಸಾಲ ತೀರಲಿಲ್ಲ.

ಅಲ್ಲಿಂದ ಸಾಗರಕ್ಕೆ, ಸಾಗರದಿಂದ ಸಿದ್ದಾಪುರಕ್ಕೆ ಕಂಪನಿ ಬದಲಾಯಿತು. ಸುಬ್ಬರಾಯರು ಶಾಸ್ತ್ರಿಗಳ ಮೇಲಿನ ವಿಶ್ವಾಸದಿಂದ ಹಣ ಹಾಕುತ್ತಲೇ ಇದ್ದರು. ಸಿದ್ದಾಪುರ ಶಾಸ್ತ್ರಿಗಳ ಹುಟ್ಟಿದ ಊರು. ಅವರ ಖ್ಯಾತಿಯನ್ನು ಕೇಳಿದ್ದ ಜನ ಅವರನ್ನು ನೋಡಲೆಂದೇ ಬರುತ್ತಿದ್ದರು. ಚೆನ್ನಾಗಿ ಉತ್ಪನ್ನವಾದರೂ ಕಂಪನಿಯ ಅಭಿವೃದ್ಧಿಗೆ ಹಣ ಸುರಿದಿದ್ದರಿಂದ ಸಾಲ ಹಾಗೇ ಇತ್ತು. ತುಂಬ ಪ್ರಖ್ಯಾತವಾದ ಶಿರಸಿಯ ಜಾತ್ರೆ ಅದೇ ವೇಳೆಗೆ ಬಂತು. ಧೈರ್ಯ ಮಾಡಿ ಶಾಸ್ತ್ರಿಗಳು ದುಬಾರಿ ಬೆಲೆಯಲ್ಲಿ ಥಿಯೇಟರು ಹಿಡಿದರು. ತುಂಬ ಜನದಟ್ಟಣೆಯ ಶಿರಸಿ ಜಾತ್ರೆಯಲ್ಲಿ ನಾಟಕವಾಡಿದರೆ ಕೈ ತುಂಬ ಹಣ ಬಂದು, ಸಾಲ ತೀರಿ, ಕಂಪನಿಯನ್ನು ವಿಸ್ತರಿಸಬಹುದೆಂಬುದು ಶಾಸ್ತ್ರಿಗಳ ಲೆಕ್ಕಾಚಾರ. ಆದರೆ ದುರದೃಷ್ಟ. ಎಲ್ಲ ಯೋಚನೆಗಳೂ ತಲೆ ಕೆಳಗಾಗುತ್ತವೆಂಬುದು ಅವರಿಗೂ ಗೊತ್ತಿರಲಿಲ್ಲ.

ಸದಾಶಿವರಾವ್ ಗರುಡರು ಶಿರಸಿ ಜಾತ್ರೆಗೆ ಬರಲು ನಿರ್ಧರಿಸಿ, ಶಾಸ್ತ್ರಿಗಳು ಮಾತನಾಡಿದ್ದ ಥಿಯೇಟರನ್ನು ಇನ್ನೂ ಹೆಚ್ಚಿನ ಬಾಡಿಗೆಗೆ ಮಾತನಾಡಿ, ಕಂಪನಿಯನ್ನು ತಂದೇ ಬಿಟ್ಟರು. ಶಾಸ್ತ್ರಿಗಳ ಪಾಲಿಗೆ ಇದು ನುಂಗಲಾರದ ತುತ್ತಾಗಿತ್ತು. ಸುಮಾರು ಎರಡು ದಶಕಗಳಿಂದ ಪ್ರಸಿದ್ಧಿ ಪಡೆದ ಭಾರೀ ನಾಟಕ ಮಂಡಳಿಯ ಎದುರು ಸವಾಲು ಹಾಕುವುದು ಶಾಸ್ತ್ರಿಗಳಂಥವರಿಗೆ ಸುಲಭ ಸಾಧ್ಯವಾಗಿರಲಿಲ್ಲ. ಸರಿಯಾದ ವಿದ್ಯುದ್ದೀಪ ವ್ಯವಸ್ಥೆಯಾಗಲಿ, ಅದ್ದೂರಿಯ ಸೀನರಿಯಾಗಲಿ, ಅನುಭವೀ ನಟರಾಗಲಿ ಇಲ್ಲದ ಬಡಸಂಸ್ಥೆ ಶಾಸ್ತ್ರಿಗಳದು. ಗರುಡರ ಕಂಪನಿ ಹಾಗಲ್ಲ. 120 ಜನ ನಟರು. ಜನರೇಟರ್‌ನ ವಿದ್ಯುತ್ ಬೆಳಕಿನ ವ್ಯವಸ್ಥೆ. ಬೆಲೆ ಬಾಳುವ ಡ್ರೆಸ್‌ಗಳು. ವೈಭವಯುತ ಸೀನರಿಗಳು. ಈ ಶ್ರೀಮಂತ ಸಂಸ್ಥೆಯ ಎದುರು ಶಾಸ್ತ್ರಿಗಳ ಕಂಪನಿಯೆಲ್ಲಿ?

ಶಾಸ್ತ್ರಿಗಳ ಸ್ವಾಭಿಮಾನ ಕೆರಳಿತು. ಗರುಡರನ್ನು ಗುರುವಾಗಿ ಸ್ವೀಕರಿಸಿ, ಅವರಿಂದಲೇ ತರಬೇತಿಯನ್ನು ಪಡೆದ ಶಾಸ್ತ್ರಿಗಳು ಈಗ ಅವರೊಂದಿಗೆ ಸ್ಪರ್ಧೆಗೆ ಇಳಿಯಬೇಕಾದ ಸ್ಥಿತಿ. ತಾವು ಹಿಡಿದ ಥಿಯೇಟರನ್ನು ಗರುಡರಿಗೆ ಬಿಟ್ಟುಕೊಡಬೇಕಾದ ಪರಿಸ್ಥಿತಿಯಿಂದ ಅವರಿಗೆ ಆಘಾತವಾಯಿತು. ರಾತ್ರೋರಾತ್ರಿ ಅವರ ಥಿಯೇಟರ್ ಎದುರೇ ಮತ್ತೊಂದು ಟೆಂಟ್ ಸಿದ್ಧವಾಯಿತು. ಒಂದು ಕಡೆ

ದತ್ತಾತ್ರೇಯ ನಾಟಕ ಸಂಘದ ಝಗಝಗಿಸುವ ಥಿಯೇಟರ್. ಅದಕ್ಕೆ ಮುಖಾಮುಖಿಯಾಗಿ ಜಯಕರ್ನಾಟಕ ನಾಟಕ ಸಂಘದ ಪೆಟ್ರೋಮ್ಯಾಕ್ಸ್ ಲೈಟಿನ ಮಿಣುಕು ಬೆಳಕು. ಎಂಥ ಧೈರ್ಯ! ಗರುಡರು ತಮ್ಮ ನಟರೊಂದಿಗೆ ಹೇಳಿದರಂತೆ - 'ನೋಡಿದಿರಾ ಶಾಸ್ತ್ರೀನ! ಮಹಾ ಎದೆಗಾರ, ಎಂಥ ಸಾಹಸ ನೋಡಿ ಅವನದು...! ಭಲೇ! ಸ್ವಾಭಿಮಾನ ಅಂದರೆ ಹೀಗಿರಬೇಕು!'

ಜಾತ್ರೆಯಲ್ಲಿ ಜನರು ತುಂಬಿರುವಷ್ಟು ದಿನ ಹೊಟ್ಟೆಪಾಡಿಗೆ ತೊಂದರೆಯಾಗದಷ್ಟು ಉತ್ಪನ್ನವಾಯಿತು. ಹದಿನೈದು ದಿನ ಕಳೆಯುತ್ತಿದ್ದಂತೆ ಶಾಸ್ತ್ರಿಗಳು ಸ್ಪರ್ಧೆಯ ಅಪಾಯವನ್ನು ಅರಿತರು. ಗುರುವಿನ ಮುಂದೆ ಮರ್ಯಾದೆಯನ್ನು ಕಾಯ್ದುಕೊಳ್ಳಲು ನಿರ್ಧರಿಸಿ ಶಿರಸಿಯಿಂದ ಟೆಂಟ್ ಕಿತ್ತರು. ಮತ್ತೆ ಸಿದ್ದಾಪುರಕ್ಕೆ ಬಂದು ಕೆಲ ದಿನವಿದ್ದು, ಕುಮಟಾಕ್ಕೆ ಹೋದರು. 1937ನೇ ಇಸವಿ ಅದು. ಜೂನ್ ತಿಂಗಳ ಮೊದಲ ವಾರ. ಮಳೆಗಾಲದ ಪ್ರಾರಂಭದ ಚಿಹ್ನೆಗಳು ಕಾಣಿಸಿದವು. ಒಂದೆರಡು ನಾಟಕಗಳನ್ನು ಆಡುವಷ್ಟರಲ್ಲಿ 'ಧೋ' ಎಂದು ಮಳೆ ಸುರಿಯಲು ಪ್ರಾರಂಭವಾಯಿತು. ಶಾಸ್ತ್ರಿಗಳು ಕಂಗಾಲಾದರು. ಸುಮಾರು ನಲವತ್ತು ಜನರ ಹೊಟ್ಟೆಪಾಡಿನ ಪ್ರಶ್ನೆ. ನಾಟಕದ ಟೆಂಟ್‌ಗೆ ಎಲ್ಲಿಂದಲೋ ತಗಡನ್ನು ಎರವಲು ತಂದು ಮುಚ್ಚಿದ್ದಾಯಿತು. ಆದರೆ ಜನರು ನಾಟಕ ನೋಡಲು ಬಾರದೇ ಹಣ ಹೇಗೆ ಬಂದೀತು?ದಾರಿ ಕಾಣದೇ ದಿಗಿಲುಗೊಂಡಿದ್ದ ಶಾಸ್ತ್ರಿಗಳಿಗೆ ಒಬ್ಬ ಯುವಕ ಮನೆಯವರಿಗೂ ತಿಳಿಯದಂತೆ ಹಣ ಸಹಾಯ ಮಾಡಿ ಬದುಕಿಸಿದ. ಆತನ ಸಹಾಯವೇನೋ ನಿಸ್ವಾರ್ಥದ್ದಾಗಿತ್ತು. ಕಲಾವಿದರನ್ನು, ಕಲೆಯನ್ನು ಉಳಿಸುವ ಉದಾತ್ತ ಭಾವನೆಯಿಂದ ಕೂಡಿತ್ತು. ಆದರೆ ಆ ಹುಡುಗ ತಂದೆಗೂ ತಿಳಿಯದಂತೆ ಪೆಟ್ಟಿಗೆಯಿಂದ ಹಣ ಹಾರಿಸಿ ಇಲ್ಲಿಗೆ ತಂದು ಒಪ್ಪಿಸುತ್ತಿರುವ ಸಂಗತಿ ಅದು ಹೇಗೋ ಶಾಸ್ತ್ರಿಗಳಿಗೆ ತಿಳಿದಾಗ ಶಾಸ್ತ್ರಿಗಳು ಅವನ ಹಣವನ್ನು ನಿರಾಕರಿಸಿದರು. ಒಂದು ಕಡೆ ಹೊಟ್ಟೆಗಿಲ್ಲದೆ ಪರದಾಡುತ್ತಿದ್ದಾಗ ಅವನು ನೀಡುವ ಅಲ್ಪ ಸಹಾಯವೂ ಅವರ ಪಾಲಿಗೆ ತುಂಬ ಮಹತ್ವದ್ದೇ ಆಗಿ, ಅನಿವಾರ್ಯವಾಗಿ ಅದನ್ನು ಸ್ವೀಕರಿಸಬೇಕಾದ ಪರಿಸ್ಥಿತಿ. ಇನ್ನೊಂದು ಕಡೆ ಈ ಬಗೆಯ 'ಗುಪ್ತದಾನ'ವು ನಾಳೆ ಹುಡುಗನ ತಂದೆ-ತಾಯಿಗಳಿಗೆ ತಿಳಿದರೆ ಏನಾದೀತು ಎಂಬ ಭಯ! ಕೊನೆಗೂ ವ್ಯಕ್ತಿ ಗೌರವವೇ ಗೆದ್ದಿತು. ಹುಡುಗ ಎಂದಿನಂತೆ ಜೇಬಿಗಿಳಿಸಿ ತಂದಿದ್ದ ಹಣವನ್ನು ಕೊಡಲು ಮುಂದಾದಾಗ ಶಾಸ್ತ್ರಿಗಳು ಹೇಳಿದರು - "ನೋಡು ಮಗೂ, ಬೇಸರ ಪಟ್ಟುಕೊಳ್ಳಬೇಡ, ನಿನ್ನ ಉಪಕಾರಕ್ಕೆ ನಾನು ಋಣಿ. ಆದರೆ ಹೀಗೆ ಹಣ ತಂದುಕೊಡುವುದು ನನಗೆ ಒಪ್ಪಿಗೆಯಾಗದು. ಇದರಿಂದ ನಿನಗೂ ನನಗೂ - ಇಬ್ಬರಿಗೂ ಗೌರವ ಉಳಿಯಲಿಕ್ಕಿಲ್ಲ. ನಾನು ನಿನ್ನ ಹಣ ಸ್ವೀಕರಿಸಲಾರೆ. ನನ್ನ ದುರದೃಷ್ಟಕ್ಕೆ ನಾನೇ ಜವಾಬ್ದಾರ. ಅಲ್ಲದೇ, ನನ್ನ ದಾರಿದ್ರ್ಯ ಅಷ್ಟು ಸುಲಭವಾಗಿ ನೀಗುವಂಥದ್ದಲ್ಲ. ನನ್ನನ್ನು ನನ್ನ ಪಾಡಿಗೆ ಬಿಡು. ಇನ್ನು ಮೇಲೆ ಹಣ ತರಬೇಡ.' ಹುಡುಗ ಪೆಚ್ಚು ಮೋರೆ ಹಾಕಿಕೊಂಡು ಹೊರಟುಹೋದ. ಶಾಸ್ತ್ರಿಗಳು ನಿಟ್ಟುಸಿರು ಬಿಟ್ಟರು.

ಹೇಗೋ ಮಳೆಗಾಲ ಕಳೆದು ಸುಪ್ರಸಿದ್ಧ ಪುಣ್ಯಕ್ಷೇತ್ರ ಗೋಕರ್ಣದಲ್ಲಿ ಮುಕ್ಕಾಮು ಹಾಕಿದರು. ಕಂಪನಿಯು ಜೀವ ಉಳಿದಿದ್ದು ಅಲ್ಲಿ. ಅದು ಸಾಧ್ಯವಾದದ್ದು ಬಿ. ನಂಜುಂಡಯ್ಯನವರಿಂದ. ಬಿ. ನಂಜುಂಡಯ್ಯ ಆಂಜನೇಯನ ಪಾತ್ರ ಮಾಡುವುದರಲ್ಲಿ ಅನ್ಯಾದೃಶವಾದ ಪ್ರತಿಭೆ - ಕಲಾವಂತಿಕೆಯನ್ನು ಮೆರೆದಿದ್ದವರು. ಅವರ ಆಂಜನೇಯನ ಪಾತ್ರ ನೋಡುವುದೇ ಜೀವನದ ಒಂದು ಭಾಗ್ಯ ಎಂದು ಜನ ಭಾವಿಸುತ್ತಿದ್ದರು. ತುಂಬ ತನ್ಮಯತೆಯಿಂದ, ಭಕ್ತಿ, ಭಾವ, ನಿರ್ಭರತೆಯಿಂದ ಕೂಡಿರುತ್ತಿದ್ದ ಅವರ ಆಂಜನೇಯನ ಪಾತ್ರ ಮಾಡಿಸಲು ಎಲ್ಲ ಕಂಪನಿಗಳೂ ಮುಗಿಬೀಳುತ್ತಿದ್ದವು. ಯಾವುದಾದರೂ ಕಂಪನಿ ಹಾನಿಗೊಳಗಾದರೆ, ಅವರು ನಂಜುಂಡಯ್ಯನವರನ್ನು ಬೇಡಿ, ಕಾಡಿ ಆಂಜನೇಯ ಪಾತ್ರಕ್ಕಾಗಿ ಕರೆಸುತ್ತಿದ್ದರು. ಅವರ ಅದ್ಭುತ ಅಭಿನಯವನ್ನು ನೋಡಲು ಜನ ಹುಚ್ಚೆದ್ದು ಬರುತ್ತಿದ್ದರು. ಕಂಪನಿಯ ಜೀವ ಉಳಿಯುತ್ತಿತ್ತು. ಶಾಸ್ತ್ರಿಗಳಿಗೆ ನಂಜುಂಡಯ್ಯನವರ ಪರಿಚಯವಿತ್ತು. ಅವರ ಮಾತಿಗೆ ಬೆಲೆ ಕೊಟ್ಟು ಬಂದು ನಾಲ್ಕು 'ಸಂಪೂರ್ಣ ರಾಮಾಯಣ' ಪ್ರದರ್ಶನ ನೀಡಿದರು. ಶಾಸ್ತ್ರಿಗಳದು ರಾವಣನ ಪಾತ್ರ. ಅಂತೂ ಹೇಗೋ ಜೀವ ಉಳಿಸಿಕೊಳ್ಳಲು ಈ ನಾಟಕ ನೆರವಾಯಿತು. ಆದರೆ ಅದನ್ನೆ ಎಷ್ಟು ಪ್ರದರ್ಶನ ನೀಡಲು ಸಾಧ್ಯ?

ಸಂಘಕ್ಕೆ ಬಾಲಗ್ರಹ ತಪ್ಪಲಿಲ್ಲ. ಇದ್ದುದರಲ್ಲಿಯೇ ಸಮಾಧಾನದ ಸಂಗತಿಯೆಂದರೆ ಒಂದು ಕಾಲಕ್ಕೆ ಗರುಡರ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಘಟಾನುಘಟಿಗಳಾದ ನಟರೆಲ್ಲ ಒಬ್ಬೊಬ್ಬರಾಗಿ ಜಯ ಕರ್ನಾಟಕ ನಾಟಕ ಮಂಡಳಿಗೆ ಬಂದು ಸೇರಿದ್ದು, ಜಗನ್ನಾಥರಾವ್ ಕುಲಕರ್ಣಿ, ಎಲ್. ಪಾವಂಜೆ, ಹಮ್ಮಿಗಿ ನೀಲಕಂಠಪ್ಪ, ಗುಡಿ ಸೀತಾರಾಮಭಟ್ಟ, ರಾಮದುರ್ಗದ ವೆಂಕಣ್ಣ - ಹೀಗೆ ಎಲ್ಲರೂ ಅತ್ಯುತ್ತಮ ನಟರೇ. ಒಂದು ನಾಟಕ ಮಂಡಳಿಯಲ್ಲಿ ಇರಬೇಕಾದ ಉತ್ತಮ ಅಭಿನಯ, ಮಾತುಗಾರಿಕೆ, ಸಂಗೀತ, ವಾದನಗಳ ಕಲಾವಿದರೆಲ್ಲ ಈಗ ಕಂಪನಿಯಲ್ಲಿ ಮೇಳವಿಸಿದ್ದರು. ಶಾಸ್ತ್ರಿಗಳು ಇದರಿಂದ ಸಂತೋಷಿತರಾದರೂ ನಾಟಕಗಳಿಂದ ಆದಾಯ ಹೆಚ್ಚಲಿಲ್ಲ. ಹೊಸ ಹೊಸ ನಾಟಕಗಳನ್ನು ಪ್ರಯೋಗ ಮಾಡೋಣವೆಂದರೆ ಹೊಟ್ಟೆಪಾಡಿನ ಸಮಸ್ಯೆಯಿಂದಾಗಿ ನಾಟಕವನ್ನು ನಿಲ್ಲಿಸುವಂತಿಲ್ಲ.

ಒಂದು ರೀತಿಯಲ್ಲಿ ಈ ಸಮಸ್ಯೆ ಜಯಕರ್ನಾಟಕ ನಾಟಕ ಮಂಡಳಿಯದು ಮಾತ್ರ ಆಗಿರಲಿಲ್ಲ. ಗುಬ್ಬಿ ಕಂಪನಿ, ಗರುಡರ ಕಂಪನಿಗಳು ಭಾರೀ ಆರ್ಥಿಕ ಮುಗ್ಗಟ್ಟಿಗೆ ಸಿಲುಕಿದ್ದವು. ಅದಕ್ಕೆ ಕಾರಣವೆಂದರೆ ಮೂಕ ಚಿತ್ರಗಳು ಬದಲಾಗಿ ಮಾತನಾಡುವ ಚಲನಚಿತ್ರಗಳು ಪ್ರಸಾರಕ್ಕೆ ಬಂದದ್ದು. ಅದ್ಭುತ ಲೋಕವನ್ನೇ ಪರದೆಯ ಮೇಲೆ ತೋರಿಸುವ ಚಲನಚಿತ್ರಗಳು ಜನರನ್ನು ಆಕರ್ಷಿಸತೊಡಗಿ ನಾಟಕ ಕಂಪನಿಗಳನ್ನು ಕೇಳುವವರೇ ಇಲ್ಲವಾದರು. ವೀರಣ್ಣನವರಂಥ ಬಲಿಷ್ಠರು ಅದ್ಭುತವಾದ ಸೀನರಿಗಳನ್ನೊಳಗೊಂಡು 'ಕುರುಕ್ಷೇತ್ರ', 'ಸಂಪೂರ್ಣ ರಾಮಾಯಣ'ದಂತಹ ನಾಟಕಗಳನ್ನು ಪ್ರದರ್ಶಿಸುವ ಮೂಲಕ ಅಸ್ತಿತ್ವವನ್ನು ಕಾಪಾಡಿಕೊಳ್ಳುವ ಪ್ರಯತ್ನ

ಮಾಡುತ್ತಿದ್ದರು. ಸಾಕ್ಷಾತ್ ವೈಕುಂಠವನ್ನೇ ರಂಗದ ಮೇಲೆ ಪ್ರತ್ಯಕ್ಷೀಕರಿಸುವ ಆನೆ-ಕುದುರೆ-ರಥಗಳನ್ನೂ ರಂಗದ ಮೇಲೆ ತರುವ ಸಾಹಸ ಮಾಡಿ ಜನರನ್ನು ಸೆಳೆಯಲು ಪ್ರಯತ್ನ ಮಾಡಿದರು. ಆದರೆ ಚಿಕ್ಕಪುಟ್ಟ ಕಂಪನಿಗಳ ಸ್ಥಿತಿ ಮಾತ್ರ ಪೂರ್ಣ ಹದಗೆಟ್ಟಿತು. ಪ್ರೇಕ್ಷಕರನ್ನು ಆಕರ್ಷಿಸಲು ಬಗೆ ಬಗೆಯ ಪ್ರಯೋಗಗಳು ನಡೆದವು. ಅಂತೂ ನಾಟಕ ಕಂಪನಿಗಳ ಪಾಲಿಗೆ ಅದೇ ಅತ್ಯಂತ ಸಂಕಷ್ಟದ ಕಾಲ.

ಸೀತಾರಾಮ ಶಾಸ್ತ್ರಿಗಳು ಕಂಪನಿಯನ್ನು ಉಳಿಸಿಕೊಳ್ಳಲು ಹರಸಾಹಸ ಮಾಡಿದರು. ಉತ್ಪನ್ನ ಕಡಿಮೆಯಾಗತೊಡಗುತ್ತಲೇ ಮುಕ್ಕಾಮುಗಳನ್ನು ಬದಲಿಸುತ್ತ, ಕಂಟ್ರಾಕ್ಟರುಗಳ ಮೂಲಕ ನಾಟಕವಾಡುತ್ತ, ಬದುಕಲು ಹೋರಾಟ ನಡೆಸಿದರು. ಎಷ್ಟೋ ಊರುಗಳಲ್ಲಿ ಜನರೇನೋ ತುಂಬಿರುತ್ತಿದ್ದರು. ಆದರೆ ಕಲೆಕ್ಷನ್ 30-40ರೂಪಾಯಿ. ಗೇಟ್‌ಕೀಪರುಗಳನ್ನು ಬೆದರಿಸಿ ಕೆಲವರು ಒಳನುಗ್ಗಿದರೆ, ಮತ್ತೆ ಕೆಲವು ಗೌರವಾನ್ವಿತರು ತಾವು ಪಡೆದ ಫ್ರೀಪಾಸಿಗೆ ತಮ್ಮ ಬಂಧುಬಳಗವನ್ನೆಲ್ಲ ಉಚಿತವಾಗಿ ಒಳಗೆ ಕರೆದು ತರುತ್ತಿದ್ದರು. ನೆಲದ ಟಿಕೆಟ್ಟು ಪಡೆದು ಕುರ್ಚಿಗೆ ಬಂದು ಕೂಡುವವರೂ ಇರುತ್ತಿದ್ದರು. ತನಿಖೆ ಮಾಡಲು ಹೋದರೆ ಜಗಳ, ಬಡಿದಾಟ ಪ್ರಾರಂಭವಾಗುತ್ತಿತ್ತು. ಈ ಬಗೆಯ ಹಲವಾರು ಕಹಿ ಅನುಭವಗಳಿಂದ ಶಾಸ್ತ್ರಿಗಳು ಕುಗ್ಗಿ ಹೋದರು.

ಸ್ಥಳ ಬದಲಾಯಿಸುತ್ತ ಸಂಕೇಶ್ವರ, ನಿಪ್ಪಾಣಿಗಳಲ್ಲೆಲ್ಲ ತಿರುಗಾಡಿ ಕಂಪನಿ ಬೆಳಗಾಂವಿಗೆ ಬಂದಿತು. ಮರಾಠಿ ಭಾಷಿಕರು ನಾಟಕ - ಸಂಗೀತಗಳ ಆರಾಧಕರು. ಬೆಳಗಾಂವಿಯಲ್ಲಿ ನಾಟಕ ಆಡುತ್ತಿದ್ದಾಗ ಸುಪ್ರಸಿದ್ಧ 'ನವಕಾಳ' ಪತ್ರಿಕೆಯ ಸಂಪಾದಕರಾದ ಚಿಂತಾಮಣಿ ಕೇಳ್ಕರ್ 'ಚವತಿ ಚಂದ್ರ' ನಾಟಕ ನೋಡಿ ಮುಕ್ತ ಕಂಠದಿಂದ ಹೊಗಳಿದರು. ಆದರೆ ಹೊಗಳಿಕೆಯಿಂದ ಹೊಟ್ಟೆ ತುಂಬುತ್ತಿರಲಿಲ್ಲ. ಅಂತೂ ಹೇಗೋ ಜೀವ ಹಿಡಿದುಕೊಂಡು 1942ರ ಹೊತ್ತಿಗೆ ಹುಬ್ಬಳ್ಳಿಯಲ್ಲಿ ಕಂಪನಿ ಮುಕ್ಕಾಮ ಮಾಡಿತು.

ಉತ್ತರ ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ ಧಾರವಾಡ ಸಮೀಪದಲ್ಲಿಯೇ ಇತ್ತು. ಹುಬ್ಬಳ್ಳಿಯ ಜನ ನಾಟಕಗಳನ್ನು ಪ್ರೋತ್ಸಾಹಿಸಿದರು. 'ಚಲೆಜಾವ್' ಚಳವಳಿಯ ತೀವ್ರತೆಯ ಆ ಕಾಲದಲ್ಲಿ ದೇಶಭಕ್ತಿಯನ್ನೂ ಪ್ರೇರೇಪಿಸುವ ನಾಟಕಕ್ಕೆ ಜನರ ಬೇಡಿಕೆಯಿತ್ತು. 'ಕಿತ್ತೂರು ಚೆನ್ನಮ್ಮ' ನಾಟಕವಾಡಿದರೆ ಕಲೆಕ್ಷನ್ ಹೆಚ್ಚಬಹುದೆಂದು ಹಿತೈಷಿಗಳು ಅಭಿಪ್ರಾಯ ಪಟ್ಟರು. ಆದರೆ ಬ್ರಿಟಿಷ್ ಕಲೆಕ್ಟರನ ಕೊಲೆಯ ದೃಶ್ಯವಿರುವ ಆ ನಾಟಕ ಆಡಲು ಇಂಗ್ಲಿಷ್ ಸರಕಾರ ಒಪ್ಪಿಗೆ ನೀಡಲು ಸಾಧ್ಯವಿರಲಿಲ್ಲ. ನಲವಡಿ ಶ್ರೀಕಂಠಶಾಸ್ತ್ರಿಗಳು ಬರೆದ 'ಕಿತ್ತೂರು ಚೆನ್ನಮ್ಮ' ನಾಟಕವನ್ನು ಸರಕಾರ ಆಗಲೇ ಬಹಿಷ್ಕರಿಸಿತ್ತು. ಶಾಸ್ತ್ರಿಗಳು ಅದರಲ್ಲಿಯೇ ಕೆಲವು ತಿದ್ದುಪಡಿ ಮಾಡಿ, ಧಾರವಾಡದ ಕಲೆಕ್ಟರರಿಂದ ಅನುಮತಿ ಪಡೆಯಲು ಹೋದರು, ಅನುಮತಿ ದೊರೆಯಲಿಲ್ಲ. ಅದು ನಿರೀಕ್ಷಿತವೇ

ಆದ್ದರಿಂದ ಹೆಚ್ಚು ನಿರಾಶೆಯಾಗಲಿಲ್ಲ. ಈ ಅವಧಿಯಲ್ಲೇ ಶಾಸ್ತ್ರಿಗಳು ಆಡುತ್ತಿದ್ದ ನಾಟಕಗಳನ್ನೇ ಆಧರಿಸಿ, ರಾಷ್ಟ್ರಭಕ್ತಿಯನ್ನು ತುಂಬುವ ಭಾವಪೂರ್ಣ ಮಾತುಗಳನ್ನಾಡಿ ಜನರಲ್ಲಿ ಸತ್ಯಾಗ್ರಹದ ಹುರುಪು ತುಂಬುತ್ತಿದ್ದರು. ಸರಕಾರಕ್ಕೆ ಇರಸು ಮುರಸು ಉಂಟು ಮಾಡುತ್ತಿದ್ದ ಅವರ ಮಾತುಗಳು, ಟೀಕಾ ಪ್ರಸಾರಗಳು ಸರಕಾರದ ಗಮನಕ್ಕೂ ಬಂದಿದ್ದವು. ಆದರೆ ಶಾಸ್ತ್ರಿಗಳು ಯಾರಿಗೂ ಸೊಪ್ಪು ಹಾಕುತ್ತಿರಲಿಲ್ಲ. 1943ರಲ್ಲಿ ಕಂಪನಿ ಶೃಂಗೇರಿಗೆ ಬಂತು. ಥಿಯೇಟರ್ ಕಟ್ಟಿಯಾದ ಮೇಲೆ ಅಲ್ಲಿ ನಾಟಕವಾಡಲು ಜಗದ್ಗುರುಗಳ ಅನುಮತಿ ದೊರೆಯಲಾರದೆಂಬುದು ಗೊತ್ತಾಯಿತು. ಕಾರಣವೆಂದರೆ ಅಲ್ಲಿಗೆ ಹತ್ತಿರದಲ್ಲಿಯೇ ವಾಸಿಸುತ್ತಿದ್ದ ಜಗದ್ಗುರುಗಳು ಅಸ್ವಸ್ಥರಾಗಿದ್ದರು. ಧೈರ್ಯಗೆಡದೆ ಶಾಸ್ತ್ರಿಗಳು ಜಗದ್ಗುರುಗಳನ್ನೇ ಭೇಟಿ ಮಾಡಿ ಪರಿಸ್ಥಿತಿಯನ್ನು ನಿವೇದಿಸಿಕೊಂಡಾಗ ಕರುಣಾಮಯಿಗಳಾದ ಶ್ರೀಗಳವರು ಅನುಮತಿ ನೀಡಿದರು. ಅವರ ಅನುಗ್ರಹದಿಂದ ಮಳೆಗಾಲವನ್ನು ಅಲ್ಲಿಯೇ ಕಳೆದರು. ಒಂದು ರೀತಿಯಲ್ಲಿ ಶಾಸ್ತ್ರಿಗಳ ಕಂಪನಿಗೆ ಹೊಸ ಜೀವಕಳೆ ತುಂಬಲು ಪ್ರಾರಂಭವಾದದ್ದು ಅಲ್ಲಿಂದಲೇ. ಕಂದಗಲ್ ಹನುಮಂತರಾಯರ ಎರಡು ಹೊಸ ನಾಟಕಗಳನ್ನು ಅಭ್ಯಾಸ ಮಾಡಿದ್ದೂ ಅಲ್ಲಿಯೇ. ಚೆನ್ನಬಸಪ್ಪ ಕವಲಿ, ಮಧ್ವಾಚಾರ್ಯ ಉಮರ್ಜಿ ಮುಂತಾದ ಉತ್ತಮ ನಟರು ರೂಪುಗೊಂಡದ್ದು ಈ ಸಂದರ್ಭದಲ್ಲಿಯೇ.

'ಚಿತ್ರಾಂಗದಾ' ಪೌರಾಣಿಕ ನಾಟಕ. ತುಂಬ ರೋಚಕವಾದ ಕಥಾವಸ್ತುವನ್ನೊಳಗೊಂಡ ಈ ನಾಟಕದ ರಂಗ ಸಾಧ್ಯತೆಗಳನ್ನು ಶಾಸ್ತ್ರಿಗಳು ಚೆನ್ನಾಗಿ ದುಡಿಸಿಕೊಂಡರು. ಭರ್ಜರಿಯಾದ ಡ್ರೆಸ್-ಸೀನರಿಗಳನ್ನು ಸಿದ್ಧಗೊಳಿಸಿಕೊಂಡು ನಾಟಕವನ್ನು ರಂಗದ ಮೇಲೆ ತಂದರು. ನಾಟಕ ತುಂಬ ಯಶಸ್ವಿಯಾಯಿತಲ್ಲದೆ ಗಲ್ಲಾಪೆಟ್ಟಿಗೆಯನ್ನು ತುಂಬಿಸುವಲ್ಲಿ ಯಶಸ್ವಿಯೂ ಆಯಿತು. ಹೀಗಾಗಿ ಶೃಂಗೇರಿಯ ಮುಕ್ಕಾಮಿನಲ್ಲಿ ಶಾಸ್ತ್ರಿಗಳ ಅದೃಷ್ಟರೇಖೆ ಮೇಲ್ಮುಖವಾಗಿ ಬೆಳೆಯತೊಡಗಿತು. ಶೃಂಗೇರಿಯಿಂದ ಕಂಪನಿ ಉಡುಪಿಗೆ ಹೋಯಿತು. ಉಡುಪಿಯಲ್ಲಿ ಆಗ ಪರ್ಯಾಯ ಉತ್ಸವ ನಡೆಯುತ್ತಿತ್ತು. ಭಕ್ತ ಭಾವುಕ ಜನರ ಸಂದಣಿ ಸೇರುತ್ತಿದ್ದ ಸಮಯದಲ್ಲಿಯೇ 'ಚಿತ್ರಾಂಗದಾ' ನಾಟಕ ಪ್ರಾರಂಭವಾಯಿತು. ಸಾಲದ ಭಾರದಿಂದ ತತ್ತರಿಸುತ್ತಿದ್ದ ಕಂಪನಿಗೆ ಶಕ್ತಿ ಬಂದಂತಾಯಿತು. ಸಾಲ ತೀರಿತು. ನಟರಿಗೆ ಕೈತುಂಬ ಸಂಬಳ, ಹೊಟ್ಟೆ ತುಂಬ ಊಟ, ನಾಟಕ ರಂಗಸಲಕರಣೆಗಳ ಖರೀದಿಗೆ ಅನುಕೂಲವಾಯಿತು.

ಇದಕ್ಕೆ ಮುಖ್ಯ ಕಾರಣವೆಂದರೆ ದಕ್ಷಿಣ ಕನ್ನಡ ಜಿಲ್ಲೆಯ ಜನರ ಕಲೆ-ಸಂಸ್ಕೃತಿಯನ್ನು ಕುರಿತ ಪ್ರೀತಿ, ಯಕ್ಷಗಾನದ ಪೌರಾಣಿಕ ಆಖ್ಯಾನಗಳನ್ನು ಆಸ್ವಾದಿಸುತ್ತಿದ್ದ ಅಲ್ಲಿಯ ಜನರು ಶಾಸ್ತ್ರಿಗಳ ಪೌರಾಣಿಕ ನಾಟಕಗಳಿಗೆ ಸ್ಪಂದಿಸಿದರು. ಡಾ. ಟಿ. ಮಾಧವ ಪೈ, ಡಾ. ಐತಾಳ, ಆರೂರು ಲಕ್ಷ್ಮೀನಾರಾಯಣ ರಾಯರು ಮುಂತಾದ ಆಢ್ಯರ ನೆರವೂ ಮಂಡಳಿಗೆ ದೊರಕಿತು. ಅಂತೂ ಶಾಸ್ತ್ರಿಗಳ ಭಾಗ್ಯದ ಬಾಗಿಲು ತೆರೆದು ಸಮೃದ್ಧಿಯ ಯುಗ ಶುರುವಾಯಿತು. ಧಾರ್ಮಿಕ

ಸೇವಾಸಂಸ್ಥೆಗಳಿಗಾಗಿ, ಕಲಾವಿದರ ನೆರವಿಗಾಗಿ ಸಹಾಯ ನಾಟಕ ಪ್ರದರ್ಶನಗಳನ್ನೂ ಕೊಟ್ಟರು. ವಿನೋದ ರಸಾಭಿವ್ಯಕ್ತಿಯಲ್ಲಿ ತುಂಬ ಪ್ರಸಿದ್ಧಿ ಪಡೆದ ಶಾಂತಕುಮಾರ್ ಅವರೂ ಜಯಕರ್ನಾಟಕ ನಾಟಕ ಮಂಡಳಿ ಸೇರಿದರು. 'ಟಿಪ್ಪೂ ಸುಲ್ತಾನ' ನಾಟಕವು ಅವರ ನೆರವಿನಿಂದ ತುಂಬ ಯಶಸ್ವಿಯಾಯಿತು. ಅನೇಕ ವರ್ಷಗಳಿಂದ ಬರೆದು ಪೆಟ್ಟಿಗೆಯಲ್ಲಿಟ್ಟ ನಾಟಕಕ್ಕೆ ರಂಗವೇರುವ ಮುಹೂರ್ತ ಬಂದಿತ್ತು. 'ಟಿಪ್ಪು ಸುಲ್ತಾನ' ಶಾಸ್ತ್ರಿಗಳ ಅತ್ಯಂತ ಮೆಚ್ಚಿನ ನಾಟಕ. ಅತ್ಯಂತ 'ಹಿಟ್' ಎನಿಸಿದ ನಾಟಕವೂ ಹೌದು. ಚರಿತ್ರೆಗೆ ನ್ಯಾಯ ಒದಗಿಸಿದ ಈ ನಾಟಕ ಮತೀಯ ಸಾಮರಸ್ಯದ ದೃಷ್ಟಿಯಿಂದಲೂ ಮಹತ್ವದ್ದಾಗಿತ್ತು.

ಜಯಕರ್ನಾಟಕ ನಾಟಕ ಸಂಘ ಯಶಸ್ಸಿನೊಂದಿಗೆ ತನ್ನ ಕೀರ್ತಿಯನ್ನೂ ವಿಸ್ತರಿಸಿಕೊಂಡು, 'ಭಾರೀ ಕಂಪನಿ' ಎನಿಸಿಕೊಂಡಿತು. ಸುಮಾರು 120 ಜನರಿದ್ದ ಈ ಕಂಪನಿಗೆ ಈಗ ಹಲವಾರು ನಟರು ತಾವಾಗಿಯೇ ಬಂದು ಬಾಗಿಲು ತಟ್ಟುತ್ತಿದ್ದರು. ಆಡಳಿತಾತ್ಮಕ ಬಿಗುವನ್ನು ಕಾಪಾಡಿಕೊಳ್ಳದೆ ಇಂಥ ದೊಡ್ಡ ಕಂಪನಿಯಲ್ಲಿ ಒಗ್ಗಟ್ಟನ್ನು ಸಾಧಿಸುವುದು ಸಾಧ್ಯವಿರಲಿಲ್ಲ. ಶಾಸ್ತ್ರಿಗಳು ಇದಕ್ಕಾಗಿ ಕಟ್ಟುನಿಟ್ಟಿನ ಕ್ರಮ ಕೈಗೊಂಡರು. ಒಡಕು ಹುಟ್ಟಿಸುವ ಪಿತೂರಿಗಾರರನ್ನು ಹೊರಹಾಕಿದರು. ಕಂಪನಿಯ ಸ್ಟೇಜ್‌ಗಾಗಿ ಭದ್ರವಾದ ಸಲಕರಣೆ, ಅದ್ದೂರಿಯ ಮಿನುಗುವ ದೀಪಕ್ಕಾಗಿ ಜನರೇಟರ್, ಪರದೆಗಳು ಸೆಟ್ಟಿಂಗ್‌ಗಳು ಎಲ್ಲವನ್ನೂ ಕಂಪನಿ ಒಳಗೊಂಡು ಪ್ರೇಕ್ಷಕರ ಆಕರ್ಷಣೆಯ ಕೇಂದ್ರವಾಯಿತು. ನಟರ ಹಾಲು ಹೈನಕ್ಕಾಗಿ ಎಮ್ಮೆಯನ್ನು ಕಟ್ಟಿ ಸಾಕಿದ ನಾಟಕ ಕಂಪನಿ ಕರ್ನಾಟಕದಲ್ಲಿ ಇದೊಂದೇ. ಜಯಕರ್ನಾಟಕ ನಾಟಕ ಸಂಘಕ್ಕೆ ಈ ಅವಧಿಯು ಪರಮ ಉತ್ಕರ್ಷದ ಕಾಲವೂ ಹೌದು. ಶಾಸ್ತ್ರಿಗಳ ಕನಸುಗಳೆಲ್ಲ ನಿಜವಾಗಿ ಅವರಿಗೆ ಪೂರ್ಣ ತೃಪ್ತಿಯನ್ನು ಕೊಟ್ಟ ಕಾಲವೂ ಹೌದು. ಆದರೆ ಇದಕ್ಕಾಗಿ ಅವರು ತೆತ್ತ ಬೆಲೆಯೆಷ್ಟು, ಅನುಭವಿಸಿದ ಕಷ್ಟನಷ್ಟಗಳೆಷ್ಟು!

## ಮರಳಿ ಸಿದ್ಧಾಪುರಕ್ಕೆ

ಒಬ್ಬ ಕಲಾವಿದನಿಗೆ ನಿಜವಾದ ಸಂತೋಷ - ಸಮಾಧಾನ ದೊರೆಯುವುದು ತನ್ನ ಊರಿನ ತನ್ನವರೆಂಬ ಜನರಿಂದ ಮೆಚ್ಚುಗೆ, ಶಹಭಾಸ್‌ಗಿರಿ ಪಡೆದುಕೊಂಡಾಗ, ಬೇರೆ ಊರುಗಳಲ್ಲಿ ದೊರೆವ ಸಂಮಾನಕ್ಕಿಂತ ಊರಿನ ಜನರ ಪ್ರೀತಿಯುಕ್ಕಿಸುವ ಕಣ್ಣುಗಳ ಹೊಳಪು ಹೆಚ್ಚು ಸಂತಸವನ್ನು ತರುತ್ತದೆ. ಅವರ ವಿಶ್ವಾಸದ - ಹೊಗಳಿಕೆಯ ಮಾತುಗಳಿಂದ ಕಲಾವಿದನಿಗೆ ತನ್ನ ಸಾಧನೆಯ ಸಾರ್ಥಕತೆಯ ಅನುಭವವಾಗುತ್ತದೆ. ಧನ್ಯತೆ ಮನಸ್ಸನ್ನು ತುಂಬುತ್ತದೆ. ಅಂಥ ಕ್ಷಣಕ್ಕಾಗಿ ಶಾಸ್ತ್ರಿಗಳು ತವಕದಿಂದ ಸಿದ್ಧವಾಗುತ್ತಿದ್ದರು. ತಾವು ಪಡೆದ ಉತ್ಕರ್ಷವನ್ನು ತನ್ನ ಊರಿನ ಜನರ ಎದುರು ತೆರೆದಿಟ್ಟು ಮೆರೆಯುವ ಹಂಬಲ ಅವರದಾಗಿತ್ತು. ಅದಕ್ಕಾಗಿ ಚಿಕ್ಕಮಗಳೂರು, ಬೀರೂರು, ಶಂಕರನಾರಾಯಣ, ಕುಂದಾಪುರಗಳನ್ನೆಲ್ಲ ಮುಗಿಸಿ, ಉತ್ತರ ಕನ್ನಡ

ಜಿಲ್ಲೆಯ ಭಟ್ಕಳ ಹಾಗೂ ಹೊನ್ನಾವರಗಳಲ್ಲಿ ಕ್ಯಾಂಪು ಮಾಡಿದರು. ಆದರೆ ಇಲ್ಲೆಲ್ಲ ಹೆಚ್ಚಿನ ಯಶಸ್ಸು ಸಿಗಲಿಲ್ಲ.

ಹೊನ್ನಾವರದಿಂದ ಸಿದ್ದಾಪುರಕ್ಕೆ ಹೋಗಲು ಎರಡು ಮೂರು ಮಾರ್ಗಗಳಿದ್ದವು. ಕಂಪನಿಯ ಖರ್ಚು ವೆಚ್ಚಗಳನ್ನು ನಿಯಂತ್ರಿಸಲು ಗೇರುಸೊಪ್ಪೆಯ ಮಾರ್ಗವಾಗಿ ಸಿದ್ದಾಪುರಕ್ಕೆ ಹೋಗುವುದು ನಿಶ್ಚಯವಾಯಿತು. ಹೊನ್ನಾವರದಿಂದ ಗೇರುಸೊಪ್ಪೆಗೆ ಹೋಗುವ ಮಾರ್ಗದಲ್ಲಿ ಶರಾವತಿ ನದಿಯ ಮೂಲಕ ನೀರಿನಲ್ಲಿ 16 ಮೈಲು ಪ್ರಯಾಣ ಮಾಡಬೇಕು. ಅದೊಂದು ಅವಿಸ್ಮರಣೀಯ ಜಲಪ್ರವಾಸವೂ ಹೌದು. ಸಮಪಾತಳಿಯ ವಿಶಾಲ ನೀರಿನ ಮೇಲೆ ತಂಗಾಳಿಯಲ್ಲಿ ತೇಲುತ್ತ ಹೋಗುವ ಈ ಪ್ರಯಾಣ ಕಂಪನಿಯ ನೂರಿಪ್ಪತ್ತು ಜನರಿಗೂ ಉಲ್ಲಾಸದಾಯಕವಾಗಿತ್ತು. ನಗುತ್ತ ಮಾತನಾಡುತ್ತ ತಿನಿಸು-ತಿಂಡಿ ತಿನ್ನುತ್ತ ರಾತ್ರಿ ಸಾಗುವಾಗ, ಹಿಂದಿನ ದಿನದ ದಣಿವಿನಿಂದ ಎಲ್ಲರೂ ನಿದ್ದೆಯಲ್ಲಿ ಮೈಮರೆತಿರುವಾಗಲೇ ಒಂದು ಅನಾಹುತ ಆಗಿಹೋಯಿತು. ಆವರೆಗೆ ಏನು ಮುನ್ಸೂಚನೆಯಿಲ್ಲದ ಶಾಂತ ಸ್ಥಿತಿ ಬದಲಾಗಿ ಬಿರುಗಾಳಿ ಪ್ರಾರಂಭವಾಯಿತು. ಸಾಮಗ್ರಿಗಳನ್ನು ತುಂಬಿದ್ದ ಜನರನ್ನು ತುಂಬಿದ್ದ ದೋಣಿಗಳು ಡೋಲಾಯಮಾನವಾದವು. ಮಿಂಚು-ಗುಡುಗುಗಳ ಅಬ್ಬರದೊಂದಿಗೆ ಮಳೆ ಅಬ್ಬರಿಸತೊಡಗಿತು. ಬಿರುಗಾಳಿಯ ಆಘಾತಕ್ಕೆ ಸಿಲುಕಿ -ಸಾಮಗ್ರಿ ಸಲಕರಣೆ ತುಂಬಿದ್ದ ದೋಣಿ ಮಗುಚಿಹೋಯಿತು. ಕತ್ತಲು ಬೇರೆ. ಹಾಹಾಕಾರವೆದ್ದಿತು. ಜಡಿಮಳೆಯಲ್ಲೇ ಒದ್ದೆಯಾಗುತ್ತ ಜನರನ್ನು ತುಂಬಿದ ದೋಣಿಗಳು ಹೇಗೋ ಗೇರುಸೊಪ್ಪೆ ತಲುಪಿದವು. ಆದರೆ ಬೆಳಗಾಗುವ ವರೆಗೆ ಏನೂ ಮಾಡುವಂತಿರಲಿಲ್ಲ.

ಬೆಳಕು ಹರಿದ ಮೇಲೆ ದೇವಾಲಯವೊಂದರಲ್ಲಿ ಆಸರೆ ಪಡೆಯಲಾಯಿತು. ಸಾಮಗ್ರಿಗಳನ್ನು ನೀರಿನಿಂದ ಹೊರತೆಗೆಯುವ ಕೆಲಸ ಸಾಗಿತು. ಕಂಪನಿಯ ಜನರೆಲ್ಲ ಭಯಭೀತರಾಗಿದ್ದರು. ಆದರೆ ಬೇರೆ ದಾರಿ ಇರಲಿಲ್ಲ. ಗೇರುಸೊಪ್ಪೆಯಿಂದ ಸಿದ್ದಾಪುರ ಸೇರಬೇಕಾಗಿತ್ತು. ಅದು ಘಟ್ಟದ ದಾರಿ. ಸಾಮಾನ್ಯ ಲಾರಿಗಳು ಭಾರವನ್ನು ಒಯ್ಯುತ್ತಿರಲಿಲ್ಲ. ಸರಿಯಾದ ವಾಹನವೂ ದೊರೆಯಲಿಲ್ಲ. ಏನೆಲ್ಲ ಪ್ರಯತ್ನ ಮಾಡಿ ಪಡೆದ ಲಾರಿಯೂ ಅಪಘಾತಕ್ಕೀಡಾಗಿ ಭಾರೀ ಕೊಳ್ಳದಲ್ಲಿ ಬಿದ್ದುಹೋಗುವ ಸ್ಥಿತಿಯಿಂದ ಸ್ವಲ್ಪದರಲ್ಲಿ ಪಾರಾದಾಗ ಶಾಸ್ತ್ರಿಗಳ ಆತ್ಮಶಕ್ತಿಯೂ ಅಲುಗಾಡಿಹೋಯಿತು. ಈ ಹದಿನಾಲ್ಕು ದಿನಗಳ ಸಾವು-ಬದುಕಿನ ಹೋರಾಟದಲ್ಲಿ ಏನೆಲ್ಲ ಆಗಿಹೋಯಿತು. ಅದು ಪರೀಕ್ಷಾಕಾಲ. ಇಷ್ಟಾಗಿಯೂ ಕಂಪನಿಯ ನಟರು ಸಹಾಯಕರು, ಶಾಸ್ತ್ರಿಗಳ ಕೈಬಿಡಲಿಲ್ಲ. ಅದಕ್ಕೊಂದು ಕಾರಣವೂ ಇತ್ತು.

ಶಾಸ್ತ್ರಿಗಳು ಮೂಲತಃ ಧಾರಾಳಿ. ದೇವರು ಕೈತುಂಬ ಕೊಟ್ಟು ನಡೆಸಿದಾಗ ಕಂಪನಿಯ ಜನರಿಗೆಲ್ಲ ಅಷ್ಟೇ ಧಾರಾಳವಾಗಿ ನೀಡಿದರು. ಶಾಸ್ತ್ರಿಗಳಿಗೆ ಹೆಂಡತಿಯಿರಲಿಲ್ಲ, ಮಕ್ಕಳಿರಲಿಲ್ಲ.

ಕಂಪನಿಯಲ್ಲಿ ಅವರೇ ಹಿರಿಯರು. ತಾವೇ ಮುಂದೆ ನಿಂತು ತಮ್ಮ ಕಂಪನಿಯ 8-10 ಜನರಿಗೆ ಮದುವೆ ಮಾಡಿಸಿದ್ದರು. ಆ ಎಲ್ಲರ ಸಂಸಾರಗಳೂ ಜೊತೆಗಿದ್ದವು. ಎಲ್ಲರನ್ನೂ ಪ್ರೀತಿಯಿಂದ ಕಂಡರು. ಮಕ್ಕಳಂತೆ, ಸೊಸೆಯಂದಿರಂತೆ ನೋಡಿಕೊಂಡರು. ಪುಟ್ಟ ಮಕ್ಕಳಿಗೆಲ್ಲ ಅಜ್ಜನಾದರು. ಇಡೀ ಕಂಪನಿ ಒಂದು ಕುಟುಂಬವಾಯಿತು. ಅಲ್ಲಿ ಬೇರೆ ಬೇರೆ ಜಾತಿ-ಮತಗಳ ಜನರಿದ್ದರು. ಆದರೆ ಶಾಸ್ತ್ರಿಗಳಿಗೆ ಎಲ್ಲರೂ ಬಂಧುಗಳೇ, ದುಃಖವನ್ನು, ಕಷ್ಟವನ್ನು ಎಲ್ಲರೊಡನೆ ಹಂಚಿಕೊಂಡಂತೆ, ಸಂತೋಷವನ್ನು, ಸುಖವನ್ನು ಕೂಡ ಸಮಾನವಾಗಿ ಹಂಚಿಕೊಂಡರು. ಕಂಪನಿಯ ಹಾಗೂ ಅದರಲ್ಲಿ ದುಡಿಯುವ ಜನರ ಹಿತಾಸಕ್ತಿಯ ರಕ್ಷಣೆಗಾಗಿ ಅವರು ಏನೂ ಮಾಡಲೂ ಸಿದ್ಧರಿದ್ದರು. ಅಷ್ಟೊಂದು ಜನರ ಜೀವನದ ಜವಾಬ್ದಾರಿಯನ್ನು ಅವರು ಎಂದೂ ಲಘುವಾಗಿ ಗಣಿಸಲಿಲ್ಲ. ಶಾಸ್ತ್ರಿಗಳು ದೋಷಾತೀತರೆಂದೇನೂ ಅಲ್ಲ. ಆದರೆ ಎಲ್ಲ ದೋಷ-ದೌರ್ಬಲ್ಯಗಳನ್ನು ಮೀರಿದ ಮನುಷ್ಯ ಪ್ರೀತಿ-ವಿಶ್ವಾಸಗಳೇ ಅವರನ್ನು ಜನರು ಗೌರವದಿಂದ ಕಾಣುವಂತೆ ಮಾಡಿದವು. ಸಂಕಷ್ಟಗಳು ಬಂದಾಗೆಲ್ಲ ಯಾರು ಯಾರೋ ಅಪದ್ಬಾಂಧವರಂತೆ ಬಂದು ಕಾಪಾಡಿದರು. ಬಹುಶಃ ಈ ಬಗೆಯ ಹಲವು ಆಘಾತಗಳಿಂದ ಅವರು ಹಣ್ಣಾಗಿ ಮಾಗಿ ಸಿಹಿಯಾದರು. ತಾವು ಕಹಿಯನ್ನೆಲ್ಲ ನುಂಗಿ ರಂಗದ ಮೇಲೂ ಹೊರಗೂ ಸಿಹಿಯನ್ನೇ ನೀಡಿದರು. ನಾಟಕವಷ್ಟೇ ಅಲ್ಲ, ಅವರ ಪಾಲಿಗೆ ಜೀವನವೇ ಒಂದು ಕತೆಯಾಯಿತು. ಕುತೂಹಲದಿಂದ ಅಧ್ಯಯನ ಮಾಡುವವರಿಗೆ ಅವರ ಜೀವನವೂ ಒಂದು ನಾಟಕದಷ್ಟೇ ವಿಸ್ಮಯಕಾರಿಯಾಗಿಯೂ ತೋರಬಹುದು.

ಅಂತೂ ಸಿದ್ಧಾಪುರಕ್ಕೆ ಬರುವಷ್ಟರಲ್ಲಿ ಹೈರಾಣಾದರೂ, ಹುಟ್ಟಿದ ನೆಲದಲ್ಲಿ ಥಿಯೇಟರು ಕಟ್ಟಿ ನಾಟಕವಾಡುವ ಹುಮ್ಮಸ್ಸು ತುಂಬಿ ಎಲ್ಲವನ್ನೂ ಮರೆಸಿಬಿಟ್ಟಿತ್ತು. ಸಿದ್ಧಾಪುರಕ್ಕೆ ಕಂಪನಿಯೊಂದಿಗೆ ಅವರು ಬಂದದ್ದು ಇದು ಎರಡನೆಯ ಬಾರಿ. ಅಂದು ತೀರ ಬಡಕಂಪನಿಯಿತ್ತು. ಅನನುಭವಿಗಳಾದ ನಟರಿದ್ದರು. ಇಂದು ಹಾಗಲ್ಲ. ತಮ್ಮ ಊರಿನ ಹುಡುಗನ ಸಾಧನೆಯನ್ನು ಮೆಚ್ಚಿ ಹೊಗಳುವಷ್ಟು, ಕಂಪನಿ ಸಮೃದ್ಧವಾಗಿತ್ತು. ಬಗೆಬಗೆಯ ಆಘಾತಗಳಿಂದ ತತ್ತರಿಸಿದ್ದ 'ಜಯಕರ್ನಾಟಕ ನಾಟಕ ಸಂಘ' ಶಾಸ್ತ್ರಿಗಳ ತವರಿನಲ್ಲಿ ತಂಪನ್ನು ಅನುಭವಿಸಿ ಸಂತಸಪಟ್ಟಿತು. 'ಟಿಪ್ಪು ಸುಲ್ತಾನ' ನಾಟಕವೂ ಸೇರಿದಂತೆ ವಿಭಿನ್ನ ಬಗೆಯ ನಾಟಕಗಳನ್ನು ನೋಡಿ ಜನರು ನಲಿದರು. ಆದಾಯವೂ ತಕ್ಕಮಟ್ಟಿಗೆ ಹೆಚ್ಚಿತು. ಆದರೆ ಸಿದ್ಧಾಪುರ ಚಿಕ್ಕ ಊರು. 120 ಜನರ ಕಂಪನಿಯನ್ನು ಮಳೆಗಾಲದಲ್ಲಿಯೂ ಸಾಕುವಷ್ಟು, ಶಕ್ತಿಯಾಗಲಿ, ಸಂಖ್ಯಾಬಲವಾಗಲಿ ಇರಲಿಲ್ಲ. ಹಾಗಾಗಿ ಮಳೆಗಾಲಕ್ಕೆ ಕಂಪನಿ ಶಿರಸಿಯನ್ನು ಸೇರಿತು. ಅಲ್ಲಿ ಒಂದೆರಡು ಹೊಸ ನಾಟಕಗಳು ರಂಗಕ್ಕೆ ಬಂದವು. ಪಂಡಿತ ಕವಲಿಯವರ 'ಶ್ರೀಮತಿ ಪರಿಣಯ' ಅವುಗಳಲ್ಲೊಂದು. ಇನ್ನೊಂದು ಶಾಸ್ತ್ರಿಗಳೇ ಬರೆದ 'ಧರ್ಮ ಸಾಮ್ರಾಜ್ಯ' ನಾಟಕ. ಮಹಾಭಾರತಕ್ಕೆ ಸೇರಿದ ಪೌರಾಣಿಕ ವಸ್ತುವಾದರೂ, ಸಮಕಾಲೀನ ಸಾಮಾಜಿಕ ವಿಶ್ಲೇಷಣೆಯನ್ನು ಶಾಸ್ತ್ರಿಗಳು 'ಧರ್ಮ ಸಾಮ್ರಾಜ್ಯ' ನಾಟಕದ ಮೂಲಕ

ಮಾಡುತ್ತಿದ್ದರು. ಅವರ ಪಾಲಿಗೆ ಕಲೆ ಕೇವಲ ಹೊಟ್ಟೆಪಾಡಿನ ಉಪಕರಣವಲ್ಲ. ಅಥವಾ ಕೇವಲ ಜೀವನದ ಅನುಕರಣೆಯಾಗಿ ಖುಷಿ ನೀಡುವ ಸಾಧನ ಮಾತ್ರವಲ್ಲ. ಕಲೆಗೂ ಒಂದು ಸಾಮಾಜಿಕ ಜವಾಬ್ದಾರಿಯಿದೆ - ಎಂದು ಶಾಸ್ತ್ರಿಗಳು ಭಾವಿಸಿದ್ದರು. ಹಾಗಾಗಿ ವಿನೋದವೋ ವಿಷಾದವೋ, ಪೌರಾಣಿಕವೋ ಐತಿಹಾಸಿಕವೋ, ಎಲ್ಲ ನಾಟಕಗಳಲ್ಲಿಯೂ ದೇಶ-ಕಾಲಗಳನ್ನು ಮೀರಿ ನಿಲ್ಲುವ ತಾತ್ವಿಕ ಚಿಂತನೆಯನ್ನು ಅವರು ಕೆನೆಗಟ್ಟಿಸಿ ಕೊಡುತ್ತಿದ್ದರು. ಈ ಕಾಯಕದಲ್ಲಿ ಶಾಸ್ತ್ರಿಗಳು ಇತರ ಅನೇಕ ಸಮಕಾಲೀನ ನಟರಿಗಿಂತ ಹೆಚ್ಚು ಯಶಸ್ವಿಯಾಗಿದ್ದರು. ಯಾಕೆಂದರೆ ಯಕ್ಷಗಾನದಂತಹ ಒಂದು ಅದ್ಭುತ ಕಲಾ ಪ್ರಕಾರದ ಮೂಲ ಸತ್ವವನ್ನು ಶಾಸ್ತ್ರಿಗಳು ಅರಗಿಸಿಕೊಂಡಿದ್ದರು.

ಶಿರಸಿ ಮುಕ್ಕಾಮು ಅವರ ನಿರೀಕ್ಷೆಯಷ್ಟು ಫಲಪ್ರದವಾಗಲಿಲ್ಲ, ಬದಲಿಗೆ ಸಾಲ ಹೆಚ್ಚಿತು. ಇಲ್ಲಿಂದಲೇ ಅವರ ಕಂಪನಿಯ ಇಳಿಗಾಲ ಪ್ರಾರಂಭವಾಯಿತೆಂದರೂ ಸರಿಯೇ. ಮುಂದೆ ಕಂಪನಿ ತೀರ್ಥಹಳ್ಳಿ, ಶೃಂಗೇರಿ, ಹೀಗೆ ಅನೇಕ ಊರುಗಳಲ್ಲಿ ಅದೃಷ್ಟವನ್ನು ಪರೀಕ್ಷಿಸಿಕೊಳ್ಳುತ್ತ 1948ರಲ್ಲಿ ಅದವಾನಿಗೆ ಹೋಗುವ ಹೊತ್ತಿಗೆ ಮಿತಿ ಮೀರಿ ಸಾಲದ ಹೊರೆ ಬೆಳೆದಿತ್ತು. ಖರ್ಚಿಗೆ ತಕ್ಕ ಉತ್ಪನ್ನವಿರಲಿಲ್ಲ. ಏನು ಮಾಡಲೂ ತೋಚದೆ ಇರುವ ಸ್ಥಿತಿ. ಆಗ ಅಕಸ್ಮಾತ್ ರಾಯಚೂರು ಜಿಲ್ಲಾ ಕಲೆಕ್ಟರ್ ಪಿ. ಮಾಧವರಾವ್ ಒಂದು ದಿನ ನಾಟಕ ನೋಡಲು ಬಂದರು. ಮೊದಲಿನಿಂದಲೂ ಶಾಸ್ತ್ರಿಗಳ ಪರಿಚಿತರೂ ಹಿತೈಷಿಗಳೂ ಆಗಿದ್ದ ಅವರು ರಾಯಚೂರಿಗೆ ಕಂಪನಿಯನ್ನು ತರುವಂತೆ ಆಹ್ವಾನ ನೀಡಿದರು.

## ಅನಿರೀಕ್ಷಿತ ಆಘಾತ

ಅದವಾನಿಯಲ್ಲಿ ಮಾಡಿದ ಸಾಲದಿಂದಾಗಿ ಕಂಪನಿಯನ್ನು ಅಲ್ಲಿಂದ ಕೀಳುವಂತಿರಲಿಲ್ಲ. ಕಲೆಕ್ಟರ್‌ರ ಮಾತಿನಿಂದ ಅವರೊಬ್ಬರೇ ರಾಯಚೂರಿಗೆ ಹೋದರು. ಜಿಲ್ಲಾಧಿಕಾರಿಗಳು ತಮ್ಮ ಪ್ರಭಾವ ಬಳಸಿಕೊಂಡು ಹತ್ತಾರು ಜನ ಗಣ್ಯರನ್ನು ಸೇರಿಸಿ ಸಭೆ ಮಾಡಿ ಹಣ ಸಂಗ್ರಹಿಸಿಕೊಟ್ಟು ಅದವಾನಿಯ ಸಾಲ ತೀರಿಸಿ ಅಲ್ಲಿಗೆ ಬರಲು ಹೇಳಿದರು. ಮರಳಿ ಬಂದ ಅನಂತರ ಅದವಾನಿಯಲ್ಲಿ ಒಂದು ವಾರ ಕಳೆಯಿತು. ಅತ್ತ ರಾಯಚೂರಿನಲ್ಲಿ ಪರಿಸ್ಥಿತಿ ದಿನದಿನಕ್ಕೂ ಉಲ್ಬಣಗೊಳ್ಳುತ್ತಿತ್ತು.

ಹೈದರಾಬಾದ್ ಆಗ ನಿಜಾಮರ ಕೈಯಲ್ಲಿತ್ತು. ಅದನ್ನು ಮುಕ್ತಗೊಳಿಸಿ ಸ್ವತಂತ್ರ ಭಾರತದ ಅಂಗವಾಗಿ ಮಾಡುವ ಬಗ್ಗೆ ಮಾತುಕತೆಗಳಲ್ಲಿ - ಒಪ್ಪಂದಗಳು ನಡೆದಿದ್ದರೂ ಕಾರ್ಯರೂಪಕ್ಕೆ ಬಂದಿರಲಿಲ್ಲ. ಉತ್ತರ ಕರ್ನಾಟಕದ ಗಡಿಭಾಗದಿಂದ ಅನೇಕ ಜನ ಸತ್ಯಾಗ್ರಹಿಗಳು ಹೈದರಾಬಾದಿಗೆ ಹೋಗುತ್ತಿದ್ದರು. ಅವರಿಗೆ ಬೇಕಾದ ಸಹಾಯ - ನಿಧಿ ಸಂಗ್ರಹ ಕಾರ್ಯಗಳು ಅಲ್ಲಲ್ಲಿ ನಡೆದಿದ್ದವು. ಅದವಾನಿಯಲ್ಲಿ ಕಂಪನಿ ಇರುವಾಗ ಶಾಸ್ತ್ರಿಗಳು ಈ ಸ್ವಯಂ ಸೇವಕರಿಗೆ ಸಹಾಯ ಮಾಡುತ್ತಿದ್ದರು.

ಅವರಿಗಾಗಿಯೇ ಮತ್ತೆ ಎರಡು ಬೆನ್‌ಫಿಟ್ ಶೋ ಆಡಬೇಕಾಯಿತು. ಹೀಗಾಗಿ ಎಂಟು ಹತ್ತು ದಿನಗಳು ಕಳೆದವು.

ರಾಯಚೂರು ರಜಾಕಾರರ ನೆಲೆಯಾಗಿತ್ತು. ಹೈದರಾಬಾದನ್ನು ಬಿಟ್ಟುಕೊಡಲು ಒಪ್ಪದ ಅವರು ದಂಗೆಯೆಬ್ಬಿಸಲು ಸಮಯ ಕಾಯುತ್ತಿದ್ದರು, ನೆಪ ಹುಡುಕುತ್ತಿದ್ದರು. ಆಕ್ರಮಣ -ದೊಂಬಿ -ಹಿಂಸೆ ಸ್ಫೋಟಗೊಳ್ಳಲು ಒಳಗೊಳಗೇ ಸಿದ್ಧತೆ ನಡೆಯುತ್ತಿತ್ತು. ಈ ಯಾವ ಸಂಗತಿಯೂ ಶಾಸ್ತ್ರಿಗಳಿಗೆ ಗೊತ್ತಿರಲಿಲ್ಲ. ಆದವಾನಿ ಬಿಟ್ಟು ರಾಯಚೂರಿಗೆ ತಲುಪುವ ವೇಳೆಗೆ ಅಲ್ಲಿ ವಿಪ್ಲವ ಪ್ರಾರಂಭವಾಗಿತ್ತು. ಅಂಗಡಿಗಳ ಲೂಟಿ, ಬೆಂಕಿ - ಹಚ್ಚುವಿಕೆ ಮಹಿಳೆಯರ ಮಾನಭಂಗ ಅಲ್ಲಲ್ಲಿ ನಡೆದಿದ್ದವು. ರಾಯಚೂರು ಸ್ಟೇಶನ್ನಿನಲ್ಲಿ ಇಳಿದಾಗ ಈ ಸುದ್ದಿ ತಿಳಿಯುತ್ತಲೇ ಹೇಗೋ ಒಂದು ಮನೆ ಮಾಡಿ ಎಲ್ಲರನ್ನೂ ಅಲ್ಲಿ ಉಳಿಸಲಾಯಿತು. ಲಕ್ಷಾಂತರ ರೂಪಾಯಿಯ ಸಾಮಗ್ರಿಗಳನ್ನು ಒಂದು ಗೋದಾಮಿನಲ್ಲಿಟ್ಟು ಬೀಗ ಹಾಕಲಾಯಿತು. ನಾಟಕಗಳನ್ನು ಆಡುವುದಿರಲಿ, ಆಹಾರಕ್ಕಾಗಿ ಮನೆಯಿಂದ ಹೊರಬೀಳುವುದೂ ಸಾಧ್ಯವಿಲ್ಲದಷ್ಟು ಪರಿಸ್ಥಿತಿ ಭೀಕರವಾಗಿತ್ತು. ಲೂಟಿ, ಹೆಣ್ಣುಮಕ್ಕಳ ಮಾನಾಪಹರಣದ ಭಯ ಎಲ್ಲರನ್ನೂ ಕಾಡುತ್ತಿತ್ತು. ನಾಟಕ ಕಂಪನಿಯಲ್ಲಿ 8-10 ಜನ ಹೆಂಗಸರಿದ್ದರು. ಅವರ ರಕ್ಷಣೆ ಹೇಗೆ? ಹಸಿದ ಹೊಟ್ಟೆಗೆ ಅನ್ನ ಹೇಗೆ! ಅಡುಗೆ ಮಾಡಲು ಕಟ್ಟಿಗೆ ಕೂಡ ದೊರೆಯದ ದುಸ್ಥಿತಿ. ಮರಳಿ ಹೋಗೋಣವೆಂದರೆ ಅದೂ ಸಾಧ್ಯವಿಲ್ಲದ ಸ್ಥಿತಿ. ಜೊತೆಗೆ ಕೈಯೆಲ್ಲ ಬರಿದಾಗಿತ್ತು. ಉಪವಾಸ ಸಾಯುವುದನ್ನು ಬಿಟ್ಟರೆ ಬೇರೆ ದಾರಿ ಕಾಣಲಿಲ್ಲ.

ಜಯ ಕರ್ನಾಟಕ ನಾಟಕ ಮಂಡಳಿ ಅನೇಕ ಬಿಕ್ಕಟ್ಟುಗಳನ್ನು ಎದುರಿಸಿ ಬದುಕಿ ಬಂದಿತ್ತು. ಆದರೆ ಇಂದಿನ ಸ್ಥಿತಿ ಹಿಂದೆಂದಿಗಿಂತ ಭಿನ್ನವಾಗಿತ್ತು. ಸ್ವಯಂ ಶಾಸ್ತ್ರಿಗಳೇ ಆತ್ಮವಿಶ್ವಾಸವನ್ನು ಕಳೆದುಕೊಂಡಂತಿದ್ದ ಸ್ಥಿತಿ ಅದು. ಯಾಕೆಂದರೆ ಹಣಕ್ಕಿಂತ ಮಾನ -ಪ್ರಾಣ ದೊಡ್ಡವು. ಒಮ್ಮೆ ಕಳೆದುಕೊಂಡರೆ ಮತ್ತೆ ಪಡೆಯಲಾಗದ ಅವುಗಳಿಗೆ ಅಪಾಯ ಬಂದೊದಗಿತ್ತು. ದುರದೃಷ್ಟದ ಸಂಗತಿಯೆಂದರೆ ಅವರಿಂದ ಉಪಕೃತರಾದ ಕಂಪನಿಯ ಜನರೇ ಅವರನ್ನು ಅಸಹನೀಯವಾದ ಮಾತುಗಳಿಂದ ನಿಂದಿಸತೊಡಗಿದರು. ಈ ಎಲ್ಲ ಕಠಿಣ ಸ್ಥಿತಿಗೆ ಅವರನ್ನೇ ಹೊಣೆಗಾರರನ್ನಾಗಿ ಮಾಡಿ ಬಾಯಿಗೆ ಬಂದಂತೆ ಆಡಿಕೊಳ್ಳತೊಡಗಿದರು. ಯಜಮಾನರು ಸಾಗುವ ದಾರಿ ಯಾವಾಗಲೂ ಕತ್ತಿಯ ಮೇಲಿನದೇ. ಗೆದ್ದರೆ ಅದರಲ್ಲಿ ಪಾಲು ಹಿಡಿಯಲು ಹಕ್ಕುದಾರರು ಅನೇಕರಿರುತ್ತಾರೆ. ಸೋಲಿನ ಕ್ಷಣಗಳಲ್ಲಿ ಎಲ್ಲರೂ ಯಜಮಾನನನ್ನು ಭರ್ತ್ಸನೆ ಮಾಡುವವರೇ. ಹೀಗಾಗಿ ಹೊರಗಿನ ಸ್ಥಿತಿಗಿಂತ ಒಳಗಿನ ಸ್ಥಿತಿ ಮತ್ತಷ್ಟು ಅಸಹನೀಯವಾಯಿತು.

ಧೈರ್ಯದಿಂದ ಸಂಜೆಯ ವೇಳೆಗೆ ಶಾಸ್ತ್ರಿಗಳು ಹೊರಬಿದ್ದರು. ವ್ಯಕ್ತಿಗತವಾಗಿ ಏನೇ ನಷ್ಟವಾಗಲಿ, ಕಷ್ಟ ಬರಲಿ, ತನ್ನನ್ನು ನಂಬಿದವರ ಕೂದಲೂ ಕೊಂಕದಂತೆ ಬಚಾವು ಮಾಡಲು

ದಾರಿ ಹುಡುಕಲು ಹೊರಟಿದ್ದರು. ಅಕಸ್ಮಾತ್ ಸಿಕ್ಕ ಒಬ್ಬ ಮುಸ್ಲಿಂ ತರುಣ ಅವರ ಪಾಲಿಗೆ ದೇವರಂತೆ ಬಂದ. ಅವನೇ ಉಪಾಯವನ್ನು ಹೇಳಿಕೊಟ್ಟು ನೆರವು ನೀಡಲು ಸಮ್ಮತಿಸಿದ. ಅವನ ಮೂಲಕ ಅರ್ಧ ಬೆಲೆಗೆ ಕಂಪನಿಯ ಎರಡೂ ಡೈನಮೋಗಳನ್ನೂ ಮಾರಾಟ ಮಾಡಿ 3000 ರೂಪಾಯಿ ಪಡೆದು, ಅಲ್ಲಿಂದ ಎಲ್ಲರೂ ರೇಲ್ವೆ ಸ್ಟೇಶನ್ನಿಗೆ ಹೋಗುವ ಪ್ಲಾನ್ ಮಾಡಲಾಯಿತು. ಆದರೆ ಹೆಂಗಸರಾರೂ ರಸ್ತೆಯಲ್ಲಿ ಹೋಗುವಂತಿರಲಿಲ್ಲ. ಹಾಗಾಗಿ ಎಲ್ಲ ಹೆಂಗಸರಿಗೂ ಗಂಡಸರ ಡ್ರೆಸ್ ಹಾಕಲಾಯಿತು. ಪಂಚೆ-ಅಂಗಿ-ರುಮಾಲು ಧರಿಸಿ ಕತ್ತಲಾಗುತ್ತಿದ್ದಂತೆ ನಿಧಾನವಾಗಿ ಒಬ್ಬೊಬ್ಬರೇ ಸ್ಟೇಶನ್ನಿನ ದಾರಿ ಹಿಡಿದರು. ಸ್ಟೇಶನ್ ಇನ್ನೂ ದೂರುವಿರುವಾಗಲೇ ರಜಾಕಾರರ ದಂಡು ಪಂಜು ಹಿಡಿದು ಕೂಗುತ್ತ ಬರುವುದನ್ನು ಕಂಡು ಜೀವ ತಲ್ಲಣಗೊಂಡಿತು. ಮನೆಯಿಂದ ತಪ್ಪಿಸಿಕೊಂಡು ಹೊರಬಿದ್ದ ಕೆಲವು ನಿಮಿಷಗಳಲ್ಲಿ ರಜಾಕಾರರು ಕಂಪನಿಯವರು ಉಳಿದುಕೊಂಡಿದ್ದ ಮನೆಯ ಮೇಲೆ ಆಕ್ರಮಣ ಮಾಡಿದರು. ಅಲ್ಲಿದ್ದ ಹೆಂಗಸರು ತಪ್ಪಿಸಿಕೊಂಡಿರುವುದು ಅವರ ರೋಷವನ್ನು ಹೆಚ್ಚಿಸಿತ್ತು. ಲಕ್ಷಾಂತರ ರೂಪಾಯಿ ಬೆಲೆ ಬಾಳುವ ರಂಗಭೂಮಿಯ ಸಾಮಗ್ರಿಗಳನ್ನು ಬೆಂಕಿಹಚ್ಚಿ ಸುಟ್ಟು ಹಾಕಿ, ಇವರನ್ನು ಹುಡುಕುತ್ತ ಬೆನ್ನು ಹತ್ತಿದ್ದರು. ಶಾಸ್ತ್ರಿಗಳು ಎಲ್ಲರಿಗೂ ಕೂಗಿ ಹೇಳಿದರು - 'ಬೇರೆ ದಾರಿಯಿಲ್ಲ, ಸರ್ವ ಶಕ್ತಿ ಹಾಕಿ - ಓಡಿರಿ, ಸ್ಟೇಶನ್ ಒಳಗೆ ಹೋಗುವವರೆಗೂ ನಿಲ್ಲಬೇಡಿ'.

ಎಲ್ಲರೂ ಓಡಿದ್ದೇ. ಸ್ಟೇಶನ್ ಮುಟ್ಟುವ ವೇಳೆಗೆ ಮಧ್ಯರಾತ್ರಿ, ಎಲ್ಲರೂ ಅರೆಜೀವವಾಗಿದ್ದರು. ಕಾವಲು ಪೋಲೀಸಿನವರಿಗೆ ದಯನೀಯ ಸ್ಥಿತಿ ವಿವರಿಸಿ ಒಳಗೆ ಹೋದರೆ ಪ್ಯಾಸೆಂಜರ್ ರೈಲು ಬರಲು ಇನ್ನೂ ತುಂಬ ತಡವಿತ್ತು. ಇವರಿಗೆ ಒಂದು ಕ್ಷಣವೂ ಅಲ್ಲಿ ನಿಲ್ಲಲಾಗದ ಚಡಪಡಿಕೆ. ಯಾವ ಕ್ಷಣದಲ್ಲಿ ಏನಾದೀತೋ ಎಂಬ ಭಯ, ಅಷ್ಟರಲ್ಲಿ ಒಂದು ಗೂಡ್ಸ್‌ಗಾಡಿ ಬಂತು. ಅದರಲ್ಲಿ ಕುದುರೆಗಳನ್ನು ತುಂಬುವ ಡಬ್ಬಿ ತೆರವಾಗಿತ್ತು. ಸ್ಟೇಶನ್ ಮಾಸ್ತರರ ಕಾಲಿಗೆ ಬಿದ್ದು ಬೇಡಿಕೊಂಡು ಆ ಡಬ್ಬಿಯನ್ನು ಹತ್ತಿ ಎಲ್ಲರೂ ನಿಂತುಕೊಂಡರು. ಆ ಡಬ್ಬಿಯಲ್ಲಿ ಕೂರುವಂತಿರಲಿಲ್ಲ. ಕೂರಲು ಸ್ಥಳವೂ ಇರಲಿಲ್ಲ. ಅದೊಂದು ಬಗೆಯ ಯಮಯಾತನೆ. ಜೀವವುಳಿದರೆ ಸಾಕೆಂಬ ಸ್ಥಿತಿಯಲ್ಲಿ ಇದನ್ನೆಲ್ಲ ಲೆಕ್ಕಿಸುತ್ತ ಕೂರಲು ಅವಕಾಶವೆಲ್ಲಿ? ಅಂತೂ ಗುಂತಕಲ್ ಸ್ಟೇಶನ್ ತಲುಪಿದಾಗ ಮರುದಿನ ಬೆಳಗಿನ 9 ಗಂಟೆ. ಮರುಜನ್ಮವೇ ದೊರೆತ ಅನುಭವ.

ಶಾಸ್ತ್ರಿಗಳು ಶೂನ್ಯದಲ್ಲಿ ದೃಷ್ಟಿ ನೆಟ್ಟು ಕೂತಿದ್ದರು. ಅವರ ಕಂಪನಿಯ ಜನ ಬೆಳಗಿನ ಅವಶ್ಯಕತೆಗಳನ್ನು ಮುಗಿಸಿಕೊಂಡು, ಹೋಟೆಲ್‌ನಲ್ಲಿ ತಿಂಡಿ ತಿಂದು ಒಂದು ಕಡೆ ಸೇರಿದರು. ಶಾಸ್ತ್ರಿಗಳು ಗದ್ಗದ ಕಂಠದಿಂದ ಹೇಳಿದರು - 'ನೋಡಿ, ನೀವೆಲ್ಲ ಬದುಕಿ ಬಂದಿದ್ದರಿಂದ ನನಗೆ ಸಂತೋಷವಾಗಿದೆ. ಇಷ್ಟು ದಿನ ನಾವೆಲ್ಲ ಒಂದು ಕುಟುಂಬದ ಹಾಗೆ ಒಟ್ಟಿಗೆ ಇದ್ದೆವು. ಈಗ

ಕಂಪನಿ ಮುಳುಗಿದೆ. ನನ್ನ ಶಕ್ತಿಯೆಲ್ಲ ಉಡುಗಿ ಹೋಗಿದೆ. ಸದ್ಯಕ್ಕೆ ನಿಮ್ಮನ್ನೆಲ್ಲ ಊರಿಗೆ ಬೀಳ್ಕೊಡದೆ ನನಗೆ ದಾರಿಯಿಲ್ಲ. ಎಂದಾದರೊಮ್ಮೆ ಸಾಧ್ಯವಾದರೆ ಮತ್ತೆ ಸೇರೋಣ' ಎಂದು ಹೇಳಿ ಅವರವರ ಊರಿಗೆ ಹೋಗುವ ವೆಚ್ಚವನ್ನು ಲೆಕ್ಕ ಹಾಕಿ ಅದಕ್ಕಿಂತ ತುಸು ಹೆಚ್ಚಿಗೆ ಹಣವನ್ನೇ ಎಲ್ಲರಿಗೂ ಕೊಟ್ಟರು. ಒಬ್ಬೊಬ್ಬರಾಗಿ ಮಾತೇ ಇಲ್ಲದೇ ಹೊರಟು ಹೋಗತೊಡಗಿದರು. ಕೊನೆಯಲ್ಲಿ ಉಳಿದಿದ್ದು ಶಾಸ್ತ್ರಿಗಳೊಬ್ಬರೇ, ಶಾಸ್ತ್ರಿಗಳನ್ನು ಬಿಟ್ಟು ಹೋಗುವಾ, ಇಷ್ಟು ದಿನ ಅವರಿಂದಲೇ ಪೋಷಿತರಾಗಿದ್ದ ನಟರು ಕೆಲಸಗಾರರಿಗೆಲ್ಲ ಮನಸ್ಸಿನಲ್ಲಾದರೂ ಶಾಸ್ತ್ರಿಗಳ ಬಗ್ಗೆ ಕನಿಕರವುಂಟಾಗಿತ್ತೋ ಇಲ್ಲವೋ ತಿಳಿಯದು. ಆದರೆ ಪ್ರಕಟವಾಗಿ ಯಾರೂ 'ಮುಂದೆ ನಿಮ್ಮ ಸ್ಥಿತಿ ಏನು ಶಾಸ್ತ್ರಿಗಳೇ? ನೀವು ಎಲ್ಲಿಗೆ ಹೋಗುತ್ತೀರಿ? ಹೇಗೆ ಬದುಕುತ್ತೀರಿ?'.... ಎಂದು ಕೇಳಲಿಲ್ಲ. ಸಹಾನುಭೂತಿಯ ಒಂದು ಮಾತೂ ಹೊರಡಲಿಲ್ಲ. ತನ್ನನ್ನು ನಂಬಿದವರಿಗಾಗಿ ಅವಮಾನಗಳನ್ನು, ಸಂಕಟಗಳನ್ನು ಎದುರಿಸಿ ಛಲದಿಂದ ಬಾಳಿದ್ದರೋ, ಅವರೇ ಈಗ ಬೆನ್ನು ತಿರುಗಿಸಿ ಹೊರಟಿದ್ದರು. ಅದಕ್ಕೆಲ್ಲ ವೇದನೆ ಪಡಲಾರದಷ್ಟು ಮನಸ್ಸು ಕಲ್ಲಾಗಿತ್ತು ಶಾಸ್ತ್ರಿಗಳಿಗೆ. ಲಕ್ಷಾಂತರ ರೂಪಾಯಿಯಗಳ ಸೊತ್ತು ಸುಟ್ಟು ಭಸ್ಮವಾಗಿ, ಜೀವಿತದ ಸಾಧನೆಯೆಲ್ಲ ನಷ್ಟವಾಗಿ, ಕನಸುಗಳೆಲ್ಲ ಉರಿದು ಹೋಗಿದ್ದವು. ಅಕ್ಷರಶಃ ಈಗ ಅವರು ಒಂಟಿಯಾಗಿ ಅನಾಥರಾಗಿ ಕೂತಿದ್ದರು. ಅವರಿಗೆ ಊರು, ಮನೆ, ಬಂಧುಗಳು ಎಲ್ಲರೂ ಇದ್ದರು ನಿಜ. ಆದರೆ ಅವರ ಸಂಪರ್ಕ ಒಡನಾಟವೆಲ್ಲ ಬಣ್ಣದ ಲೋಕದೊಡನೆ. ರಂಗಭೂಮಿಯ ನಂಟು ಬೆಳೆದ ಮೇಲೆ ಅದೇ ಅವರ ಬದುಕಿನ ಅಂಗಳವಾಗಿತ್ತು. ಸ್ವಂತ ಸಂಘವನ್ನು ಕಟ್ಟಿದ ಮೇಲಂತೂ ಯಜಮಾನರಾಗಿ ದೊಡ್ಡ ಸಂಸಾರಿಗಳಾಗಿಬಿಟ್ಟಿದ್ದರು. ಈಗ ಅದರದೂ ವ್ಯಾಮೋಹ ಕತ್ತರಿಸಿಬಿದ್ದಿತ್ತು. ಎಲ್ಲವನ್ನೂ ಕಳೆದುಕೊಂಡ ಹುಚ್ಚನ ಹಾಗೆ ವಿಸ್ಮೃತಿ ಆವರಿಸಿತ್ತು. ಸದಾ ಮಾತು, ನಗು, ಗದ್ದಲಗಳ ಮಧ್ಯೆ, ನಾಟಕದ ಯಶಸ್ಸಿನ ಆಲೋಚನೆ - ಜವಾಬ್ದಾರಿಗಳ ಮಧ್ಯೆ ಬದುಕಿದ್ದ ಮನುಷ್ಯನನ್ನು ಈಗ ಶೂನ್ಯ ಆವರಿಸಿತ್ತು. ಏಕಾಕಿತನವೇ ಸಹಿಸಲಾರದಷ್ಟು ಭಯಾನಕವಾಗಿತ್ತು. ಆತ್ಮಹತ್ಯೆಯ ಯೋಚನೆಯೂ ಸುಳಿಯಿತು.

ಮೌನವಾಗಿ ಮೂಲೆಯಲ್ಲಿ ಕೂತಿದ್ದ ಶಾಸ್ತ್ರಿಗಳ ಎದುರು, ಒಮ್ಮೆ ಇಡೀ ಜೀವನದ ಆವರೆಗಿನ ಅನುಭವದ ಚಿತ್ರಗಳೆಲ್ಲ ಮೂಡಿ ಮರೆಯಾದವು. ಒಮ್ಮೆ ವಿಸ್ಮಯ, ಮತ್ತೊಮ್ಮೆ ವಿಷಾದ ಮನಸ್ಸನ್ನು ತಟ್ಟಿತು. ಮುಂದೇನು ಮಾಡುವುದು ಎಂದು ತೋಚಲಿಲ್ಲ. ತೀವ್ರ ಕಷ್ಟದಲ್ಲಿ ನೆನಪಾಗುವುದು ಭಗವಂತನದು. ಎಲ್ಲರೂ ಕೈಬಿಟ್ಟರೂ ಆತನು ಕೈಬಿಡಲಾರನೆಂಬ ಹಂಬಲ. ಮಂತ್ರಾಲಯದ ರಾಘವೇಂದ್ರ ಯತಿಗಳಲ್ಲಿ ಶಾಸ್ತ್ರಿಗಳಿಗೆ ಅಪಾರ ಭಕ್ತಿ. ಅಲ್ಲಿಗೆ ಹೋಗಿ ಸೇವೆ ಸಲ್ಲಿಸೋಣವೆಂದು ರೈಲು ಹತ್ತಿದರು. ತುಂಗಭದ್ರಾ ಸ್ಟೇಶನ್ನಿನಲ್ಲಿ ಇಳಿದು ಮುಂದೆ ಹೋಗಬೇಕಾಗಿತ್ತು. ಸ್ಟೇಶನ್ನಿನಲ್ಲಿ ಇಳಿಯುತ್ತಿದ್ದಂತೆ ರಾಜಗೋಪಾಲಾಚಾರ್ಯ ಸಿಕ್ಕರು. ಅವರು

ಹಿಂದೆ ಶಾಸ್ತ್ರಿಗಳ ಕಂಪನಿಯಲ್ಲೇ ಮ್ಯಾನೇಜರ್ ಆಗಿದ್ದವರು. ಬಲವಂತ ಮಾಡಿ ಶಾಸ್ತ್ರಿಗಳನ್ನು ಮನೆಗೆ ಕರೆದೊಯ್ದರು. ಶಾಸ್ತ್ರಿಗಳಿಗೂ ವಿಶ್ರಾಂತಿ ಬೇಕಾಗಿತ್ತು. ಅವರಲ್ಲಿಯೇ ತಂಗಿದರು. ಅಂತೂ ದೇವರೇ ಕಾಪಾಡಿದ್ದ.

ತುಂಗಭದ್ರಾ ಸ್ಟೇಶನ್ ಸಮೀಪದಲ್ಲಿಯೇ ಹೈದ್ರಾಬಾದ್ ಪ್ರಾಂತ್ಯದ ಗಡಿಯಿತ್ತು. ಮರುದಿನ ಅಂದರೆ ಸೆಪ್ಟೆಂಬರ್ 16, 1948ರಂದು ಭಾರೀ ಗುಂಡಿನ ಸದ್ದು ಕೇಳಿಸತೊಡಗಿತು. ಭಾರತ ಸರಕಾರವು ಹೈದರಾಬಾದಿನ ಕಾಸಿಂರಜವಿ ನೇತೃತ್ವದ ಚಳವಳಿಯನ್ನು ಹತ್ತಿಕ್ಕಲು ಸೈನಿಕ ಕಾರ್ಯಾಚರಣೆ ಪ್ರಾರಂಭಿಸಿತ್ತು. ಸುಮಾರು ಒಂದು ವಾರ ನಡೆದ ಕದನದಲ್ಲಿ ನಿಜಾಮರ ಸೈನ್ಯವು ಶರಣಾಗಿ ಸೆಪ್ಟೆಂಬರ್ 18ರಂದು ಕಾಸಿಂ ರಜವಿ ಬಂಧನವಾಯಿತು. ಹೈದರಾಬಾದ್ ಸ್ವತಂತ್ರ ಭಾರತದ ಅಂಗವಾಗಿ ಹೋಯಿತು. ಆದರೆ ಅದೆಷ್ಟು ಜನ ಅಮಾಯಕರನ್ನು ಈ ಚಳವಳಿ ಬಲಿ ತೆಗೆದುಕೊಂಡಿತ್ತೋ, ಅದೆಷ್ಟು ಆಸ್ತಿ ಪಾಸ್ತಿ ನಷ್ಟವಾಗಿತ್ತೋ ಲೆಕ್ಕವಿರಲಿಲ್ಲ.

ಶಾಸ್ತ್ರಿಗಳು ಆಚಾರ್ಯರ ಮನೆಯಲ್ಲಿ ಎರಡು ಮೂರು ದಿನವಿದ್ದು, ಅನಂತರ ಅಲ್ಲಿ ಇರಲು ಮನ ಬಾರದೆ, ಅನಿವಾರ್ಯವಾಗಿ ಊರಿಗೆ ಹೊರಟರು. ಅಡಿಕೆಯ ತೋಟ - ಭತ್ತದ ಹೊಲಗಳು ಅವರನ್ನು ಸ್ವಾಗತಿಸಿದವು. ಆ ವೇಳೆಗೆ ಅವರ ಅಣ್ಣ ತಮ್ಮಂದಿರೆಲ್ಲ ವಿಭಾಗಗೊಂಡು ಬೇರೆ ಬೇರೆಯಾಗಿ ನೆಲೆಸಿದ್ದರು. ಶಾಸ್ತ್ರಿಗಳು ಅಣ್ಣ ಲಕ್ಷ್ಮೀನಾರಾಯಣನ ಮನೆಯನ್ನು ಸೇರಿದರು.

## ಇಳಿವಯಸ್ಸಿನಲ್ಲಿ ಹೋರಾಟ

ಹುಲಿಮನೆ ಸೇರಿದ ಮೇಲೆ ಅಣ್ಣನ ಮಕ್ಕಳ ಒಡನಾಟ, ದನಕರುಗಳ ಯೋಗಕ್ಷೇಮ, ತೋಟ ಗದ್ದೆಗಳಲ್ಲಿ ತಿರುಗಾಟ ಹೀಗೆ ಸಮಯವನ್ನು ಕಳೆಯುತ್ತಿದ್ದರು. ಬೇಡವೆಂದರೂ ಮನಸ್ಸು ಹಳೆಯ ನೆನಪುಗಳನ್ನು, ಅನುಭವಗಳನ್ನು ಕೆದಕುತ್ತಿತ್ತು. ರಂಗಭೂಮಿಯ ಒಲವನ್ನು ದೂರ ಮಾಡುವುದು ಅಸಾಧ್ಯವೆಂದೇ ತೋರಿತು. ಮನಸ್ಸಿಗಾದ ಗಾಯವು ತುಸು ಮಾಯ್ದ ಮೇಲೆ ಮತ್ತೆ ರಂಗಭೂಮಿಯ ಸೆಳೆತ ಶುರುವಾಯಿತು. ಈಗಲೂ ಪ್ರಯತ್ನ ಮಾಡಿದರೆ ಕಳೆದದ್ದನ್ನು ಮರಳಿ ಪಡೆಯಬಹುದೇ? ಆದರೆ ಬಂಡವಲು ಯಾರು ಹಾಕುವವರು? ಹಣವಿಲ್ಲದೆ ಯಾವ ಕೆಲಸ ನಡೆದೀತು? ಇಂಥ ಸ್ಥಿತಿಯಲ್ಲಿ ತನ್ನ ಮೇಲೆ ಭರವಸೆಯಿಟ್ಟು ಹಣ ಕೊಡುವವರಾದರೂ ಯಾರು? ಆಗ ನೆನಪಾದದ್ದು ದಕ್ಷಿಣ ಕನ್ನಡ - ಅದರಲ್ಲೂ ಟಿ. ಮಾಧವ ಪೈ. ರಂಗಭೂಮಿಯ ಏಳ್ಗೆಗಾಗಿ ಏನಾದರೂ ಮಾಡಬಹುದಾದರೆ ಅವರೊಬ್ಬರು ಮಾತ್ರ ಅನಿಸಿತು. ಉಡುಪಿಗೆ ಹೋಗಿ ಅವರನ್ನು ಕಂಡದ್ದೂ ಆಯಿತು. ಅವರು ಸಹಕಾರಕ್ಕೆ ಸಿದ್ಧವಾದರು. ಒಂದು ವಿಶ್ವಸ್ಥ ನಿಧಿ ಸಮಿತಿ ರಚನೆಯಾಯಿತು. 100-200 ರೂಪಾಯಿಗಳ ಷೇರು ವಿತರಣೆಯೂ ನಡೆಯಿತು. ಆದರೆ ಸಾಕಷ್ಟು

ಹಣ ಸೇರುವ ಮೊದಲೇ ಜಯ ಕರ್ನಾಟಕ ನಾಟಕ ಮಂಡಳಿಯನ್ನು ಪುನಃ ಪ್ರಾರಂಭಿಸುವ ಆತುರದ ನಿರ್ಣಯವನ್ನು ಶಾಸ್ತ್ರಿಗಳು ಕೈಗೊಂಡರು. ಜಗನ್ನಾಥರಾಯರ ಒತ್ತಾಯವೇ ಇದಕ್ಕೆ ಕಾರಣವಾಗಿತ್ತು.

1954ರ ಜನವರಿಯಲ್ಲಿ ತಾಳಗುಪ್ಪಾದಲ್ಲಿ ಮೊದಲ ನಾಟಕ ಆಡಿದರು. ಗಟ್ಟಿಯಾದ ಬುನಾದಿ ಇಲ್ಲದ ಸಂಘವು ಎಷ್ಟು ಕಾಲ ನಡೆದೀತು. ಸಾಗರ, ಬಸರೂರು, ಕುಂದಾಪುರಗಳಲ್ಲಿ ನಾಟಕವಾಡಿದರು. ಕಲಾವಿದರ ವೆಚ್ಚ, ಪ್ರಯಾಣ ವೆಚ್ಚ, ಥಿಯೇಟರ್ ವೆಚ್ಚಗಳನ್ನು ಹೊಂದಿಸುವುದು ಸಾಧ್ಯವಾಗದೇ ಹೋಯಿತು. ಸಾಲದ ಹೊರೆ ಹೆಚ್ಚಿತು. ಕಂಪನಿಯನ್ನು ಅಭಿವೃದ್ಧಿಪಡಿಸಿ, ಷೇರುದಾರರ ಷೇರುಗಳನ್ನು ಮರಳಿಸುವುದಿರಲಿ, ಕಲಾವಿದರನ್ನು ಸಾಕಲಾರದ ದುಃಸ್ಥಿತಿ ಉಂಟಾಯಿತು. ಮತ್ತೊಮ್ಮೆ ಶಾಸ್ತ್ರಿಗಳು ಸೋತಿದ್ದರು. ಆದರೆ ಅವರ ಪ್ರಾಮಾಣಿಕ ಪ್ರಯತ್ನವನ್ನು ಜನರು ಅರಿತಿದ್ದರು. ಹಾಗೂ ಎಲ್ಲರೂ ಅವರನ್ನು ಸಹಾನುಭೂತಿಯ ಮಾತುಗಳಿಂದ ಸಂತೈಸಿದರು. ಕಲಾವಿದರಿಗೆ ಊರಿಗೆ ಹೋಗುವ ವೆಚ್ಚವನ್ನು ನೀಡಲು ಶಾಸ್ತ್ರಿಗಳು ಸ್ನೇಹಿತರ ನೆರವನ್ನು ಪಡೆಯಬೇಕಾಯಿತು. ಇನ್ನು ಈ ದೈನ್ಯ ಬೇಡವೆಂದು ಜಯಕರ್ನಾಟಕ ನಾಟಕ ಮಂಡಳಿಯನ್ನು ಶಾಶ್ವತವಾಗಿ ಮುಚ್ಚಿಬಿಟ್ಟರು. 1954ರ ಜೂನ್ ತಿಂಗಳು ಅದು. ಸುಮಾರು 19-20 ವರ್ಷಗಳ ಕಾಲ ಸ್ವತಂತ್ರ ಕಂಪನಿಯಾಗಿ, ಜನರ ಪ್ರೀತಿ-ವಿಶ್ವಾಸಗಳನ್ನು ಗಳಿಸಿ, ಅನೇಕ ಕಲಾವಿದರಿಗೆ ಆಸರೆ ನೀಡಿದ್ದ ನಾಟಕ ಮಂಡಳಿ ಕೊನೆಯುಸಿರೆಳೆಯಿತು.

ಒಂಟಿಯಾಗಿ ಬದುಕಲಾರದ ಶಾಸ್ತ್ರಿಗಳು ಮತ್ತೆ ಮತ್ತೆ ಏಕಾಂಗಿಯಾಗುತ್ತಿದ್ದರು. ಜೀವನದ ಸಂಜೆಯಲ್ಲಿ ತನ್ನವರೆನ್ನುವವರು ಒಬ್ಬರೂ ಹತ್ತಿರವಿಲ್ಲದೇ, ಕಾಡುತ್ತಿರುವ ಅನಾರೋಗ್ಯದ ಒತ್ತಡವೂ ಸೇರಿ ಮನಸ್ಸನ್ನು ಖಿನ್ನಗೊಳಿಸುತ್ತಿತ್ತು. ಹಾಗಾಗಿ ಜೀವನದಲ್ಲಿ ಲವಲವಿಕೆಯನ್ನು ಉಳಿಸಿಕೊಳ್ಳಲು ರಂಗಭೂಮಿಯೊಂದಿಗಿನ ಸಂಪರ್ಕವನ್ನು ಅವರು ಏರ್ಪಡಿಸಿಕೊಳ್ಳದೇ ಬೇರೆ ದಾರಿಯಿರಲಿಲ್ಲ. ರಂಗಭೂಮಿಯೇ ಪ್ರಾಣವಾಗಿದ್ದ ಅವರು ಅದಿಲ್ಲದೇ ಉಸಿರಾಡುವುದೆಂತು? ಆದೇ ಹೊತ್ತಿಗೆ ಮುಂಬೈ ಕರ್ನಾಟಕ ಸಂಘದ ವಜ್ರ ಮಹೋತ್ಸವದಲ್ಲಿ ನಾಟಕವಾಡಲು ಕರೆ ಬಂತು. ಕೆಲವು ಕಲಾವಿದರನ್ನು ಕೂಡಿಕೊಂಡು ಅಲ್ಲಿಗೆ ಹೋಗಿ ಮೂರು ನಾಟಕಗಳನ್ನಾಡಿದರು. ಇದರಿಂದ ಹುಮ್ಮಸ್ಸು ಚಿಗುರಿತು. ಗಜಾನನ ನಾಟಕ ಸಂಘದ ಆಶ್ರಯದಲ್ಲಿ ನಿಂತು 4 ನಾಟಕಗಳನ್ನು ಬರೆದರು. ಜಿ.ವಿ. ಅಯ್ಯರ್ ಆಗ್ರಹಕ್ಕೆ ಮಣಿದು 'ಬಸವೇಶ್ವರ' ಚಲನಚಿತ್ರದಲ್ಲಿಯೂ ನಟಿಸಿದರು. ಅನಂತರದಲ್ಲಿನ ಅವರ ಕಲಾ ಜೀವನವೇನಿದ್ದರೂ ಅಲೆಮಾರಿಯದು. ಈ ಮಧ್ಯೆ ಅವರಿಗೆ ಸಂತೋಷ ಕೊಟ್ಟ ಸಂದರ್ಭವೆಂದರೆ ಭಾರತದ ರಾಷ್ಟ್ರಪತಿ ರಾಜೇಂದ್ರ ಪ್ರಸಾದರ ಸಮ್ಮುಖದಲ್ಲಿ ಅನೇಕ ಗಣ್ಯರ ಎದುರು 'ಟಿಪ್ಪೂ ಸುಲ್ತಾನ್' ಪಾತ್ರವನ್ನು ಅಭಿನಯಿಸಿ ಮೆಚ್ಚುಗೆ ಪಡೆದದ್ದು.

ಕನ್ನಡ ರಂಗಭೂಮಿಗಾಗಿ ಇಡೀ ಜೀವನವನ್ನೇ ತೆತ್ತುಕೊಂಡು, ನಾಟಕ ಸಂಘವನ್ನು ಕಟ್ಟಿ ಮೆರೆದು, ಎಲ್ಲವನ್ನೂ ಕಳೆದುಕೊಂಡು ಎಲ್ಲಿಯೂ ನೆಲೆಯಿಲ್ಲದೆ, ಆಧಾರವಿಲ್ಲದೆ ಮತ್ತೆ ಮರಳಿ ಸಿದ್ದಾಪುರಕ್ಕೆ ಬಂದರು. ಅದು ಬಹುಶಃ 1962ನೇ ಇಸವಿ. ತನ್ನದೆನ್ನುವ ಒಂದಿಂಚು ನೆಲವಾಗಲಿ, ಸ್ಥಿರ ಆದಾಯವಾಗಲಿ ಇಲ್ಲದ ಶಾಸ್ತ್ರಿಗಳಿಗೆ ನೆನಪಾದದ್ದು ತಮಗೆ ರಕ್ತಗತವಾಗಿ ಪರಂಪರೆಯಿಂದ ಬಂದ ಕೃಷಿ ಸಂಸ್ಕಾರ. ತುಂಡುಭೂಮಿ ಸಿಕ್ಕರೆ ಕೃಷಿ ಮಾಡಿಯಾದರೂ ಬದುಕಬಹುದೆಂಬ ಆಸೆಯಿಂದ ಅಲ್ಲಿ ಇಲ್ಲಿ ಅಲೆದಾಡಿದರು. ಕೈಯಲ್ಲಿ ಹಣವಿಲ್ಲದವರನ್ನು ಕೇಳುವವರಾರು? ಆಗ ಅವರಿಗೆ ನೆರವು ನೀಡಿದವರು ಗಣೇಶ ಹೆಗಡೆ ದೊಡ್ಮನೆಯವರು. ಕಲಾವಿದರು -ಸಾಹಿತಿಗಳು - ವಿದ್ವಾಂಸರುಗಳ ಬಗೆಗೆ ತುಂಬ ಆದರವನ್ನೂ ಗೌರವವನ್ನೂ ತೋರಿಸುತ್ತಿದ್ದ ಹೆಗಡೆಯವರು ಅನೇಕರಿಗೆ ಹಲವು ವಿಧದಲ್ಲಿ ಸಹಾಯ ಮಾಡುತ್ತ ಬಂದವರು. ಗಣೇಶ ಹೆಗಡೆಯವರೇ ಮುತುವರ್ಜಿ ವಹಿಸಿ ಸಿದ್ದಾಪುರದ ಬಳಿಯ ಒಡ್ಡಿನಗದ್ದೆ ಎಂಬಲ್ಲಿನ ಪಡಭೂಮಿಯನ್ನು 10 ವರ್ಷಗಳ ಗೇಣಿಗೆ ಹಾಕಿಸಿಕೊಟ್ಟರು.

'ಪಾಪಿ ಸಮುದ್ರ ಹೊಕ್ಕರೆ ಮೊಣಕಾಲು ನೀರು' ಎಂಬುದು ಒಂದು ಗಾದೆ. ಶಾಸ್ತ್ರಿಗಳು ಹೊಸ ಜೀವನದಲ್ಲಿ ತೊಡಗಿಸಿಕೊಳ್ಳಬೇಕೆನ್ನುವಷ್ಟರಲ್ಲಿ ಆ ಜಮೀನಿನ ಮಾಲೀಕನು ಅದನ್ನು ಕೃಷಿ ಮಾಡದಂತೆ ವಿರೋಧಿಸಿ ಕೋರ್ಟಿಗೆ ಹೋಗಿದ್ದರಿಂದ ಅಲೆದಾಟವಾಯಿತು. ಅಂತೂ 10 ವರ್ಷಗಳ ಮುದ್ದತ್ತನ್ನು ಕೋರ್ಟಿನಿಂದ ಪಡೆದು ಮಣ್ಣಿನ ಮಗನಾಗಿ ಹಾಳುಭೂಮಿಯನ್ನು ಹಸಿರುಭೂಮಿಯನ್ನಾಗಿ ಪರಿವರ್ತಿಸಿದರು. ಒಕ್ಕಲುತನ ಕೃಷಿಯ ಸಂಪರ್ಕ ಅವರನ್ನು ಇನ್ನೊಂದು ಬಗೆಯ ತಪಸ್ಸಿಗೆ ಹಚ್ಚಿತ್ತು. ತುಂಡು-ಪಂಚೆಯುಟ್ಟು ನೇಗಿಲ ಯೋಗಿಯಾಗಿ ಚಿಂತೆಯನ್ನು ಮರೆಯುತ್ತಿದ್ದಂತೆ, ಆ ಜಮೀನಿನ ಮಾಲೀಕನು ಜಮೀನು ಕೃಷಿ ನಿಲ್ಲಿಸಲು ಕೋರ್ಟಿನಿಂದ ಆಜ್ಞೆಯನ್ನು ತಂದೇ ಬಿಟ್ಟ. ಮತ್ತೆ ನೆಲದ ಆಧಾರವೇ ತಪ್ಪಿದ ದಿಗ್ಭ್ರಾಂತ ಸ್ಥಿತಿಯಲ್ಲಿ ಶಾಸ್ತ್ರಿಗಳು ಜೀವಿಸುವ ಆಸೆಯನ್ನೇ ಕಳೆದುಕೊಂಡರು. ಅಂಥ ಸ್ಥಿತಿಯಲ್ಲಿ ಅವರ ಆಪ್ತರು - ಹಿತೈಷಿಗಳೆಲ್ಲ ಸೇರಿ ಭೂ ಮಾಲೀಕನೊಂದಿಗೆ ಸಂಧಾನ ಮಾಡಿಕೊಂಡಾಗ ಜಮೀನನ್ನು ಅವರು ಶಾಸ್ತ್ರಿಗಳಿಗೆ ಮಾರಲು ಒಪ್ಪಿಕೊಂಡ. ಬೆಲೆ 9500 ರೂಪಾಯಿಗಳು. ಶಾಸ್ತ್ರಿಗಳೋ ಬರಿಗೈ ಸರದಾರರು. ನಾಟಕ ಅಕಾಡೆಮಿ ಕೊಡುತ್ತಿದ್ದ 100 ರೂಪಾಯಿಗಳ ಮಾಸಿಕ ಗೌರವಧನ, ಅವರಿವರಿಂದ ಪಡೆಯುತ್ತಿದ್ದ ಕೈಗಡ ಸಾಲಗಳಲ್ಲಿಯೇ ಜೀವನಯಾಪನೆ ಮಾಡುತ್ತಿದ್ದ ಶಾಸ್ತ್ರಿಗಳ ಬಳಿ ಹಣ ಎಲ್ಲಿಂದ ಬರಬೇಕು? ಹಣವಿಲ್ಲದ್ದಕ್ಕಾಗಿ ಜಮೀನು ಕೈ ಬಿಡಬೇಕೆ? ಅಥವಾ ಜಮೀನು ಉಳಿಸಿಕೊಳ್ಳಲು ಯಾರ ಮುಂದೆ ಕೈಚಾಚಬೇಕು?

ಶಾಸ್ತ್ರಿಗಳಿಗೆ ನೆನಪಾದದ್ದು ಎರಡು ಬಾರಿ ನಾಟಕ ಕಂಪನಿ ನೆಲ ಕಚ್ಚಿದಾಗ ಅದನ್ನು ಮೇಲಕ್ಕೆತ್ತಲು ನೆರವು ನೀಡಿದ ಮಾಧವ ಪೈಗಳದು. ಆದರೆ ಇಲ್ಲಿ ಯಾರಿದ್ದಾರೆ? ತಟ್ಟನೆ ನೆನಪಾದದ್ದು

ಗಣೇಶ ಹೆಗಡೆ ದೊಡ್ಮನೆಯವರು. ಈ ಜಮೀನು ಗೇಣಿಗೆ ಕೊಡಿಸಿ ಸಹಾಯ ಮಾಡಿದ್ದೂ ಅವರೇ. ಅವರಿಗೆ ವಿನಂತಿಸಿಕೊಂಡರೆ ಕೈ ಬಿಡಲಿಕ್ಕಿಲ್ಲ ಎಂಬ ಭರವಸೆಯೊಂದಿಗೆ ಅವರನ್ನು ಕಂಡರು. ನಂಬಿಕೆ ಹುಸಿ ಹೋಗಲಿಲ್ಲ. ಹೆಗಡೆಯವರು ತಮ್ಮ ಕೆಲವು ಸ್ನೇಹಿತರನ್ನು ಕರೆದು ಮಾತನಾಡಿದರು. ಅವರ ಹಿರಿತನದಲ್ಲಿಯೇ 'ಸೀತಾರಾಮಶಾಸ್ತ್ರಿ ವಿಶ್ವಸ್ಥ ನಿಧಿ ಸಮಿತಿ' ರಚನೆಯಾಯಿತು. 'ನೂರು ರೂಪಾಯಿಗಳ ನೂರು ಷೇರುಗಳನ್ನು ಕೊಟ್ಟು ಹತ್ತು ಸಾವಿರ ಸಂಗ್ರಹಿಸಿ ಶಾಸ್ತ್ರಿಗಳಿಗೆ ಕೊಡುವದು, ಅದರಿಂದ ಶಾಸ್ತ್ರಿಗಳು ಜಮೀನು ಖರೀದಿಸುವುದು, ಪ್ರತಿವರ್ಷ ಹತ್ತು ಜನರಿಗೆ ಷೇರು ಹಣ ವಾಪಸ್ ಮಾಡುವುದು' - ಈ ಗ್ರಹಿಕೆಯ ಅಡಿಯಲ್ಲಿ ಹಣ ಸಂಗ್ರಹವಾಯಿತು. ಶಾಸ್ತ್ರಿಗಳಿಗೆ ಜಮೀನು ದಕ್ಕಿತು.

ಜಮೀನು ಕೃಷಿ ಮಾಡುತ್ತಿರುವಾಗಲೂ ನಾಟಕದ ಗೀಳು ಬಿಡಲಿಲ್ಲ. ಹಳ್ಳಿಯ ತರುಣರನ್ನು ಒಂದುಗೂಡಿಸಿ ನಾಟಕದ ತರಬೇತಿ ನೀಡಿ ನಾಟಕ ಆಡಿಸುತ್ತಿದ್ದರು. ತಾವೂ ಅಭಿನಯಿಸುತ್ತಿದ್ದರು. 'ಪನ್ನಾದಾಸಿ', 'ಟಿಪ್ಪೂ ಸುಲ್ತಾನ' ಅನೇಕ ಪ್ರಯೋಗ ಕಂಡವು. ಆ ಹುರುಪಿನಲ್ಲೇ ಸಿದ್ದಾಪುರದಲ್ಲಿ 1974ರಲ್ಲಿ 'ಜಯ ಕರ್ನಾಟಕ ನಾಟಕ ಸಂಘ'ವನ್ನು ಪುನರುಜ್ಜೀವನಗೊಳಿಸುವ ಸಾಹಸಕ್ಕೆ ಇಳಿದರು. ಸ್ಥಳೀಯ ಉತ್ಸಾಹಿ ಯುವಕರನ್ನು ಬಳಸಿಕೊಂಡು ನಾಟಕಗಳನ್ನು ಆಡಿದರು. ಆದರೆ ಹಣ ಸಂಪಾದನೆ ಮುಖ್ಯವಾಗಿರಲಿಲ್ಲ. ಕಲಾರಾಧನೆಯಷ್ಟೇ ಅವರ ಗುರಿಯಾಗಿತ್ತು.

ಆವರೆಗೆ ದಿನವೂ ವ್ಯಾಯಾಮ ಮಾಡುತ್ತ ಸದೃಢರಾಗಿಯೇ ಉಳಿದಿದ್ದ ಶಾಸ್ತ್ರಿಗಳು ಈಗ ದೈಹಿಕ ಅನಾರೋಗ್ಯ ಹಾಗೂ ಆರ್ಥಿಕ ದುಸ್ಥಿತಿಯಿಂದ ಉಂಟಾದ ಮಾನಸಿಕ ಒತ್ತಡಗಳಿಂದ ಬಳಲಿದ್ದರು. ರಾತ್ರಿಯೆಲ್ಲ ನಿದ್ದೆ ಬಾರದೇ ಹೊರಳಾಡುತ್ತ 'ಹೇ ಯಮನೇ, ಯಾವಾಗ ಬರುತ್ತೀಯಾ? ನಾನೇನು ಅಪರಾಧ ಮಾಡಿದ್ದೇನೆಂದು ನನಗೆ ಈ ಶಿಕ್ಷೆ...?' ಎಂದು ನಾಟಕೀಯವಾಗಿಯೇ ಉದ್ಗಾರ ತೆಗೆಯುತ್ತಿದ್ದರು.

ಅಂತಹ ಸ್ಥಿತಿಯಲ್ಲಿಯೂ 'ನಾಟಕ' ಎಂದರೆ ಸಾಕು, ಶಾಸ್ತ್ರಿಗಳಿಗೆ ತಾರುಣ್ಯ ಚಿಗುರುತ್ತಿತ್ತು. 1979ರಲ್ಲಿ ಕಾರ್ಗಿಲ್‌ನಲ್ಲಿ ಬಯಲು ರಂಗಮಂದಿರ ಉದ್ಘಾಟನೆಗೆ ಅವರನ್ನು ಆಮಂತ್ರಿಸಲಾಗಿತ್ತು. ಉದ್ಘಾಟನಾ ಭಾಷಣ ಮಾಡುವಾಗ ಅವರು ಹೇಳಿದರು - 'ಹಳ್ಳಿಗಳಲ್ಲಿ ರಂಗಮಂದಿರದ ಕೊರತೆಯಿದೆ. ಅಲ್ಲಲ್ಲಿ ರಂಗಮಂದಿರಗಳಾದರೆ ಕಲೆಗೆ -ಕಲಾವಿದರಿಗೆ ಪ್ರೋತ್ಸಾಹ ದೊರೆಯುತ್ತದೆ. ಇಂದು ನೀವು ಮಾಡಿರುವ ಕಾರ್ಯ ಶ್ಲಾಘನೀಯ, ಈಗಲೂ ನನಗೆ ರಂಗಭೂಮಿಯ ಅಭಿಮಾನ ಕಡಿಮೆಯಾಗಿಲ್ಲ. ದೇಹಕ್ಕೆ ಮುಪ್ಪು ಬಂದರೂ ಉತ್ಸಾಹಕ್ಕೆ ಮುಪ್ಪು ಬಂದಿಲ್ಲ'... ಈ ಮಾತು ಕೇಳಿದ ಕಾರ್ಗಿಲ್‌ನ ಜನರು ಶಾಸ್ತ್ರಿಗಳು ಅಂದೇ ಆ ರಂಗಭೂಮಿಯಲ್ಲಿ 'ಟಿಪ್ಪು ಸುಲ್ತಾನ್' ಏಕಪಾತ್ರಾಭಿನಯ ನಡೆಸಿಕೊಡಬೇಕೆಂದು ಕೋರಿಕೆ ಮುಂದಿಟ್ಟರು. ಶಾಸ್ತ್ರಿಗಳು ಒಪ್ಪಿದರು.

ಸಿದ್ಧಾಪುರದಿಂದ ಅಗತ್ಯವಾದ ಉಡುಪು -ಸಾಮಗ್ರಿಗಳನ್ನು ತರಿಸಿ 'ಟಿಪ್ಪೂ ಸುಲ್ತಾನ್' ಪಾತ್ರವನ್ನು ಅದ್ಭುತವಾಗಿ ಅಭಿನಯಿಸಿದರು.

ಶಾಸ್ತ್ರಿಗಳ ಜೀವನಯಾಪನೆ ಹಾಗೂ ಹೀಗೂ ಸಾಗಿತ್ತು. ಆರೋಗ್ಯ ಕ್ಷೀಣಿಸುತ್ತಲೇ ಇತ್ತು. ಇದ್ದಕ್ಕಿದ್ದಂತೆ ಒಂದು ದಿನ ಶಾಸ್ತ್ರಿಗಳು ತಮ್ಮ ಅಣ್ಣನ ಮನೆಗೆ ಹೋಗಿ ಎಂಟು ದಿನಗಳು ವಿಶ್ರಾಂತಿ ಪಡೆದುಬರುವುದಾಗಿ ಹೇಳಿ, ಸಾಗರದ ಬಳಿಯ 'ಬೇಡರಕೊಪ್ಪ' ಎಂಬಲ್ಲಿಗೆ ಹೋದರು. 3 ದಿನ ಕಳೆದಿತ್ತು ಅಷ್ಟೆ. ಅಂದು 1985ರ ಮೇ 16ನೇ ತಾರೀಕು. ಸಾಗರದಿಂದ ಸುದ್ದಿ ಬಂತು - 'ಶಾಸ್ತ್ರಿಗಳಿಗೆ ಹೃದಯಾಘಾತವಾಗಿದೆ. ಕೂಡಲೇ ಬನ್ನಿ' ಎಂದು. ಬಂಧುಗಳೆಲ್ಲ ಅಲ್ಲಿಗೆ ಹೋಗುವ ಮುನ್ನವೇ ಶಾಸ್ತ್ರಿಗಳು ವಿಧಿವಶರಾಗಿದ್ದರು. ಕನ್ನಡ ರಂಗಭೂಮಿಯ ಉಜ್ವಲ ದೀಪವೊಂದು ಆರಿಹೋಗಿತ್ತು.

## ಉಪಸಂಹಾರ

ಸೀತಾರಾಮಶಾಸ್ತ್ರಿಗಳು 8 ನಾಟಕಗಳನ್ನು ಬರೆದಿದ್ದಾರೆ. ಅವುಗಳಲ್ಲಿ 'ಪುತ್ರಾಪೇಕ್ಷೆ' ಮತ್ತು ನಾಟ್ಯಾಚಾರ್ಯ 1958ರಲ್ಲಿ ಪ್ರಕಟವಾಗಿದೆ. 'ಟಿಪ್ಪು ಸುಲ್ತಾನ್', 'ವರದಕ್ಷಿಣೆ', 'ಪನ್ನಾದಾಸಿ' ಸಂದೇಹ ಸಾಮ್ರಾಜ್ಯ - ಮುಂತಾದ ನಾಟಕಗಳು ಸಾಕಷ್ಟು ಪ್ರಯೋಗಗಳನ್ನು ಕಂಡರೂ ಅಚ್ಚಾಗದೇ ಹಸ್ತಪ್ರತಿಯಲ್ಲಿಯೇ ಉಳಿದಿವೆ. ರಂಗಭೂಮಿಯಲ್ಲಿ ಪ್ರಯೋಗ ಮಾಡುವ ಸಾಧ್ಯತೆಗಳನ್ನು ಗಮನದಲ್ಲಿರಿಸಿಕೊಂಡು ಬರೆದ ಈ ನಾಟಕಗಳ ಸಂಭಾಷಣೆಯ ಸಾಹಿತ್ಯಕ ಗುಣ, ಅವುಗಳ ಹಿಂದಿನ ಸಾಮಾಜಿಕ - ತಾತ್ವಿಕ ಕಾಳಜಿ ಗಮನಾರ್ಹವಾದದ್ದು. ಆದರೆ ಅವುಗಳು ಪ್ರಕಾಶಕರಿಲ್ಲದೆ ಪೆಟ್ಟಿಗೆಯಲ್ಲಿಯೇ ಇವೆ. ಅವುಗಳನ್ನು ಪ್ರಕಟಿಸಿ ಜನತೆಯ ಕೈಯಲ್ಲಿ ಇಡಲಾಗಲಿಲ್ಲವಲ್ಲ ಎಂಬ ಕೊರಗು ಶಾಸ್ತ್ರಿಗಳಿಗೆ ಕೊನೆಯವರೆಗೂ ಉಳಿದಿತ್ತು. ಬಾಳಿನ ಕೊನೆಯ ದಿನಗಳಲ್ಲಿ ತಮ್ಮ ಜೀವನದ ಕಷ್ಟ-ಸುಖಗಳನ್ನು ಮೆಲುಕು ಹಾಕುವಾಗ, ತಮ್ಮನ್ನು - ತಮ್ಮ ನಾಟಕ ಸಂಘವನ್ನು ಪೋಷಿಸಿದ ಕನ್ನಡಿಗರ ಔದಾರ್ಯ - ಅಭಿಮಾನಗಳನ್ನು ಕೃತಜ್ಞತೆಯಿಂದ ಸ್ಮರಿಸಿಕೊಂಡು ಗದ್ಗದಿತರಾಗುತ್ತಿದ್ದರು.

ಆದರೆ, ಕನ್ನಡ ರಂಗಭೂಮಿಗೆ ತಮ್ಮ ಜೀವಿತವನ್ನೇ ಒಪ್ಪಿಸಿಕೊಂಡು, ಶ್ರೇಷ್ಠ ನಟರಾಗಿ, ನಾಟಕಕಾರರಾಗಿ, ವೃತ್ತಿ ರಂಗಭೂಮಿಯ ಅಭಿವೃದ್ಧಿಗಾಗಿ ಕೊನೆಯ ಉಸಿರಿನವರೆಗೂ ದುಡಿದ ಈ ಹಿರಿಯ ಕಲಾವಿದರಿಗೆ ಯೋಗ್ಯ ಸ್ಮಾರಕವೊಂದು ನಿರ್ಮಾಣವಾಗಬೇಕಾಗಿದೆ. ಶಾಸ್ತ್ರಿಗಳ ಅಣ್ಣನ ಮಗ ಶಾಸ್ತ್ರಿಗಳ ಗರಡಿಯಲ್ಲಿಯೇ ಪಳಗಿದ. ಹುಲಿಮನೆ ಶ್ರೀಧರ ಹೆಗಡೆಯವರು ಸಿದ್ಧಾಪುರದಲ್ಲಿ ದಿ. ಸೀತಾರಾಮಶಾಸ್ತ್ರಿ ಹುಲಿಮನೆ ಸ್ಮಾರಕ ಪ್ರತಿಷ್ಠಾನ (ರಿ) ವನ್ನು 1986ರಲ್ಲಿ ಸ್ಥಾಪಿಸಿ, ರಂಗತರಬೇತಿ ಶಿಬಿರಗಳನ್ನು ನಡೆಸುತ್ತ, ನಾಟಕಗಳನ್ನು ಆಡಿಸುತ್ತ, ಈ ಹಿರಿಯ

ಕಲಾವಿದರ ನೆನಪನ್ನು ಜಾಗೃತವಾಗಿಡುವ ಪ್ರಯತ್ನವನ್ನು ಮಾಡುತ್ತಿದ್ದಾರೆ. ಈ ಪ್ರತಿಷ್ಠಾನದ ಮೂಲಕವೇ ಶಾಸ್ತ್ರಿಗಳ ಎಲ್ಲ ನಾಟಕಗಳನ್ನು ಪ್ರಕಟಿಸುವ ಉದ್ದೇಶವನ್ನು ಇಟ್ಟುಕೊಂಡಿದ್ದಾರೆ. ಪ್ರತಿಷ್ಠಾನದ ರಂಗಚಟುವಟಿಕೆಗಳನ್ನು ವಿಸ್ತರಿಸಿ, ರಂಗಭೂಮಿಗೆ ಸಂಬಂಧಿಸಿದಂತೆ ಒಂದು ನಾಟಕ ಶಾಲೆ, ಕಾರ್ಯಾಗಾರ, ಚರ್ಚೆ, ಉಪನ್ಯಾಸ, ವಿಚಾರ ಸಂಕಿರಣ, ಪುಸ್ತಕ ಪ್ರಕಟಣೆ - ಮುಂತಾದ ಕಾರ್ಯಗಳನ್ನು ನಿರಂತರವಾಗಿ ನಡೆಸಿಕೊಂಡು ಹೋಗಲು ಸಾಧ್ಯವಾಗುವಂತೆ ಒಂದು ಕಾಯ್ದೆ ನಿಧಿ ಸಂಗ್ರಹವಾಗಬೇಕು, ಶಾಸ್ತ್ರಿಗಳಿಗೆ ಸ್ಮಾರಕವಾಗಿ ಒಂದು ಸುಸಜ್ಜಿತ ರಂಗಮಂದಿರ ನಿರ್ಮಾಣವಾಗಬೇಕು ಎಂಬ ಆಶೋತ್ತರಗಳನ್ನು ಇರಿಸಿಕೊಂಡಿದ್ದಾರೆ. ಆದರೆ ಸಾರ್ವಜನಿಕರ ನೆರವಿಲ್ಲದೆ, ಸ್ಥಾನಿಕ ಸೇವಾ ಸಂಸ್ಥೆಗಳು - ಅಕಾಡೆಮಿಗಳು - ಸರಕಾರ ಇವುಗಳ ನೆರವಿಲ್ಲದೆ ಇವೆಲ್ಲ ಕಾರ್ಯರೂಪಕ್ಕೆ ಬರುವದು ಸಾಧ್ಯವಿಲ್ಲ. 2005ನೇ ಇಸವಿಗೆ ಶಾಸ್ತ್ರಿಗಳ ಜನ್ಮಶತಾಬ್ದಿ. ಆ ವೇಳೆಗಾದರೂ ದಿವಂಗತ ಸೀತಾರಾಮಶಾಸ್ತ್ರಿಗಳ ದಿವ್ಯ ಸ್ಮರಣೆಗೆ ಏನಾದರೂ ಗಟ್ಟಿಯಾದ ಸ್ಮಾರಕ ನಿರ್ಮಾಣವಾದೀತೇ? - ಕಾದು ನೋಡಬೇಕು!

• • •